ಮೇ 25, 2025

40ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1986

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ಹೋರಾಟಗಾರರಿಗೇ ಹೊಡೆಯುತ್ತಾರೆ ಸಿಪಿಐ ಶಂಕರ್ ನಾಯಕ್!



# ಬಿಡದಿಯಲ್ಲಿ 'ಮೂಕಹಕ್ಕಿ' ನಿಗೂಢ ಸಾವು!

ಇದು ಕೊಲೆಯಲ್ಲ ರೈಲು ಅಪಘಾತ!



## ಹಾಡುಹಗಲೇ ಕೊಲೆಯಾದ ರೌಡಿ ಸಂತೋಷ್!

## ಬೆಳ್ತಂಗಡಿ ಬೆಡಗಿಯ ಆತ್ಮಹತ್ಯೆ!



## ಕೆಎಂಎಫ್‌ಗೆ ಎಂಟ್ರಿ ಕೊಟ್ಟ ಡಿ.ಕೆ.ಸುರೇಶ್



## ಅಫ್ಟ್‌ನಲ್ಲೇ ಹಾಕಿಸಿಕೊಂಡ್ರು ಮೊಬೈಲ್ ನಂ.






## ಖತರ್ನಾಕ್ ಆಂಟಿಯ ಹೆಣ ಹಾಕಿದ ಯುವಕ!

# ಅಂದು ಹೆಚ್‌ಡಿಡಿ ಕುಟುಂಬ - ಇಂದು ಡಿಕೆಶಿ ಕುಟುಂಬ!
# ಕೆಎಂಎಫ್‌ಗೆ ಎಂಟ್ರಿ ಕೊಟ್ಟ ಡಿ.ಕೆ. ಸುರೇಶ್!!



✍ ಶಾಂತರಾಜು ಜಿ. ಕಲ್ಲಹಳ್ಳಿ

ಕಳೆದ ಲೋಕಸಭಾ ಚುನಾವಣೆ ಸೋಲಿನ ಬಳಿಕ ಚುನಾವಣಾ ರಾಜಕೀಯದಿಂದ ವಿಶ್ರಾಂತಿ ತೆಗೆದುಕೊಂಡಿದ್ದ ಡಿ.ಕೆ. ಸುರೇಶ್ ಇದೀಗ ಬಮೂಲ್ ನಿರ್ದೇಶಕ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿ ಹೊಸ ಇನ್ನಿಂಗ್ಸ್ ಆರಂಭಿಸಿದ್ದಾರೆ. ಬಮೂಲ್ ಅಖಾಡಕ್ಕೆ ಡಿ.ಕೆ. ಶಿವಕುಮಾರ್ ಕುಟುಂಬದ ಎಂಟ್ರಿಯೊಂದಿಗೆ ಜಿಲ್ಲೆಯ ಹಾಲಿನ ರಾಜಕಾರಣ ಈಗ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ. ಲೋಕಸಭಾ ಚುನಾವಣೆಯಲ್ಲಿ ಸೋಲನುಭವಿಸಿದ ನಂತರ ಡಿ.ಕೆ. ಸುರೇಶ್ ಚುನಾವಣಾ ರಾಜಕಾರಣದಿಂದ ದೂರ ಉಳಿದಿದ್ದರು.



ಪೂಜೆ ಸಲ್ಲಿಸುತ್ತಿರುವ ಡಿ.ಕೆ. ಸುರೇಶ್

ಆದರೆ ಕಳೆದ ಕೆಲವು ತಿಂಗಳಿನಿಂದ ಡಿ.ಕೆ. ಸುರೇಶ್ ಚಿತ್ತ ಕೆಎಂಎಫ್‌ನತ್ತ ಇತ್ತು. ಡಿ.ಕೆ. ಸುರೇಶ್ ಕೆಎಂಎಫ್ ಅಧ್ಯಕ್ಷರಾಗುತ್ತಾರೆಂಬ ಚರ್ಚೆ ಜಿಲ್ಲೆಯಲ್ಲಿ ಚಾಲ್ತಿಗೆ ಬಂದಿತ್ತು. ಅದು ಈಗ ನಿಜವಾಗಿದೆ.

ನಿಯಮದಂತೆ ಹಾಲು ಒಕ್ಕೂಟದ ಚುನಾವಣೆಗೆ ಸ್ಪರ್ಧಿಸಲು ಮೊದಲು ಹಾಲು ಉತ್ಪಾದಕರಾಗಿರಬೇಕು. ತಮ್ಮ ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ಕನಿಷ್ಠ 180 ದಿನ ಹಾಲು ಪೂರೈಸಿರಬೇಕು. ಗ್ರಾಮದ ಡೈರಿ ನಿರ್ದೇಶಕರಾಗಿ ಆಯ್ಕೆಯಾಗಿ ಬಳಿಕ ಅಲ್ಲಿಂದ ಬಮೂಲ್ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಡೆಲಿಗೇಷನ್ ಫಾರಂ (ಪ್ರತಿನಿಧಿತ್ವ ಪತ್ರ) ಪಡೆದು ಸ್ಪರ್ಧೆ ಮಾಡಬೇಕು. ಬಳಿಕ ಬಮೂಲ್‌ನಿಂದ ಕೆಎಂಎಫ್‌ಗೆ ಎಂಟ್ರಿ ಪಡೆಯಬೇಕು.




ಮಾಧ್ಯಮದೊಂದಿಗೆ ಮಾತನಾಡುತ್ತಿರುವ ಡಿ.ಕೆ. ಸುರೇಶ್

ಬಳಿಕ ಬಮೂಲ್‌ಮೆದ ಕೆಎಂಎಫ್‌ಗೆ ಎಂಟ್ರಿ ಪಡೆಯ ಮಂಡಳಿಯ ನಿರ್ದೇಶಕರಾಗಿ ಆಯ್ಕೆಯಾಗಿದ್ದರು. ಆ ಮೂಲಕ ಇದೀಗ ಕನಕಪುರ ಮತ ಕ್ಷೇತ್ರದಿಂದ ಬಮೂಲ್ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

ಜುಲೈ ತಿಂಗಳಲ್ಲಿ ಕೆಎಂಎಫ್ ನೂತನ ಅಧ್ಯಕ್ಷರ ಸ್ಥಾನದ ಆಯ್ಕೆಗೆ ಸಂಬಂಧಿಸಿ ಚುನಾವಣೆ ನಡೆಯುವ ಸಾಧ್ಯತೆಯಿದೆ. ಬಮೂಲ್‌ನಲ್ಲಿ ಕಳೆದ 10 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರುಗಳೆ ಅಧಿಕಾರ ಮಾಡುತ್ತಾ ಉತ್ತಮ ಸೇವೆ ನೀಡುತ್ತಾ ಬಂದಿದ್ದಾರೆ. ಈ ನಿಟ್ಟಿನಲ್ಲಿ ಡಿ.ಕೆ. ಸುರೇಶ್‌ರ ಸ್ಪರ್ಧೆ ಮಾಡುವ ವಿಚಾರದಲ್ಲಿ ಯಾವುದೇ ಹೊಸತನಯಿಲ್ಲ. ಇಡೀ ಜಿಲ್ಲೆಯ ಬಮೂಲ್‌ನ ಮಾಜಿ ಅಧ್ಯಕ್ಷರು, ನಿರ್ದೇಶಕರ ಒತ್ತಾಯದಿಂದ ಬಮೂಲ್ ಚುನಾವಣೆಗೆ ಡಿ.ಕೆ. ಸುರೇಶ್ ಸ್ಪರ್ಧೆ ಮಾಡಿದ್ದಾರೆ ಎನ್ನಬಹುದು.


ರಾಜ್ಯ ರಾಜಕಾರಣಕ್ಕೂ, ಹಾಲಿನ ರಾಜಕಾರಣಕ್ಕೂ ಕುಟುಂಬ ರಾಜಕಾರಣಕ್ಕೂ ಸಾಕಷ್ಟು ಬೆಸುಗೆಯಿದೆ. ರಾಜ್ಯ ಸರ್ಕಾರದಲ್ಲಿ ಸಚಿವರಾಗಿ, ಮುಖ್ಯಮಂತ್ರಿಗಳಾದವರ ಕುಟುಂಬದವರೆ ಕೆಎಂಎಫ್ ಅಧ್ಯಕ್ಷಗಾದಿಗೆ ಕೂರುವುದು ವಾಡಿಕೆ ಎಂಬಂತಾಗಿದೆ. ಈ ಹಿಂದೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವರ ಅಣ್ಣ ಹೆಚ್.ಡಿ. ರೇವಣ್ಣರವರು ಕೆಎಂಎಫ್‌ನ ಅಧ್ಯಕ್ಷರಾಗಿ ಉತ್ತಮ ಆಡಳಿತ ಮಾಡಿದ ಕೀರ್ತಿ ಪಡೆದರು. ಕೆಎಂಎಫ್ ಅಧ್ಯಕ್ಷ ಸ್ಥಾನದ ಅವಧಿಯಲ್ಲಿ ಯಾವುದೇ ಕಳಂಕ ಇಲ್ಲದೆ ಅಧಿಕಾರ ಮಾಡಿದ ಖ್ಯಾತಿಯೂ ಸಹ ಅವರಿಗಿದೆ. ಇದೀಗ ಸಚಿವರಾದ ಸತೀಶ್ ಜಾರಕಿಹೊಳಿ ಅವರ ಸಹೋದರರೆಂದೇ ಬಿಂಬಿತವಾಗಿರುವ ಬಾಲಚಂದ್ರ ಜಾರಕಿಹೊಳಿರವರು ಕೆಎಂಎಫ್‌ನ ಅಧ್ಯಕ್ಷರಾಗಿದ್ದಾರೆ. ಮತ್ತೊಂದು ಟ್ರೆಂಡ್ ಆರಂಭವಾಗಿರುವುದು ಉಪಮುಖ್ಯಮಂತ್ರಿಗಳಾಗಿರುವ ಡಿ.ಕೆ. ಶಿವಕುಮಾರ್‌ರವರ ಸಹೋದರ ಮಾಜಿ ಸಂಸದ ಡಿ.ಕೆ. ಶಿವಕುಮಾರ್‌ರವರ ಸಹೋದರ ಮಾಜಿ ಸಂಸದ್ ಡಿ.ಕೆ. ಸುರೇಶ್‌ರವರು, ಕೆಎಂಎಫ್ ಅಧ್ಯಕ್ಷರಾದರೆ ಹೈನೋದ್ಯಮದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ಸಿಗುತ್ತದೆ ಎಂಬ ವಿಶ್ವಾಸ ಹಾಲಿನ ರಾಜಕಾರಣದಲ್ಲಿ ಕೇಳಿ ಬಂದಿದೆ. ಅಲ್ಲದೆ ಡಿ.ಕೆ. ಸುರೇಶ್‌ರವರು ರೈತರ ಪರ ಸದಾ ಧ್ವನಿ ಎತ್ತುವ ನಾಯಕರಾಗಿದ್ದು, ಕೊರೋನಾ ಸಂಕಷ್ಟದಲ್ಲಿ ಮೊದಲು ರೈತರ ಪರ ಸಮಸ್ಯೆಗಳಿಗೆ ನಿಂತಿದ್ದ ಏಕೈಕ ವ್ಯಕ್ತಿ. ಈ ನಿಟ್ಟಿನಲ್ಲಿ ರೈತ ಪರ ಚಿಂತಕರು ಕೆಎಂಎಫ್ ಅಧ್ಯಕ್ಷರಾದರೆ ಹೆಚ್.ಡಿ. ರೇವಣ್ಣರಂತೆ ಇವರೂ ಸಹ ಹೈನೋದ್ಯಮಕ್ಕೆ ದೊಡ್ಡ ಕೊಡುಗೆ ನೀಡುತ್ತಾರೆ ಎಂಬ ವಿಶ್ವಾಸ ರಾಜ್ಯದ ಜನತೆಗೆ ಇದೆ ಎಂಬ ಮಾತು ಕೇಳಿ ಬಂದಿದೆ.

### ಕೆಎಂಎಫ್ ಅಧ್ಯಕ್ಷರಾಗುವ ಅರ್ಹತೆ ಇದೆ - ರಾಮಲಿಂಗರೆಡ್ಡಿ

ಡಿ.ಕೆ. ಸುರೇಶ್‌ರವರು ರೈತರ ಅಪಾರ ಕಾಳಜಿ ಹೊಂದಿದ್ದಾರೆ, ಅವರು ಕೆಎಂಎಫ್ ಅಧ್ಯಕ್ಷರಾಗುವ ಅರ್ಹತೆ ಹೊಂದಿದ್ದಾರೆ ಎಂದು ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗರೆಡ್ಡಿರವರು ಅಭಿಪ್ರಾಯ ವ್ಯಕ್ತಪಡಿಸಿ, ಮಾಜಿ ಸಂಸದ ಡಿ.ಕೆ. ಸುರೇಶ್‌ರವರು ಲೋಕಸಭಾ ಸದಸ್ಯರಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿ ರೈತರಿಗೆ ಸಾಕಷ್ಟು ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದಾರೆ. ಇದೀಗ ಬಮೂಲ್ ಚುನಾವಣೆಯಲ್ಲಿ ಮಾಡಿದ್ದು ಮುಂದೆ ಕೆಎಂಎಫ್ ಅಧ್ಯಕ್ಷರಾಗುವ ಎಲ್ಲಾ ಅರ್ಹತೆ ಹೊಂದಿದ್ದಾರೆ. ಡಿ.ಕೆ. ಸುರೇಶ್‌ರವರಿಗೆ ಸರ್ಕಾರದಿಂದ ಉನ್ನತ ಹುದ್ದೆ ನೀಡುವ ವಿಶ್ವಾಸ ಇತ್ತು. ಆದರೆ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾದರೂ ಯಾವುದೇ ಅಧಿಕಾರ ನೀಡಿಲ್ಲ. ಯಾಕೆಂದರೆ ಡಿ.ಕೆ. ಸುರೇಶ್‌ರವರು ಯಾವತ್ತು ಅಧಿಕಾರ ಕೊಡಿ ಎಂದು ಸರ್ಕಾರಕ್ಕೆ ಕೇಳಿಲ್ಲ ಆಗಾಗಿ ಕೊಟ್ಟಿಲ್ಲ, ಒಂದು ವೇಳೆ ಕೇಳಿದ್ದರೆ ಖಂಡಿತ ಅವರಿಗೆ ಅಧಿಕಾರ ಸಿಗುತ್ತಿತ್ತು.



ಡಿ.ಕೆ. ಸುರೇಶ್ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ



ಬಮೂಲ್ ನಿರ್ದೇಶಕ ಸ್ಥಾನಕ್ಕೆ ನಾಮಪತ್ರ ಸಲ್ಲಿಸುತ್ತಿರುವುದು

ಅವರಿಗೆ ಅಧಿಕಾರದ ಆಸೆ ಇರಲಿಲ್ಲ. ಕಾಂಗ್ರೆಸ್‌ನಿಂದ 136 ಶಾಸಕರು ಗೆದ್ದಿದ್ದಾರೆ. ಹಿರಿಯರು ಇದ್ದಾರೆ ಅವರಿಗೆ ಅಧಿಕಾರ ಕೊಡಿ ಎಲ್ಲಾ ನಾವೇ ಏಕೆ ಪಡೆಯಬೇಕು ಎಂಬುದು ಡಿ.ಕೆ. ಸುರೇಶ್‌ರವರ ಆಶಯವಾಗಿದೆ. ಈ ನಿಟ್ಟಿನಲ್ಲಿ ಅವರಿಗೆ ಜನರ ಸೇವೆಗೆ ಅಗತ್ಯ ಅನುಕೂಲ ಮಾಡಿಕೊಡಲಾಗುತ್ತಿದೆ ಎನ್ನುತ್ತಾರೆ.

### ಡಿಕೆಶಿ ಮನವೊಲಿಸಿ ನಾಮಪತ್ರ ಹಾಕಿಸಿದ್ದೇವೆ - ಬಾಲಕೃಷ್ಣ

ಡಿ.ಕೆ. ಸುರೇಶ್‌ರವರು ಬಮೂಲ್ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧೆ ಮಾಡುವ ವಿಚಾರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ಒಪ್ಪಿರಲಿಲ್ಲ. ಆದರೆ ನಾವೆಲ್ಲ ರಾತ್ರಿ ಹಗಲು ಡಿ.ಕೆ. ಸುರೇಶ್‌ರವರು ಬಮೂಲ್ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧೆ ಮಾಡಬೇಕು ಎಂದು ಡಿ.ಕೆ. ಶಿವಕುಮಾರ್‌ರವರ ಮನವೊಲಿಸಲು ಒತ್ತಡ ಹಾಕಿ ಒಪ್ಪಿಸಿದ್ದೇವೆ. ಡಿ.ಕೆ. ಸುರೇಶ್ ರವರು ಕೆಎಂಎಫ್ ಅಧ್ಯಕ್ಷರಾದರೆ, ಈಗಾಗಲೆ ರೈತರ ಪರ ಕಾಳಜಿಯಿರುವ ಇವರು ಉತ್ತರ ಕರ್ನಾಟಕದಲ್ಲೂ ಹಾನೋದ್ಯಮಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವ ಕೆಲಸ ಮಾಡುತ್ತಾರೆ. ಜೊತೆಗೆ ಹೈನೋದ್ಯಮವನ್ನೇ ಅವಲಂಭಿಸಿಕೊಂಡಿರುವ ದಕ್ಷಿಣ ಕರ್ನಾಟಕದ ರೈತರಿಗೆ ಹೆಚ್ಚಿನ ಅನುಕೂಲವನ್ನು ಮಾಡಿಕೊಡುತ್ತಾರೆ ಎಂಬ ವಿಶ್ವಾಸವಿದೆ ಎಂದು ಮಾಗಡಿ ಶಾಸಕ ಹೆಚ್.ಸಿ. ಬಾಲಕೃಷ್ಣ ಅಭಿಪ್ರಾಯ ಪಡುತ್ತಾರೆ.



ಅವಿರೋಧ ಆಯ್ಕೆಯಾದ ಡಿ.ಕೆ. ಸುರೇಶ್‌ಗೆ ಅಭಿನಂದಿಸುತ್ತಿರುವುದು

### ನಿರ್ದೇಶಕ ಸ್ಥಾನಕ್ಕೆ ಅವಿರೋಧ ಆಯ್ಕೆಯಾದ ಡಿ.ಕೆ. ಸುರೇಶ್

ಡಿ.ಕೆ. ಸುರೇಶ್‌ರವರು ಕನಕಪುರ ಮತಕ್ಷೇತ್ರದಿಂದ ಬಮೂಲ್ ನಿರ್ದೇಶಕ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಇವರಿಗೆ ಚುನಾವಣಾಧಿಕಾರಿಗಳು ಡಿ.ಕೆ. ಸುರೇಶ್‌ರವರು ಅವಿರೋಧವಾಗಿ ನಿರ್ದೇಶಕರಾಗಿ ಆಯ್ಕೆಗೊಂಡಿದ್ದಾರೆಂದು ಘೋಷಣೆ ಮಾಡಿದ್ದಾರೆ. ಈಗಾಗಲೇ ಡಿ.ಕೆ. ಸುರೇಶ್‌ರವರನ್ನು ಮತ್ತೆ ರಾಜಕೀಯವಾಗಿ ಬಲಗೊಳಿಸಲು ಡಿ.ಕೆ. ಶಿವಕುಮಾರ್ ರವರು ರಣತಂತ್ರ ರೂಪಿಸಿ ಮೊದಲಿಗೆ ಚನ್ನಪಟ್ಟಣ ಉಪಚುನಾವಣೆಯಲ್ಲಿ ಇವರ ಹೆಸರು ಮುಂದೆಯಿತ್ತು. ನಂತರ ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲೂ ಇವರ ಹೆಸರು ಕೇಳಿ ಬಂದಿತ್ತು. ಆದರೆ ಇದ್ದಕ್ಕಿದ್ದಂತೆ ಬಮೂಲ್ ಕ್ಷೇತ್ರಕ್ಕೆ



ಪೂರ್ವಭಾವಿ ಸಭೆ ನಡೆಸಿದ್ದ ಡಿ.ಕೆ. ಸುರೇಶ್

ಡಿ.ಕೆ. ಸುರೇಶ್‌ರವರ ಪ್ರವೇಶ ಅಚ್ಚರಿಗೆ ಕಾರಣವಾಗಿದೆ. ನಿರ್ದೇಶಕರಾಗಿ ಆಯ್ಕೆಗೊಂಡಿರುವ ಡಿ.ಕೆ. ಸುರೇಶ್ ರವರು ಕೆಎಂಎಫ್ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಆದರೆ ಸಿದ್ದರಾಮಯ್ಯರ ಬಣದ ಭೀಮಾ ನಾಯಕ್ ಕೂಡ ಈ ಹುದ್ದೆಗೆ ಸ್ಪರ್ಧಿಯಲ್ಲಿದ್ದಾರೆಂಬ ವಿಷಯವೂ ಒಂದೆಡೆಯಿದೆ. ಬಳ್ಳಾರಿಯಿಂದ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದು, ಈ ವಿಚಾರದಲ್ಲೂ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಬಣದ ನಡುವೆ ಜಿದ್ದಾಜಿದ್ದಿ ಎದುರಾಗುವ ಸಾಧ್ಯತೆಗಳಿವೆ. ಏನೇ ಆದರೂ ಡಿ.ಕೆ. ಸುರೇಶ್‌ರವರು ಕೆಎಂಎಫ್ ಅಧ್ಯಕ್ಷರಾಗುವುದು ಬಹುತೇಕ ಖಚಿತ ಎಂದು ರಾಮನಗರ ಜಿಲ್ಲೆಯ ಹಾಗೂ ಹೊರ ಜಿಲ್ಲೆಯ ಪ್ರಮುಖ ಮುಖಂಡರ ಅಭಿಪ್ರಾಯವಾಗಿದೆ.

# ಬಿಡದಿಯಲ್ಲಿ ಮೂಕ ಹಕ್ಕಿಯ ನಿಗೂಢ ಸಾವು!




**ರಾಮನಗರ ಜಿಲ್ಲೆ ಮಾಗಡಿ ತಾಲೂಕು, ಬಿಡದಿ ಬಳಿಯ ಭದ್ರಾಪುರ ಗ್ರಾಮದ ಹಕ್ಕಿ ಪಿಕ್ಕಿ ಸಮುದಾಯದ 14 ವರ್ಷದ ಕಿವುಡ ಮತ್ತು ಮೂಕ ಬಾಲಕಿಯ ನಿಗೂಢ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯದಾದ್ಯಂತ ಕೋಲಾಹಲವೇ ಎದ್ದಿತ್ತು! ಬಾಲಕಿಯ ರೇಪ್ ಮರ್ಡರ್ ಆಗಿದೆ ಅಂತಲೇ ನಾಡಿನ ವಿವಿಧ ಮಾಧ್ಯಮಗಳು ಬ್ರೇಕಿಂಗ್ ನ್ಯೂಸ್ ಹೊಡೆದಿದ್ದು, ತನಿಖೆ ಕೈಗೊಂಡಿದ್ದ ಬಿಡದಿ ಪೊಲೀಸರು ನಾಲ್ಕರಿಂದ ಐದು ಮಂದಿ ಶಂಕಿತರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದರು ಕೂಡ! ಮೃತ ಬಾಲಕಿಯ ಶವ ವಿಚಿತ್ರವಾದ ಭಂಗಿಯಲ್ಲಿ ಹಾಗೂ ಅರೆ ನಗ್ನವಾಗಿ ರೈಲ್ವೆ ಹಳಿಯ ಹತ್ತಿರದಲ್ಲಿ ಬಿದ್ದಿದ್ದರಿಂದಲೇ ಆಕೆಯದ್ದು ರೇಪ್ ಮರ್ಡರ್ ಇರಬಹುದು ಎಂಬ ಅನುಮಾನ ವ್ಯಕ್ತವಾಗಿತ್ತು! ಜೊತೆಗೆ, ಇದೊಂದು ರೈಲ್ವೆ ಆಕ್ಸಿಡೆಂಟ್ ಇರಬಹುದಾ... ಎಂಬ ದಿಕ್ಕಿನಲ್ಲೂ ಬಿಡದಿ ಪೊಲೀಸರು ತನಿಖೆ ನಡೆಸುತ್ತಿದ್ದರು!! ಫೈನಲಿ...**

ಜಸ್ಟಿಸ್ ಫಾರ್ ಖುಷಿ!

ಇದು ಕಳೆದೊಂದು ವಾರದಿಂದ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗಿರುವ ಹಾಗೂ ರಾಜ್ಯದಾದ್ಯಂತ ಹೊತ್ತಿ ಉರಿಯುತ್ತಿರುವ ಸ್ಫೋಟಕ ಸುದ್ದಿ! ಮೂಕ ಬಾಲಕಿಯನ್ನು ಯಾರೋ ರೇಪ್ ಮಾಡಿ ಕೊಂದು ಬಿಟ್ಟಿದ್ದಾರೆ! ಆರೋಪಿಗಳ ಪತ್ತೆ ಮಾಡಿ ಉಗ್ರ ಶಿಕ್ಷೆಗೆ ಗುರಿಪಡಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿತ್ತು. ಈ ಹಿನ್ನಲೆಯಲ್ಲಿ ಕೆಲವೊಂದು ಸಂಘಟಗಳು, ಹೋರಾಟಗಾರರು ಬಿಡದಿ ಪೊಲೀಸ್ ಠಾಣೆಯ ಬಳಿ ಪ್ರತಿಭಟನೆ ನಡೆಸಿದ್ದವು.


ರೈಲ್ವೆ ಹಳಿ ಸಮೀಪ ಹೀಗೆ ಬಿದ್ದಿತ್ತು ಖುಷಿಯ ಶವ

ಆ ಸಂದರ್ಭದಲ್ಲಿ ಬಿಡದಿ ಸಿಪಿಐ ಶಂಕರ್ ನಾಯಕ್ ಮತ್ತವರ ಸಿಬ್ಬಂದಿ ಹೋರಾಟಗಾರರ ಜೊತೆ ವಾಗ್ವಾದ ನಡೆಸಿ ಕೈ ಕೈ ಮಿಲಾಯಿಸಿದ್ದ ದುರ್ಘಟನೆಯೂ ನಡೆದಿತ್ತು. ಆದರೆ, ಇದೀಗ ಬಂದಿರುವ ಮಾಹಿತಿಯ ಪ್ರಕಾರ, ಮೂಕ ಬಾಲಕಿ ಖುಷಿಯ ಮೇಲೆ ಯಾವ ಅತ್ಯಾಚಾರವೂ ನಡೆದಿಲ್ಲ! ಕೊಲೆಯೂ ಆಗಿಲ್ಲ!! ಹಾಗಾದ್ರೆ ಮತ್ತೇನಾಗಿದೆ?? ಆಕೆ ರೈಲ್ವೆ ಕ್ರಾಸ್ ದಾಟುವಾಗ ಅಕಸ್ಮಾತ್ ರೈಲು ಗುದ್ದಿಕೊಂಡು ಹೋಗಿದ್ದು, ರೈಲ್ವೆ ಅಪಘಾತ ದಿಂದಲೇ ಬಾಲಕಿ ಮೃತಪಟ್ಟಿದ್ದಾಳೆ!!!


ಖುಷಿಯ ತಾಯಿ ಶೀಲ

### ಘಟನೆಯ ಸವಿವರ

ಬೆಂಗಳೂರು ಸಿಟಿಯ ಹೊರ ವಲಯದಲ್ಲಿರುವ ಬಿಡದಿಯಲ್ಲಿ ಕಿವುಡ ಮತ್ತು ಮೂಕ ಬಾಲಕಿ ಖುಷಿ(15) ನಿಗೂಢವಾಗಿ ಸಾವನ್ನಪ್ಪಿದ್ದು, ಅವಳ ಅರೆ ನಗ್ನ ಶವವು ರೈಲ್ವೆ ಕ್ರಾಸ್ ಬಳಿ ಅಸ್ತವ್ಯಸ್ತವಾಗಿ ಬಿದ್ದಿತ್ತು. ಇದರಿಂದ ಆಕೆಯ ಮೇಲೆ ಬರ್ಬರ ಅತ್ಯಾಚಾರವಾಗಿ ನಂತರ ಕೊಲೆ ಮಾಡಿರಬಹುದು ಎಂಬ ಸುದ್ದಿ ಸ್ಫೋಟವಾಗಿತ್ತು.


ಡಿಕೆಶಿ ಮೃತಳ ತಾಯಿಗೆ ಪರಿಹಾರ ನೀಡುತ್ತಿರುವುದು

ಬೆಂಗಳೂರು ನಗರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ರೆಸಿಡೆನ್ಸಿಯಲ್ ಸ್ಕೂಲ್ ಹಾಗೂ ಹಾಸ್ಟೆಲ್‌ನಲ್ಲಿ 8ನೇ ತರಗತಿ ವ್ಯಾಸಂಗ ಮಾಡಿಕೊಂಡು ನೆಲೆಸಿದ್ದ ಬಾಲಕಿ ಖುಷಿ (14) ಇತ್ತೀಚಿಗೆ ಬೇಸಿಗೆ ರಜೆಗೆಂದು ತನ್ನ ಹುಟ್ಟೂರು ಭದ್ರಾಪುರಕ್ಕೆ ಮರಳಿದ್ದಳು. ಅವತ್ತು ಹನ್ನೊಂದನೇ ತಾರೀಖು ಗ್ರಾಮದಲ್ಲಿ ಒಬ್ಬರ ಮನೆಯಲ್ಲಿ ಹುಟ್ಟುಹಬ್ಬವಿದ್ದು, ರಾತ್ರಿ ಅದರಲ್ಲಿ ಭಾಗವಹಿಸಿದ್ದಾಗ ಬಾಲಕಿ ದಿಢೀರ್ ನಾಪತ್ತೆಯಾಗಿದ್ದಳು! ರಾತ್ರಿ ಹತ್ತು ಗಂಟೆಯಾದರೂ ಮನೆಗೆ ಹಿಂತಿರುಗದಿದ್ದರಿಂದ ಅವಳ ತಾಯಿ ಶೀಲಾ (ತಂದೆ ಯಲ್ಲಪ್ಪ ತೀರಿ ಕೊಂಡಿದ್ದಾರೆ) ಗಾಭರಿಯಾಗಿ ಬಿಡದಿ ಪೊಲೀಸ್ ಠಾಣೆಗೆ ತೆರಳಿ ಮಗಳು ಮಿಸ್ಸಿಂಗ್ ಆಗಿರುವ ಬಗ್ಗೆ ವಿವರಿಸಿ ದೂರು ನೀಡಿದ್ದರು.

### ಬೆಳಿಗ್ಗೆ ಶವ ದರ್ಶನ

ಅದರ ಮಾರನೇ ದಿವಸ ಬೆಳಿಗ್ಗೆ ರೈಲ್ವೆ ಕ್ರಾಸ್ ಬಳಿಯಲ್ಲಿ ಖುಷಿಯ ಶವ ಅರೆನಗ್ನವಾಗಿ ಬಿದ್ದಿರುವುದು ಗೋಚರಿಸಿತ್ತಲ್ಲ! ಅದನ್ನು ನೋಡಿ ಕಿವುಡ ಮತ್ತು ಮೂಕ ಹುಡುಗಿಯ ದುರಂತ ಸಾವನ್ನು ಕಂಡು ಊರಿಗೆ ಊರೇ ದಂಗಾಗಿತ್ತು. ಎಲ್ಲರೂ ಸೇರಿ ಖುಷಿಯ ತಾಯಿ ಶೀಲಳ ಜೊತೆ ಬಿಡದಿ ಪೊಲೀಸ್ ಸ್ಟೇಷನ್ ಮುಂದೆ ಪ್ರತಿಭಟನೆ ನಡೆಸಿ, ನಮ್ಮೂರಿನ ಬಡ ಹೆಣ್ಣು ಮಗಳ ಸಾವಿಗೆ ನ್ಯಾಯ ಕೊಡಿಸಬೇಕು, ಕೊಲೆಗಾರರನ್ನು ಪತ್ತೆಹಚ್ಚಿ ಬಂಧಿಸಿ ಉಗ್ರ ಶಿಕ್ಷೆ ಕೊಡಿಸಬೇಕು ಎಂದು ಆಗ್ರಹಿಸಿದ್ದರು. ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ ಅವರು ಗ್ರಾಮಕ್ಕೆ ಭೇಟಿ ನೀಡಿದ್ದು, ಭದ್ರಾಪುರ ಗ್ರಾಮಸ್ಥರು ಅವರ ಮುಂದೆ ತಮ್ಮ ನೋವು ಸಂಕಟ ತೋಡಿಕೊಂಡಿದ್ದರು.

ಮೃತ ಬಾಲಕಿಯ ತಾಯಿ ಶೀಲಾ ತಮ್ಮ ಶೀಟಿನ ಮನೆಯ ಮುಂದೆ ಮಗಳ ಶವವನ್ನು ಇಟ್ಟುಕೊಂಡು, ಪೊಲೀಸರು ಯಾವಾಗ ಹಂತಕರನ್ನು ಬಂಧಿಸುತ್ತಾರೋ ಎಂದು ಕಾಯುತ್ತ, ತನ್ನ ಮಗಳನ್ನು ಯಾಕಾಗಿ ಕೊಲೆ ಮಾಡಲಾಗಿದೆಯೋ ಎಂದು ತಿಳಿಯಲು ಅನ್ನ, ನೀರು, ನಿದ್ರೆ ಬಿಟ್ಟು ಕಾಯುತ್ತ ಕುಳಿತಿದ್ದ ದೃಶ್ಯ ಕರುಳು ಕಿವುಚುತ್ತಿತ್ತು!

ಊದಿಕೊಂಡಿದ್ದ ಶವದ ದುರ್ನಾತ ಲೆಕ್ಕಿಸದೆ, ಶವದ ಎದುರು ಬೆಂಕಿ ಹಚ್ಚಿ ಇಡೀ ರಾತ್ರಿ ಬಾಲಕಿ ಮನೆ ಬಳಿ ಕಾವಲು ಕುಳಿತ ಊರಿನವರು ತಮ್ಮೂರ ಹುಡುಗಿಯ ಅನ್ಯಾಯಕರ ಸಾವಿಗೆ ವಿಧಿಯನ್ನು ಶಪಿಸುತ್ತಾ, ನ್ಯಾಯದ ನಿರೀಕ್ಷೆಯಲ್ಲಿದ್ದರು.


ಎಸ್ಪಿ ಶ್ರೀನಿವಾಸ್‌ಗೌಡ

ಪೊಲೀಸರು, ಅಧಿಕಾರಿಗಳು, ರಾಜಕಾರಣಿಗಳು, ಮುಖಂಡರು, ಸಂಘಟನೆಗಳ ಪದಾಧಿಕಾರಿಗಳು, ಮಾಧ್ಯಮದವರು ಸೇರಿದಂತೆ ಯಾರೇ ಊರಿಗೆ ಹೋದರೂ, 'ನಮ್ಮೂರ ಹುಡುಗಿ ಸಾವಿಗೆ ನ್ಯಾಯ ಕೊಡಿಸಿ ಸಾರ್...' ಎಂದು ಅಂಗಲಾಚುತ್ತಿದ್ದರು.

ಮೂಕ ಹಕ್ಕಿಯ ತಾಯಿ ಶೀಲಾ ತನ್ನ ಮಗಳ ಮೇಲೆ ಅತ್ಯಾಚಾರವಾಗಿದೆ ಎಂದು ಹೇಳಿದರೂ ಪೊಲೀಸರು ನಂಬುತ್ತಿಲ್ಲ, ಮರಣೋತ್ತರ ಪರೀಕ್ಷೆ ವರದಿ ಬಂದರೆ


ಸಿಪಿಐ ಶಂಕರ್ ನಾಯಕ್ ಜೊತೆ ವಾಗ್ವಾದ

ಗೊತ್ತಾಗುತ್ತದೆ ಎನ್ನುತ್ತಿದ್ದಾರೆ, ನಿನ್ನೆ ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ, ಆದರೂ ಇನ್ನೂ ವರದಿ ಬಂದಿಲ್ಲ ಎನ್ನುತ್ತಿದ್ದಾರೆ!

ವರದಿ ಬರಲಿ, ಯಾವ ರೀತಿ ಕೊಲೆ ಮಾಡಿದ್ದಾರೆ? ಅತ್ಯಾಚಾರ ಆಗಿದೆಯೇ ಇಲ್ಲವೋ ಎಂದು ಖಚಿತವಾಗಿ ಹೇಳುವವರೆಗೆ ನಾವು ಅಂತ್ಯ ಸಂಸ್ಕಾರ ಮಾಡುವುದಿಲ್ಲ ಎಂದು ಪಟ್ಟು ಹಿಡಿದಿದ್ದರು!

### ಡಿಕೆ ಭೇಟಿ ಬಳಿಕ ಅಂತ್ಯ ಸಂಸ್ಕಾರ

ಎರಡು ದಿನವಾದರೂ ಅಂತ್ಯ ಸಂಸ್ಕಾರ ಮಾಡದೇ ಕೊಳೆತ ಶವವಿಟ್ಟು ಕೊಂಡೆ ಧರಣಿ ಕುಳಿತಿದ್ದ ಗ್ರಾಮಸ್ಥರು, ಬುಧವಾರ ಬೆಳಿಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗ್ರಾಮಕ್ಕೆ ಬಂದು ಸಾಂತ್ವನ ಹೇಳಿ, ನ್ಯಾಯ ಕೊಡಿಸುವ ಭರವಸೆ ಕೊಟ್ಟ ಬಳಿಕ, ಅಧಿಕಾರಿಗಳ ಸಮ್ಮುಖದಲ್ಲಿ ಬಾಲಕಿಯ ಶವ ಸಂಸ್ಕಾರ ಕಾರ್ಯ ಮಾಡಿ ಮುಗಿಸಿದ್ದರು!

☞ 4

## ಮಾಧ್ಯಮಗಳು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು!

ಬಿಡದಿ ಹೋಬಳಿ ಭದ್ರಾಪುರ ಗ್ರಾಮದಲ್ಲಿ ನಡೆದಿದ್ದ ಅಪ್ರಾಪ್ತ ವಯಸ್ಸಿನ ಬಾಲಕಿ ಸಾವಿನ ಪ್ರಕರಣ ಮಹತ್ವದ ತಿರುವು ಪಡೆದುಕೊಂಡಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಲಭ್ಯವಾಗಿದ್ದು ಅತ್ಯಾಚಾರ ನಡೆದಿಲ್ಲವೆಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಿಡದಿ ಪೊಲೀಸ್ ಠಾಣೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡ ಅವರು ಈ ಕುರಿತು ಮಾಹಿತಿ ನೀಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತದೇಹದ 32 ವಿವಿಧ ಮಾದರಿಗಳನ್ನು ಎಫ್‌ಎಸ್‌ಎಲ್‌ಗೆ ರವಾನಿಸಲಾಗಿತ್ತು. ಕೂಲಂಕುಶವಾಗಿ ಪರೀಕ್ಷೆ ನಡೆಸಿರುವ ತಜ್ಞರು, ಅತ್ಯಾಚಾರ ನಡೆದಿರುವ ಬಗ್ಗೆ ಯಾವುದೇ ಕುರುಹು ಸಿಕ್ಕಿಲ್ಲ ಎಂದು ವರದಿಯಲ್ಲಿ ನಮೂದಿಸಿದ್ದಾರೆ.

10 ಮಂದಿ ಶಂಕಿತರಿದ್ದಾರೆ. ಆದರೆ, ಅವರ ಪಾತ್ರ ಸಾಬೀತಿಗೆ ಸಾಕ್ಷ್ಯಾಧಾರ ಸಿಕ್ಕಿಲ್ಲ, ಬಾಲಕಿಯ ತಲೆ ಹಾಗೂ ದೇಹದ ಇತರೆ ಭಾಗಗಳಲ್ಲಿ ಗಾಯದ ಗುರುತುಗಳು ಪತ್ತೆಯಾಗಿವೆ. ಮೃತ ಬಾಲಕಿಯನ್ನು ನೋಡಿದರೆ, ರೈಲು ಡಿಕ್ಕಿ ಹೊಡೆದಂತೆ ಕಾಣುತ್ತಿದೆ. ಆದರೆ, ಬಾಲಕಿಯ ದೇಹದ ಮೇಲಿನ ಗಾಯಗಳನ್ನು ಸಿಗರೇಟ್‌ನಿಂದ ಸುಟ್ಟಿರುವುದು, ಕಚ್ಚಿರುವುದು ಎಂದು ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ.

ಆ ರೀತಿಯ ಯಾವುದೇ ಗಾಯಗಳು ಕಂಡು ಬಂದಿಲ್ಲ, ಸುಳ್ಳು ಸುದ್ದಿ ಹರಡುವವರ ನಾವು ಕ್ರಮ ಕೈಗೊಳ್ಳುತ್ತೇವೆಂದು ತಿಳಿಸಿದ್ದಾರೆ. ಈ ಪ್ರಕರಣವನ್ನು ರೈಲ್ವೆ ಪೊಲೀಸರು ತನಿಖೆ ಮಾಡಬೇಕಿತ್ತು. ಆದರೆ, ಪೊಲೀಸರು ಸ್ಥಳಕ್ಕೆ ತಲುಪುವ ಹೊತ್ತಿಗೆ, ಅತ್ಯಾಚಾರ ನಡೆಸಿ ಹತ್ಯೆ ಮಾಡಲಾಗಿದೆ ಎಂಬ ಸುದ್ದಿ ಎಲ್ಲೆಡೆ ಹರಡಿತ್ತು! ಹೀಗಾಗಿ, ಏನೆಲ್ಲಾ ರಾದ್ಧಾಂತ ನಡೆಯಿತು. ಈಗ ಸತ್ಯ ಬಯಲಾಗಿದೆ... ಮಾಧ್ಯಮಗಳು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎಂದು ಬುದ್ಧಿಮಾತು ಹೇಳಿದ್ದಾರೆ! ☯

# ಬಿಡದಿಯಲ್ಲಿ ಮೂಕ ಹಕ್ಕಿಯ ನಿಗೂಢ ಸಾವು!

3 ☞


ಖುಷಿಯ ಶವವನ್ನು ಮಣ್ಣು ಮಾಡಿರುವುದು

ಇದಾದ ಬಳಿಕವೂ ವಿವಿಧ ಸಂಘಟನೆಗಳು, ವಿವಿಧ ಪಕ್ಷಗಳ ರಾಜಕಾರಣಿಗಳು ಭದ್ರಾಪುರ ಗ್ರಾಮಕ್ಕೆ ಧಾವಿಸಿ,ಈ ಪ್ರಕರಣದಲ್ಲಿ ಬಿಡದಿ ಪೊಲೀಸರು ಸರಿಯಾಗಿ ತನಿಖೆ ಮಾಡುತ್ತಿಲ್ಲ! ಮೂಕ ಬಾಲಕಿಯ ರೇಪ್ ಮರ್ಡರ್ ಮಾಡಿರುವ ಆರೋಪಿಗಳನ್ನು ನೇಣಿಗೇರಿಸಬೇಕು, ಎನ್ ಕೌಂಟರ್ ಮಾಡಬೇಕು.... ಎಂದೆಲ್ಲ ಘೆರಾವ್ ಮೊಳಗಿಸಿ ಹೋಗಿದ್ದರು! ಮುಖ್ಯವಾಗಿ, ಹೋರಾಟಗಾರರ ಮೇಲೆ ಕೈ ಎತ್ತಿರುವ ಬಿಡದಿ ಸಿಪಿಐ ಶಂಕರ್ ನಾಯಕ್ ಅವರನ್ನು


ಅಲೆಮಾರಿ ಆಯೋಗದ ಅಧ್ಯಕ್ಷೆ ಜಿ. ಪಲ್ಲವಿ

ಸಸ್ಪೆಂಡ್ ಮಾಡಿ ಬೇರೊಬ್ಬರನ್ನು ತನಿಖೆಗೆ ನೇಮಿಸಬೇಕು ಎಂದು ಅಗ್ರಹಿಸಿದ್ದರು! ಈ ಎಲ್ಲಾ ಬೆಳವಣಿಗೆಗಳ ನಡುವೆ ಜಿಲ್ಲಾ ಎಸ್ಪಿ ಶ್ರೀನಿವಾಸಗೌಡ, ಡಿವೈಎಸ್ಪಿ ಗಿರಿ ಮಾತ್ರ ಎಫ್ ಎಸ್ ಎಲ್ ರಿಪೋರ್ಟ್ ಹಾಗೂ ಪೋಸ್ಟ್‌ಮಾರ್ಟಂ ರಿಪೋರ್ಟ್ ಬರಲಿ... ಎಂದು ಕಾದು ಕುಳಿತಿದ್ದರು. ಕಡೆಗೂ ಅದು ಬಂತು....

### ರೈಲು ಗುದ್ದಿದ್ದಕ್ಕೆ ಸಾವು!

ಮೇ 11ರ ರಾತ್ರಿ ಮಿಸ್ಸಿಂಗ್ ಆಗಿ ಮೇ 12ರ ಬೆಳಿಗ್ಗೆ ರೈಲು ಹಳಿ ಬಳಿ ಶವವಾಗಿ ಪತ್ತೆಯಾಗಿದ್ದ ಭದ್ರಾಪುರ ಗ್ರಾಮದ 14 ವರ್ಷದ ಬಾಲಕಿ ಖುಷಿಯದ್ದು ಕೊಲೆಯಲ್ಲ, ಬದಲಿಗೆ ಅದು ರೈಲು ಅಪಘಾತ...... ಎಂಬುದು ಪೊಲೀಸ್ ತನಿಖೆಯಿಂದ ಹಾಗೂ ವೈಜ್ಞಾನಿಕ ವರದಿಗಳಿಂದ ತಿಳಿದು ಬಂದಿದೆ! ಇದರೊಂದಿಗೆ ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಲಾಗಿದೆ ಎಂಬ ಗಂಭೀರ ಆರೋಪಗಳಿಗೆ ತೆರೆ ಬಿದ್ದಿದೆ!


ಮೃತಳ ಕುಟುಂಬದ ಜೊತೆ ಬಿಎಸ್‌ಪಿ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ

ಬಾಲಕಿ ಶವದ ಮರಣೋತ್ತರ ಪರೀಕ್ಷೆಯ ವರದಿ ಸೋಮವಾರ ಪೊಲೀಸರ ಕೈ ಸೇರಿದೆ! ಇದರ ಜೊತೆಗೆ, ಬಾಲಕಿ ರೈಲು ಡಿಕ್ಕಿ ಹೊಡೆದಿದ್ದರಿಂದಲೇ ಮೃತಪಟ್ಟಿದ್ದಾಳೆ ಎಂದು ಖಚಿತಪಡಿಸುವ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಯೂ ದೊರಕಿದೆ! ಬಾಲಕಿಯ ಶವದ ಮರಣೋತ್ತರ ಪರೀಕ್ಷೆಯ ವರದಿ ಪ್ರಕಾರ, ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಬಾಲಕಿ ಮೃತಪಟ್ಟಿದ್ದಾಳೆ. ಎಫ್‌ಎಸ್‌ಎಲ್ ವರದಿಯಲ್ಲಿ ಅತ್ಯಾಚಾರ ನಡೆದಿಲ್ಲ ಎಂಬುದು ಸ್ಪಷ್ಟವಾಗಿದೆ!

ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಈ ಬಗ್ಗೆ ಪ್ರೆಸ್ ಮೀಟ್‌ನಲ್ಲಿ ಮಾಧ್ಯಮದವರಿಗೆ ಮಾಹಿತಿ ನೀಡಿದ್ದಾರೆ.

ಬಾಲಕಿ ಖುಷಿ ಅಂದು ಸಂಜೆ ರೈಲು ಹಳಿ ಬಳಿ ಹೋಗಿದ್ದಾಗ 6 ಗಂಟೆ 7 ನಿಮಿಷಕ್ಕೆ ಅದೇ ಮಾರ್ಗವಾಗಿ ಸಂಚರಿಸಿದ ರೈಲು ಆಕೆಗೆ ಡಿಕ್ಕಿ ಹೊಡೆದಿದೆ. ಶವ ಪತ್ತೆಯಾದ ಸ್ಥಳಕ್ಕೆ ಹೊಂದಿಕೊಂಡಂತಿರುವ ರೈಲ್ವೆ ವಿಪತ್ತು ನಿರ್ವಹಣಾ ಸಂಸ್ಥೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಬಾಲಕಿ ಚಲನವಲನ ಹಾಗೂ ರೈಲು ಡಿಕ್ಕಿ ಹೊಡೆಯುವ ದೃಶ್ಯ ಸೆರೆಯಾಗಿದೆ.

ಬಾಲಕಿಗೆ ಡಿಕ್ಕಿ ಹೊಡೆದ ರೈಲನ್ನು ಸಹ ಪರಿಶೀಲಿಸಿ, ಡಿಕ್ಕಿ ಹೊಡೆದ ಭಾಗದ ಮಾದರಿ ಹಾಗೂ ಬಾಲಕಿಯ ದೇಹದ ಮಾದರಿಯನ್ನು ಸಂಗ್ರಹಿಸಿ ಎಫ್‌ಎಲ್‌ಎಲ್‌ಗೆ ಕಳಿಸಲಾಗಿತ್ತು. ವರದಿಯಲ್ಲಿ ಎರಡಕ್ಕೂ ಹೋಲಿಕೆಯಾಗಿದೆ. ಕೊಲೆ ಸಾಧ್ಯತೆ ಆಯಾಮದಲ್ಲೂ ತನಿಖೆ ನಡೆಸಲಾಗಿದೆ. ಬಾಲಕಿ ಶವವಿದ್ದ ಸ್ಥಳದ ಮಣ್ಣನ್ನು ಸಹ ಪರಿಶೀಲನೆಗೆ ಒಳಪಡಿಸಲಾಗಿದ್ದು, ದೇಹದಲ್ಲಿ ಘಟನಾ ಸ್ಥಳದ್ದು ಬಿಟ್ಟರೆ ಬೇರೆ ಕಡೆಯ ಮಣ್ಣು ಆಕೆಯ ದೇಹಕ್ಕೆ ಮೆತ್ತಿಕೊಂಡಿಲ್ಲ. ಇದರಿಂದಾಗಿ ಬೇರೆ ಕಡೆ ಕೊಲೆ ಮಾಡಿ ತಂದು ಇಲ್ಲಿಗೆ ಎಸೆದಿದ್ದಾರೆ ಎಂಬ ಆರೋಪವೂ ಸುಳ್ಳಾಗಿದೆ' ಎಂದು ತಿಳಿಸಿದ್ದಾರೆ. ರೈಲು ಡಿಕ್ಕಿ ಹೊಡೆದ ಎರಡು ತಾಸಿಗೆ ಮುಂಚೆ ಮತ್ತು ನಂತರದ ಅವಧಿಯ ಕ್ಯಾಮೆರಾ ದೃಶ್ಯಾವಳಿಯನ್ನು ಸಹ ಪರಿಶೀಲಿಸಲಾಗಿದೆ. ಬಾಲಕಿ ಶವದ ಬಳಿ ಯಾವುದೇ ಮನುಷ್ಯರ ಚಲನವಲನ ಪತ್ತೆಯಾಗಿಲ್ಲ....

ಈ ಎಲ್ಲಾ ಆಯಾಮಗಳಿಂದ ನಡೆದ ತನಿಖೆಯಲ್ಲಿ ಬಾಲಕಿ ಸಾವು ರೈಲು ಅಪಘಾತದಿಂದ ಸಂಭವಿಸಿದೆ ಎಂಬುದು ಖಚಿತವಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮಗಳು ಹಾಗೂ ಜಾಲತಾಣಗಳಲ್ಲಿನ ಆರೋಪ ಮತ್ತು ವದಂತಿಗಳು ಸುಳ್ಳೆಂದು ಸಾಬೀತಾಗಿದೆ... ಎಂದು ತಿಳಿಸಿ, ಇಂಥ ಪ್ರಕರಣದಲ್ಲಿ ಮಾಧ್ಯಮಗಳು ಎಚ್ಚರಿಕೆಯಿಂದ ನಡೆದುಕೊಳ್ಳ ಬೇಕಿತ್ತು... ಸುಳ್ಳು ಸುದ್ದಿ ಹಬ್ಬಿಸಿ ಸಮಾಜದಲ್ಲಿ ಅಶಾಂತಿ ಎಬ್ಬಿಸಿದ ಮಾಧ್ಯಮಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳ ಲಾಗುತ್ತದೆ ಎಂದಿದ್ದಾರೆ! ಇಲ್ಲಿಗೆ....ಬಿಡದಿಯ ಮೂಕ ಹಕ್ಕಿಯ ನಿಗೂಢ ಸಾವಿನ ಪ್ರಕಾರಣ ಒಂದು ತಾರ್ಕಿಕ ಅಂತ್ಯ ಕಂಡಂತಾಗಿದೆ!! ☯


ಶವವಿಟ್ಟುಕೊಂಡು ಪ್ರತಿಭಟನೆ ನಡೆಸುತ್ತಿದ್ದ ಭದ್ರಪುರ ಗ್ರಾಮಸ್ಥರು

## ಸಿಪಿಐ ಶಂಕರ್ ನಾಯಕ್ ವಿರುದ್ಧ ಮಾನವ ಹಕ್ಕುಗಳ ಆಯೋಗಕ್ಕೆ ದೂರು!



ಮೂಕ ಬಾಲಕಿ ಖುಷಿ ಸಾವಿನ ಹಿನ್ನಲೆಯಲ್ಲಿ ಭದ್ರಾಪುರಕ್ಕೆ ತೆರಳಿ ಪ್ರತಿಭಟನೆ ನಡೆಸುತ್ತಿದ್ದ ಸಂಘಟನೆಗಳು, ತಮ್ಮ ಮೇಲೆ ಕೈ ಮಾಡಿ ಅವಮಾನಿಸಿದ್ದ ಕಾರಣಕ್ಕೆ ಬಿಡದಿ ಸಿಪಿಐ ಶಂಕರ್ ನಾಯಕ್ ವಿರುದ್ಧ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ! ಇಷ್ಟಕ್ಕೂ ದೂರಿನಲ್ಲಿ ಏನಿದೆ?

ಭದ್ರಾಪುರ ಗ್ರಾಮದ ಬಾಕಿಯ ಅತ್ಯಾಚಾರವೆಸಗಿ ಕೊಲೆ ಮಾಡಿರುವ ಶಂಕೆ ಬಗ್ಗೆ ದೂರುದಾಖಲಾಗಿ ಐದು ದಿನಗಳು ಕಳೆದರೂ ಎಫ್‌ಐಆರ್ ದಾಖಲು ಮಾಡಿರಲಿಲ್ಲ. ಇದಕ್ಕೆ ಸಂಬಂದಪಟ್ಟಂತೆ ಪೊಲೀಸ್ ಇಲಾಖೆಯ ವೈಫಲ್ಯದ ಬಗ್ಗೆ ಜನವಾದಿ ಮಹಿಳಾ ಸಂಘಟನೆ, ಭಾರತ ವಿದ್ಯಾರ್ಥಿ ಫೆಡರೇಷನ್ ಹಾಗೂ ಸಿಐಟಿಯು ಸಂಘಟನೆಯ ಮುಖಂಡರು ಹಾಗೂ ಸದಸ್ಯರು ಪೊಲೀಸರನ್ನು ಪ್ರಶ್ನಿಸಿದ್ದರು. ಆದರೆ, ಇದನ್ನು ಸಹಿಸದ ರಾಮನಗರ ಜಿಲ್ಲೆಯ ಪೊಲೀಸ್ ಸಿಬ್ಬಂದಿಗಳು ಮೃತ ಬಾಲಕಿಯ ಕುಟುಂಬದ ಸದಸ್ಯರ ಹೇಳಿಕೆ ಪಡೆಯುವುದಾಗಿ ತಿಳಿಸಿ, ಪ್ರಕರಣದ ದಿಕ್ಕುತಪ್ಪಿಸಲು ಮೃತಳ ತಂದೆ-ತಾಯಿ ಹಾಗೂ ಕುಟುಂಬದ ಸದಸ್ಯರನ್ನು ಸರಕು ಸಾಗಾಣಿಕೆ ವಾಹನದಲ್ಲಿ ಕರೆದುಕೊಂಡು ಹೋಗುವುದಕ್ಕೆ ಮುಂದಾಗಿದ್ದರು. ಈ ವೇಳೆ ಸರಕು ಸಾಗಾಣಿಕೆ ವಾಹನದ ಬದಲಾಗಿ ಪ್ರಯಾಣಿಕರು ಸಂಚರಿಸಬಹುದಾದ ವಾಹನದಲ್ಲಿ ಕರೆದುಕೊಂಡು ಹೋಗಬೇಕೆಂದು ಹೋರಾಟಗಾರರು ಆಗ್ರಹಿಸಿದ್ದರು.ಸ್ಥಳದಲ್ಲಿದ್ದ ಬಿಡದಿಯ ಪೊಲೀಸ್ ಇನ್‌ಸ್ಪೆಕ್ಟರ್ ಶರ್ಂಕರ್ ನಾಯಕ್, ಮಹಿಳಾ ಮುಖಂಡರ ಜೊತೆ ವಾಗ್ವಾದಕ್ಕಿಳಿದು ಅವಾಚ್ಯ ಶಬ್ದಗಳಿಂದ ಹೀನಾಯವಾಗಿ ಬೈದು ನೀವೇ ವಾಹನವನ್ನು ಏರ್ಪಾಡು ಮಾಡಿಕೊಂಡು ಅವರನ್ನು ಕರೆದುಕೊಂಡು ಬನ್ನಿ ಎಂದು ಏಕವಚನದಲ್ಲಿ ಮಾತನಾಡಿದ್ದರು. ಈ ಘಟನೆಯನ್ನು ಸ್ಥಳದಲ್ಲಿದ್ದ ಸಿಐಟಿಯು ಕಾರ್ಮಿಕ ಮುಖಂಡರಾದ ರಾಘವೇಂದ್ರ ತಮ್ಮ ಮೊಬೈಲ್‌ನಿಂದ ವಿಡಿಯೊ ಚಿತ್ರೀಕರಣ ಮಾಡಲು ಮುಂದಾದಾಗ ಇನ್‌ಸ್ಪೆಕ್ಟರ್ ರಾಘವೇಂದ್ರ, ಅವರ ಕಪಾಳಕ್ಕೆ ಹೊಡೆಯಲು ಮುಂದಾಗಿ, ಅವರನ್ನು ತಳ್ಳಿ ಅವರ ಮೊಬೈಲ್ ಕಿತ್ತು ಬಿಸಾಡಿ ಕೊರಳಪಟ್ಟಿ ಹಿಡಿದು ವಿಡಿಯೊ ಯಾಕೆ ಮಾಡುತ್ತೀಯಾ? ನಿನ್ನನ್ನು ಸುಮ್ಮನೆ ಬಿಡುವುದಿಲ್ಲ, ನಿನಗೆ ಒಂದು ಗತಿ ಕಾಣಿಸುತ್ತೇನೆ ಎಂದು ಬೆದರಿಕೆ ಹಾಕಿದ್ದರು. ಹೀಗೆ, ಸಾರ್ವಜನಿಕ ಸ್ಥಳದಲ್ಲಿ ಅವರ ಮೇಲೆ ಹಲ್ಲೆ ಹಾಗೂ ಅವಮಾನ ಮಾಡಿದ್ದು, ಈ ಸಂಬಂಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಒತ್ತಾಯಿಸಲಾಗಿದೆ!


ವಕೀಲ ಎಸ್. ಭೀಮನಗೌಡ

ಅಂದಹಾಗೆ, ಸಿಪಿಐ ಶಂಕರ್ ನಾಯಕ್ ವಿರುದ್ಧ ಬ್ಯಾಟರಾಯನಪುರ ಠಾಣೆಯಲ್ಲಿ ಇಂದಿಗೂ ಒಂದು ಕ್ರಿಮಿನಲ್ ಕೇಸ್ ನಡೆಯುತ್ತಿದೆ! ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 110, 201, 409, 465 ಹಾಗೂ ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 7ರ ಅಡಿಯಲ್ಲಿನ ಅಪರಾಧಗಳಿಗೆ ವಿಚಾರಣೆ ಎದುರಿಸುತ್ತಿದ್ದಾರೆ. 2022ರಲ್ಲಿ ಬೆಂಗಳೂರಿನ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ಅವರು ಕಳ್ಳತನ ಪ್ರಕರಣದಲ್ಲಿ ಉದ್ಯಮಿ ಹರೀಶ್ ಎಂಬುವರ ಕಾರು ಚಾಲಕ ಸಂತೋಷ್‌ನನ್ನು ಬಂಧಿಸಿ 72 ಲಕ್ಷ ರೂ.ಗಳನ್ನು ಜಪ್ತಿ ಮಾಡಿದ್ದರು. ಆದರೆ ಈ ಹಣವನ್ನು ಠಾಣೆಯ ಸುಪರ್ದಿಗೆ ಕೊಡದೆ ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಈ ಹಣ ಸಂಬಂಧ ಹಿರಿಯ ಅಧಿಕಾರಿಗಳು ನೋಟಿಸ್ ನೀಡಿದ ಬಳಿಕ ಚೀಲದಲ್ಲಿ ಹಣವನ್ನು ತುಂಬಿ ಠಾಣೆಗೆ ತಂದಿಟ್ಟು ಶಂಕರ್ ನಾಯಕ್ ತೆರಳಿದ್ದರು. ಕೊನೆಗೆ ಬ್ಯಾಟರಾಯನಪುರ ಠಾಣೆಯಲ್ಲಿ ಶಂಕರ್ ಹಾಗೂ ಮಧ್ಯವರ್ತಿ ಲೋಕನಾಥ್ ವಿರುದ್ಧ ಕೆಂಗೇರಿ ಗೇಟ್ ಉಪ ವಿಭಾಗದ ಎಸಿಪಿ ಭರತ್ ರೆಡ್ಡಿ ದೂರು ಆಧರಿಸಿ ಎಫ್‌ಐಆರ್ ದಾಖಲಾಯಿತು. 2023ರ ನವೆಂಬರ್‌ನಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಿ ಆಯುಕ್ತ ಬಿ. ದಯಾನಂದ್ ಆದೇಶಿಸಿದ್ದರು. ಈ ಬಗ್ಗೆ ತನಿಖೆಗಿಳಿದ ಸಿಸಿಬಿ ಪೊಲೀಸರು, ಮಧ್ಯವರ್ತಿ ಲೋಕನಾಥ್ ಸಿಂಗ್‌ನನ್ನು ಬುಧವಾರ ರಾತ್ರಿ ಬಂಧಿಸಿದ್ದರು. ಬಳಿಕ ಪ್ರಕರಣ ರದ್ದು ಕೋರಿ ಶಂಕರ್ ನಾಯಕ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಆಗ ಹೈಕೋರ್ಟ್ ಪ್ರಕರಣದ ತನಿಖೆಗೆ ತಡೆ ನೀಡಿತ್ತು.

ಆದರೆ ತಡೆಯಾಜ್ಞೆ ತೆರವುಗೊಳಿಸುವಂತೆ ಸಿಸಿಬಿ ಮೇಲ್ಮನವಿ ಸಲ್ಲಿಸಿತ್ತು. ಈ ಹಿನ್ನೆಲೆ ಹೈಕೋರ್ಟ್ ತನಿಖೆಗೆ ನೀಡಿದ್ದ ತಡೆಯಾಜ್ಞೆ ತೆರವುಗೊಳಿಸಿತ್ತು. ಶಂಕರ್ ನಾಯಕ್ ವಿರುದ್ಧ 4ನೇ ಹೆಚ್ಚುವರಿ ಎಸಿಎಂಎಂ ನ್ಯಾಯಾಲಯದಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ವಿಚಾರಣೆ ರದ್ದುಗೊಳಿಸಬೇಕು ಎಂದು ಕೋರಿ ಶಂಕರ್ ನಾಯಕ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ. ರಾಜ್ಯ ಪ್ರಾಸಿಕ್ಯೂಟರ್ ಬಿ.ಎ. ಬೆಳ್ಳಿಯಪ್ಪ ಅವರು ಮಂಡಿಸಿದ, ಶಂಕರ್ ನಾಯಕ್ ಅವರು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಕರ್ತವ್ಯ ಲೋಪ, ನಿರ್ಲಕ್ಷ್ಯ ಹಾಗೂ ಉದ್ಧಟತನ ತೋರಿದ್ದಾರೆ ಎಂಬ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ, ಶಂಕರ್ ನಾಯಕ್ ಬೃಹತ್ ಮೊತ್ತವನ್ನು ಖಜಾನೆಗೆ ಜಮೆ ಮಾಡದೆ, ತಮ್ಮ ಬಳಿ ಇರಿಸಿಕೊಂಡಿದ್ದಾರೆ. ಹೀಗಾಗಿ, ಪ್ರಕರಣದ ತನಿಖೆ ನಡೆಯಬೇಕು ಎಂದು ಆದೇಶದಲ್ಲಿ ವಿವರಿಸಿದೆ! ☯

## ಕೊಡಗಿನಲ್ಲಿ ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆದಿದ್ದವನು ಮರ್ಡರ್

# ಹೆಣ್ಣಿನ ಖಯಾಲಿ ಹೆಣ ಬೀಳಿಸಿತು!

**ಹೆಂಡತಿಯನ್ನು ದೂರವಿಟ್ಟು ಬೇರೆ ಹೆಣ್ಣು ಮಕ್ಕಳನ್ನು ಬುಟ್ಟಿಗೆ ಹಾಕಿಕೊಂಡು ಅವರೊಂದಿಗೆ ದೈಹಿಕ ಸಂಬಂಧ ಬೆಳೆಸುವುದಲ್ಲದೆ ಅದನ್ನು ವೀಡಿಯೋ ಮಾಡಿಟ್ಟುಕೊಂಡು ಬ್ಲಾಕ್‌ಮೇಲ್ ಮಾಡಿ ಅವರ ಭವಿಷ್ಯದೊಂದಿಗೆ ಆಟವಾಡುತ್ತಾ ವಿಕೃತ ಸುಖ ಪಡುತ್ತಿದ್ದ ಕೊಡಗಿನ ಸೋಮವಾರಪೇಟೆಯ ಕಕ್ಕೆಹೊಳೆ ಜಂಕ್ಷನ್ ನಿವಾಸಿ ಸಂಪತ್ (ಶಂಭು) ಬೀದಿ ಹೆಣವಾಗಿ ಹೋಗಿದ್ದಾನೆ. ಇಷ್ಟಕ್ಕೂ ಆತ ಹೆಣವಾಗಿದ್ದು ಹೇಗೆ? ಇಲ್ಲಿದೆ ಫುಲ್ ಸ್ಟೋರಿ...**


ಕೊಲೆಯಾದ ಸಂಪತ್


ಆರೋಪಿ ಸಂಗೀತಾ

ಸಂಪತ್ ಅಲಿಯಾಸ್ ಶಂಭು ಹೀಗೆಂದು ಹೇಳಿದರೆ ಯಾರಿಗೂ ಗೊತ್ತಾಗುವುದಿಲ್ಲ, ಆದರೆ 2023ರಲ್ಲಿ ಕೊಡಗಿಗೆ ಅಂದಿನ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಬಂದಿದ್ದ ವೇಳೆ ಅವರ ಕಾರಿಗೆ ಮಡಿಕೇರಿಯಲ್ಲಿ ಮೊಟ್ಟೆ ಎಸೆಯಲಾಗಿತ್ತು. ಇದು ರಾಜ್ಯ ಮಟ್ಟದ ಸುದ್ದಿಯಾಗಿತ್ತು. ಆ ಪ್ರಕರಣದಲ್ಲಿ ಇದೇ ಸಂಪತ್ತು ಆರೋಪಿಯಾಗಿದ್ದನು. ಅದೇ ಸಂಪತ್ತು ಇವತ್ತು ವಿವಾಹಿತ ಮಹಿಳೆಯ ಸಂಬಂಧ ಮಾಡಿ ಆಕೆಯ ವೀಡಿಯೋ ಇಟ್ಟುಕೊಂಡು ಬ್ಲಾಕ್‌ಮೇಲ್ ಮಾಡಿ ಆಕೆ ಮತ್ತು ಆಕೆಯ ಗಂಡ ಹಾಗೂ ಗೆಳೆಯನಿಂದ ಹೆಣವಾಗಿ ಹೋಗಿದ್ದಾನೆ.

ಇಷ್ಟಕ್ಕೂ ಈ ಸಂಪತ್ತು ಬಗ್ಗೆ ಯಾರನ್ನು ಕೇಳಿದರೂ ಒಳ್ಳೆಯವನೆಂದು ಹೇಳುವುದು ಕಷ್ಟವೇ... ಕಟ್ಟಿಕೊಂಡ ಹೆಂಡತಿಯನ್ನೇ ದೂರವಿಟ್ಟು ಹೆಣ್ಣುಮಕ್ಕಳ ಮುಂದೆ ಸಭ್ಯನಂತೆ ನಟಿಸಿ ಅವರನ್ನು ಬೀಳಿಸಿಕೊಂಡು ಅವರೊಂದಿಗೆ ಮಜಾ ಉಡಾಯಿಸಿ ಬಳಿಕ ಅವರು ದೂರ ಸರಿದರೆ ಅವರನ್ನು ಹೆದರಿಸಿ, ಬೆದರಿಸಿ, ಬ್ಲಾಕ್ ಮೇಲ್ ಮಾಡಿ ಬಳಸಿಕೊಳ್ಳುವುದು ಈತನ ಖಯಾಲಿಯಾಗಿತ್ತು. ಇವನ ಕೈಗೆ ಸಿಕ್ಕಿ ಹಾಕಿಕೊಂಡ ಹೆಣ್ಣುಮಕ್ಕಳಿಗೆ ನರಕ ತೋರಿಸುತ್ತಿದ್ದವನು. ಇವತ್ತು ಅದೇ ಹೆಣ್ಣಿನ ವಿಚಾರಕ್ಕೆ ಶಿವನಪಾದ ಸೇರುವಂತಾಗಿದೆ.

**ಕೊಡಗು**

**✍ಬಿ.ಎಂ. ಲವಕುಮಾರ್**

ಇವತ್ತು ಕೊಲೆಯಾಗಿ ಹೋದ ಕೊಡಗಿನ ಸೋಮವಾರಪೇಟೆ ನಿವಾಸಿ ಸಂಪತ್ ಬಗ್ಗೆ ಹೇಳಬೇಕೆಂದರೆ ಈತ ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದನು. ಆರ್ಥಿಕವಾಗಿ ಈತ ಶ್ರೀಮಂತನಾಗಿದ್ದನು. ಹಣ ಕೈನಲ್ಲಿ ಇದ್ದುದರಿಂದ ಜಾಲಿಯಾಗಿ ದಿನ ಕಳೆಯುತ್ತಿದ್ದನು. ಹಣವಿದ್ದುದರಿಂದ ಆಡಿದ್ದೇ ಆಟ ಎನ್ನುವಂತಾಗಿತ್ತು. ಈತನ ರಂಗಿನಾಟ ಹೆಂಡತಿ ಸಹಿಸದಾಗಿದ್ದಳು. ಇಬ್ಬರ ನಡುವೆ ದಾಂಪತ್ಯ ಸರಿಹೋಗುತ್ತಿರಲಿಲ್ಲ, ಹೀಗಾಗಿ ಆಕೆಗೆ ಡೈವರ್ಸ್


ಮೃತ ದೇಹವಿದ್ದ ಸ್ಥಳವನ್ನು ಮಹಜರ್ ನಡೆಸುತ್ತಿರುವ ಪೊಲೀಸ್ ಅಧಿಕಾರಿ

ನೀಡಿದ ಸಂಪತ್ತು ಕುಶಾಲನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದನು. ಅಲ್ಲಿಗೆ ಮಹಿಳೆಯರನ್ನು ಕರೆತಂದು ಅವರೊಂದಿಗೆ ದೈಹಿಕ ಸಂಪರ್ಕ ಹೊಂದುವುದಲ್ಲದೆ ಅದನ್ನು ಗೌಪ್ಯವಾಗಿ ವೀಡಿಯೋ ಮಾಡಿಟ್ಟುಕೊಂಡು ಬ್ಲಾಕ್‌ಮೇಲ್ ಮಾಡಿ ಹೆದರಿಸಿ ಅವರೊಂದಿಗೆ ಮತ್ತೆ, ಮತ್ತೆ ದೈಹಿಕ ಸಂಬಂಧ ಬೆಳೆಸುತ್ತಿದ್ದನು.

ಈತ ಅದೆಷ್ಟು ಹೆಣ್ಣು ಮಕ್ಕಳ ಬದುಕಿಗೆ ಕಂಟಕನಾಗಿದ್ದನೋ ಗೊತ್ತಿಲ್ಲ, ಎಲ್ಲರೂ ಮಾನಮರ್ಯಾದೆಗೆ ಅಂಜಿ ಪೊಲೀಸರಿಗೆ ದೂರು ನೀಡದ ಕಾರಣದಿಂದಾಗಿ ಸಂಪತ್ತಿನ ಆಟಾಟೋಪ ಜೋರಾಗಿಯೇ ಸಾಗಿತ್ತು. ಈ ನಡುವೆ ಸೋಮವಾರಪೇಟೆಯ ಹಾನಗಲ್ ನಿವಾಸಿ ಕಿರಣ್ ಎಂಬಾತನ ಪತ್ನಿ ಸಂಗೀತ ಅವರನ್ನು ಪರಿಚಯಿಸಿಕೊಂಡಿದ್ದನು. ಆದರೆ ಸಂಗೀತ ಆತನೊಂದಿಗೆ ವ್ಯವಹಾರ ನಡೆಸಿ 20ಲಕ್ಷಕ್ಕೂ ಹೆಚ್ಚು ಹಣವನ್ನು ಪಡೆದಿದ್ದಳು ಎಂದು ಹೇಳಲಾಗುತ್ತಿದೆ. ಹೀಗಾಗಿ ಸಂಪತ್ತು ಆಕೆಗೂ ತನ್ನ ಚಾಳಿಯನ್ನು ಮುಂದುವರೆಸಿದ್ದನು. ಈತನ ಕಾಟ ತಾಳಲಾರದಾಗ ಅವತ್ತು ಅಂದರೆ 2023ರಲ್ಲಿ ಕಿರಣ್(44) ಮತ್ತು ಸಂಗೀತ (35) ಸೇರಿ ಚೆನ್ನಾಗಿ ತದಕಿದಲ್ಲದೆ, ಆತನ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು. ಈ ಪ್ರಕರಣದಲ್ಲಿ ಜೈಲ್ ಸೇರಿದ್ದ ಸಂಪತ್ತು ನಂತರ ಜಾಮೀನಿನ ಮೇಲೆ ಹೊರ ಬಂದಿದ್ದನು.

ಇದಾದ ಬಳಿಕ ಕಿರಣ್ ಮತ್ತು ಸಂಗೀತ ನನಗೆ 20 ಲಕ್ಷ ಕೊಡಬೇಕೆಂದು ದೂರು ದಾಖಲಿಸಿದ್ದನು. ಆ ನಂತರ ಸಂಪತ್ತು ಮತ್ತು ಸಂಗೀತ, ಕಿರಣ್ ನಡುವೆ ಸಂಧಾನ ನಡೆದು ಪ್ರಕರಣ ವಾಪಾಸ್ ತೆಗೆದುಕೊಳ್ಳುವ ಸಂಧಾನ ಮಾಡಲಾಗಿತ್ತು. ಈ ವೇಳೆ ಸಂಗೀತ ಮತ್ತು ಕಿರಣ್ ಕೇಸ್ ವಾಪಾಸ್ ತೆಗೆದುಕೊಂಡಿದ್ದರಾದರೂ ಸಂಪತ್ ಉಲ್ಟಾ ಹೊಡೆದು ಕೇಸ್ ವಾಪಾಸ್ ತೆಗೆದುಕೊಳ್ಳದೆ ತನ್ನ ಆಟ ಶುರುಮಾಡಿದ್ದನಲ್ಲದೆ, ಸಂಗೀತಳನ್ನು ಕಾಡಲಾರಂಭಿಸಿದ್ದನು. ಜತೆಗೆ ಕಿರಣ್ ಮತ್ತು ಸಂಗೀತರಿಗೆ 20ಲಕ್ಷ ಕೊಡುವಂತೆ ಆಗ್ರಹಿಸುತ್ತಿದ್ದನಂತೆ. ಜತೆಗೆ ನಿನ್ನ ವೀಡಿಯೋ ನನ್ನ ಬಳಿಯಿದೆ ಎಂದು ಹೆದರಿಸಿ ಆಕೆಯೊಂದಿಗೆ ದೈಹಿಕ ಸಂಬಂಧ ಹೊಂದುವ ಬಯಕೆ ವ್ಯಕ್ತಪಡಿಸಲು ಆರಂಭಿಸಿದ್ದನು. ಇದು ಸಂಗೀತಾಳಿಗೆ ದೊಡ್ಡ ಮಟ್ಟದ ತಲೆನೋವಾಗಿ ಪರಿಣಮಿಸಿತ್ತು. ಈ ವಿಚಾರ ಗಂಡ ಕಿರಣ್‌ಗೂ ಗೊತ್ತಾಗಿದ್ದರಿಂದ ಸಂಪತ್ತನನ್ನು ಮುಗಿಸಿ ಬಿಡುವ ಮಟ್ಟಕ್ಕೆ ಅವರು ಬಂದಿದ್ದರು.

ಅವತ್ತು ಮೇ 9ನೇ ತಾರೀಖು ಶುಕ್ರವಾರ. ಸಂಪತ್ತಿಗೆ ಮುಹೂರ್ತ ಫಿಕ್ಸ್ ಮಾಡಲಾಗಿತ್ತು. ಕಿರಣ್‌ಮತ್ತು ಸಂಗೀತಳಿಗೆ ಸಾಥ್ ನೀಡಲು ಗಣಪತಿ (44) ಎಂಬಾತನನ್ನು ಕರೆಯಿಸಿಕೊಳ್ಳಲಾಗಿತ್ತು. ಎಲ್ಲರೂ ಸೇರಿ ಹಾನಗಲ್‌ನ ಮನೆಯಲ್ಲಿಯೇ ಸಂಪತ್ತಿಗೆ ಗತಿಕಾಣಿಸಲು ನಿರ್ಧಾರ ಮಾಡಿದ್ದರು. ಎಲ್ಲವನ್ನು ತಯಾರಿ ಮಾಡಿಕೊಂಡು ಸಂಗೀತ ಆ ನಂತರ ಸಂಪತ್ತಿಗೆ ಮನೆಗೆ ಬರುವಂತೆ ಫೋನ್ ಮಾಡಿದ್ದಳು. ಆಕೆ ಮನೆಗೆ ಬರುವಂತೆ ಫೋನ್ ಮಾಡಿದ್ದರಿಂದ ಸಂಪತ್ತು ಖುಷಿಯಾಗಿ ಬಿಟ್ಟನು. ಕುಶಾಲನಗರದಲ್ಲಿದ್ದ ಆತ ಸೋಮವಾರಪೇಟೆಗೆ ಹೋಗಲು ತಯಾರಿ ಮಾಡಿಕೊಂಡನು.

ಆದರೆ ತನ್ನದೇ ಕಾರು ತೆಗೆದುಕೊಂಡು ಹೋದರೆ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಗುಡ್ಡೆಹೊಸೂರಿನಲ್ಲಿರುವ ರೆಸಾರ್ಟ್‌ನಲ್ಲಿ ತನ್ನ ಕಾರನ್ನು ನಿಲ್ಲಿಸಿ ತನ್ನ ಬ್ಯುಸಿನೆಸ್ ಪಾರ್ಟನರ್ ಆಗಿರುವ ಜಾನ್ ಎಂಬುವರ ಕಾರು ತೆಗೆದುಕೊಂಡು ಸಂಗೀತ ಮನೆಯ ಕಡೆಗೆ ಹೊರಟಿದ್ದನು. ಆ ನಂತರ ಆಗಿದ್ದೇ ಬೇರೆ. ಸಂಗೀತ ಒಬ್ಬಳೇ ಇರುತ್ತಾಳೆಂದು ನಂಬಿ ಸಂಪತ್ತು ಆಕೆಯ ಮನೆಗೆ ಹೋಗಿದ್ದನು. ಆದರೆ ಅಲ್ಲಿ ತಯಾರಾಗಿದ್ದ ಸಂಗೀತ ಅಂಡ್ ಗ್ಯಾಂಗ್ ಅವನನ್ನು ಕತ್ತಿಯಿಂದ ಕಡಿದು ಕೊಲೆಗೈದಿದ್ದಾರೆ. ಇದಾದ ನಂತರ ಶವವನ್ನು ಸಂಪತ್ತು ತಂದಿದ್ದ ಕಾರಿನಲ್ಲಿಯೇ ಹಾಕಿಕೊಂಡು ಹಾಸನದ ಕಡೆಗೆ ಹೋಗಿದ್ದು, ಹೆಣವನ್ನು ಎಸೆಯಲು ಜಾಗಕ್ಕಾಗಿ ಹುಡುಕಾಡಿದ್ದಾರೆ. ಕೊನೆಗೆ ಸಕಲೇಶಪುರ ತಾಲ್ಲೂಕು ಯಸಳೂರು ಹೋಬಳಿ ಮಾಗೇರಿಯ ಸಮೀಪ ಕಲ್ಲಹಳ್ಳಿ ಗ್ರಾಮಕ್ಕೆ ಸುಮಾರು ಮೂರು ಕಿ.ಮೀ. ದೂರದ ವಣಗೂರು ಅರಣ್ಯದ ನಿರ್ಜನ ಪ್ರದೇಶದಲ್ಲಿ ಹೆಣವನ್ನು ಎಸೆದು ಅಲ್ಲಿಂದ ಬಂದು ಕಾರನ್ನು ಕಲ್ಲಹಳ್ಳಿ ಗ್ರಾಮದಲ್ಲಿ


ಆರೋಪಿಗಳಾದ ಗಣಪತಿ ಹಾಗೂ ಕಿರಣ್

ಜನವಸತಿ ಪ್ರದೇಶದಲ್ಲಿ ನಿಲ್ಲಿಸಿ ಅಲ್ಲಿಂದ ಮುಂದೆ ಬಂದು ಬೆಂಗಳೂರಿನಿಂದ ಕಾರನ್ನು ಕರೆಯಿಸಿಕೊಂಡು ಅದರಲ್ಲಿ ಪರಾರಿಯಾಗಿದ್ದಾರೆ.

ಇದೆಲ್ಲದರ ನಡುವೆ ಮಾಗೇರಿಯ ಸಮೀಪ ಕಲ್ಲಹಳ್ಳಿಯಲ್ಲಿ ಅಪರಿಚಿತ ವಾಹನವನ್ನು ನೋಡಿದ ಜನ ಬೆಚ್ಚಿ ಬಿದ್ದಿದ್ದಾರೆ. ಕಾರಿನಲ್ಲಿ ರಕ್ತ ಕಲೆ, ಕೂದಲುಗಳು ಪತ್ತೆಯಾಗಿದ್ದು, ಮೇಲ್ನೋಟಕ್ಕೆ ಇದರಲ್ಲೊಂದು ಕೊಲೆ ನಡೆದಿದೆ ಎಂಬುದು ತಕ್ಷಣಕ್ಕೆ ಗೊತ್ತಾಗುವಂತಿತ್ತು. ಹೀಗಾಗಿ ಪೊಲೀಸರಿಗೆ ಮಾಹಿತಿ ನೀಡಲಾಯಿತು. ಸ್ಥಳಕ್ಕೆ ಆಗಮಿಸಿದ ಯಸಳೂರು ಸಬ್ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿದ್ದಲ್ಲದೆ, ಹೆಚ್ಚಿನ ತನಿಖೆಗಾಗಿ ಶ್ವಾನದಳ ಮತ್ತು ಬೆರಳಚ್ಚು ತಜ್ಞರನ್ನು ಕರೆಯಿಸಿ ಮಹಜರ್ ಮಾಡಿ ತನಿಖೆ ಚುರುಕು ಗೊಳಿಸಿದ್ದಾರೆ .

ಇತ್ತ ಮೇ 9ರಂದು ಹೋದ ಸಂಪತ್ತು ಮೇ 10ರಂದು ವಾಪಾಸ್ ಕಾರು ತಂದು ಕೊಡದೆ ಹೋದಾಗ ಆತನಿಗೆ ಫೋನ್ ಮಾಡಿ ಸಂಪರ್ಕಿಸುವ ಪ್ರಯತ್ನ ಮಾಡಿದಾಗ ಫೋನ್ ಸ್ವಿಚ್ ಆಫ್ ಆಗಿತ್ತು. ಹೀಗಾಗಿ ಇತ್ತ ಜಾನ್ ಸೇರಿದಂತೆ ಸ್ನೇಹಿತರು ಆತನಿಗಾಗಿ ಹುಡುಕಾಟ ಆರಂಭಿಸಿದ್ದರು. ಎಲ್ಲೆಡೆ ವಿಚಾರಿಸಿದರೂ ಆತನ ಪತ್ತೆಯಾಗಿರಲಿಲ್ಲ, ಹೀಗಾಗಿ ಕುಶಾಲನಗರ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಲಾಗಿತ್ತು. ಕುಶಾಲನಗರದಲ್ಲಿ ನಾಪತ್ತೆಯಾದ ಕಾರು ಸಕಲೇಶಪುರ ತಾಲೂಕಿನ ಕಲ್ಲಹಳ್ಳಿಯಲ್ಲಿ ಪತ್ತೆಯಾಗಿದೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಅಲ್ಲಿಗೆ ತೆರಳಲಾಗಿತ್ತು. ಅಲ್ಲಿರುವ ಕಾರು ಸಂಪತ್ತು ಕೊಂಡೊಯ್ದ ಜಾನ್ ಅವರ ಕಾರು ಎಂಬುದು ದೃಢಪಟ್ಟಿತ್ತು. ಆ ನಂತರ ಶವಕ್ಕಾಗಿ ಹುಡುಕಾಟ ನಡೆಸಿದಾಗ ಕಾರು ಸಿಕ್ಕಿದ ಸುಮಾರು ಮೂರು ಕಿ.ಮೀ ದೂರದ ನಿರ್ಜನ ಪ್ರದೇಶದಲ್ಲಿ ಕೊಳೆತ ಸ್ಥಿತಿಯಲ್ಲಿ ಶವ ಪತ್ತೆಯಾಗಿತ್ತು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದರು. ಈ ವೇಳೆ ಸಂಪತ್‌ಗೆ ಕರೆ ಮಾಡಿ ಕರೆದವರು ಬೇರೆ ಯಾರೂ ಅಲ್ಲ, ಅವರ ಬಹಳ ವರ್ಷಗಳ ಸ್ನೇಹಿತೆ, ಈಗಿನ ದುಶ್ಮನ್ ಸಂಗೀತ ಎಂಬುದು ಗೊತ್ತಾಗಿತ್ತು. ಆ ನಂತರ ಆಳಕ್ಕಿಳಿದು ತನಿಖೆ ಮಾಡಿದಾಗ ಆಕೆ ತನ್ನೆಲ್ಲಾ ವ್ಯವಹಾರಗಳಿಗೂ ಸಂಪತ್ ಅವರಿಂದ ಲಕ್ಷಗಟ್ಟಲೆ ಹಣ ಪಡೆದುಕೊಳ್ಳುತ್ತಿದ್ದಳೆಂದೂ ಆಕೆ ಸಂಪತ್ ಅವರಿಗೆ 20 ಲಕ್ಷಕ್ಕೂ ಹೆಚ್ಚು ಹಣ ಕೊಡಬೇಕಾಗಿತ್ತು ಎಂಬುದು ತಿಳಿದು ಬಂದಿತ್ತು.

ಹಣಕ್ಕೆ ಸಂಬಂಧಿಸಿದಂತೆ ಕಳೆದ ಕೆಲವು ತಿಂಗಳ ಹಿಂದೆಯಷ್ಟೇ ಸಂಗೀತ ತನ್ನ ಪತಿ ಕಿರಣ್ ಹಾಗೂ ಆತನ ಸ್ನೇಹಿತರೊಂದಿಗೆ ಸೇರಿ ಮನಸ್ಸೋ ಇಚ್ಛೆ ಹಲ್ಲೆ ನಡೆಸಿದ್ದರಂತೆ. ಅದರ ವೀಡಿಯೋವನ್ನು ಸಂಪತ್ ಸ್ನೇಹಿತರು ಪೊಲೀಸರಿಗೆ ನೀಡಿದ್ದರು. ಹೀಗಾಗಿ ಅವರ ವಿರುದ್ಧ ಸಂಪತ್ 307 ಪ್ರಕರಣ ದಾಖಲಿಸಿದ್ದರಂತೆ. ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿ ಮಹಿಳೆ, ಆಕೆಯ ಪತಿ ಹಾಗೂ ಆತನ ಸ್ನೇಹಿತನಿಗೆ ಶಿಕ್ಷೆಯಾಗುವ ಸಾಧ್ಯತೆ ಇತ್ತು ಎಂಬುದು ಬೆಳಕಿಗೆ ಬಂದಿತ್ತು. ಇದೆಲ್ಲದರ ಹಿನ್ನಲೆಯಲ್ಲಿ ಕೊಲೆಗೆ ಸ್ಕೆಚ್ ಹಾಕಲಾಗಿತ್ತು.

ವಿಶೇಷ ತಂಡ ರಚಿಸಿ ತನಿಖೆ ನಡೆಸಿದ ಪೊಲೀಸರು ಮೇ 16ರಂದು ಆರೋಪಿ ಕಿರಣ್‌ನನ್ನು ಬೆಂಗಳೂರಿನಲ್ಲಿ ಬಂಧಿಸಿದರೆ, ಮೇ 17ರಂದು ಮತ್ತೊಬ್ಬ ಆರೋಪಿ ಗಣಪತಿಯನ್ನು ಬೆಳ್ತಂಗಡಿಯಲ್ಲಿ ಮೇ 18ರಂದು ಸೋಮವಾರಪೇಟೆಯಲ್ಲಿ ಸಂಗೀತಾಳನ್ನು ಬಂಧಿಸಲಾಗಿದೆ. ಆರೋಪಿಗಳನ್ನು ವಿಚಾರಣೆಗೊಳಪಡಿಸಿದಾಗ ಕೊಲೆ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ. ☯



# ಪ್ರೊಫೆಸರ್ ಪ್ರೇಮ ಪಾಶಕ್ಕೆ ಬಲಿಯಾದ ಬೆಳ್ತಂಗಡಿ ಬೆಡಗಿ!




**ಧರ್ಮಸ್ಥಳ ಎಂಬ ಹೆಸರು ದೇಶ ವಿದೇಶಗಳಲ್ಲಿ ಖ್ಯಾತವಾದದ್ದು. ಅಲ್ಲಿನ ಶ್ರೀ ಮಂಜುನಾಥ ಸ್ವಾಮಿ ಕ್ಷೇತ್ರ, ದಿನನಿತ್ಯ ಸಾವಿರಾರು ಭಕ್ತರಿಗೆ ಚತುರ್ದಾನ ಮಾಡುವ ಮೂಲಕ ಪ್ರಸಿದ್ಧಿಯನ್ನು ಪಡೆದಿದೆ. ಈ ಹಿಂದೆ ಕುಡುಮ ಎಂಬ ಹೆಸರಿದ್ದ ಈ ಗ್ರಾಮ ಧರ್ಮಸ್ಥಳವಾಗಿ ಧರ್ಮ ನೆಲೆನಿಂತ ಸ್ಥಳವಾಗಿ ಪ್ರಸಿದ್ಧಿ ಹೊಂದಿದೆ. ಇಂತಹ ಪುಣ್ಯ ಭೂಮಿಯಲ್ಲಿ ಜನಿಸಿದಂತಹ ಹೆಣ್ಮಗಳು ಉತ್ತರ ಭಾರತದ ಪಂಜಾಬಿನ ಜಲಂಧರ್‌ನಲ್ಲಿ ನಿಗೂಢ ರೀತಿಯಲ್ಲಿ ಜೀವ ಕಳೆದುಕೊಂಡಿದ್ದಾಳೆ. ಈ ದುರಂತಕ್ಕೆ ಕಾರಣವಾಗಿರುವುದು ಮಾತ್ರ ಆಕೆಯ ಪ್ರೇಮ ಸಂಬಂಧ. ವಿವಾಹಿತ ಪ್ರೊಫೆಸರ್ ಒಬ್ಬರ ಸಹವಾಸಕ್ಕೆ ಬಿದ್ದ ಆಕೆ ಬದುಕಿನ ಉತ್ತುಂಗಕ್ಕೆ ಏರುವ ಹಂತದಲ್ಲಿ ಜಾರಿಬಿದ್ದು ಜೀವ ಕಳೆದುಕೊಂಡಿದ್ದಾಳೆ.**



**✍ ಮೋಹನ್ ಬೋಳಂಗಡಿ**

ಆಕೆ ಆಕಾಂಕ್ಷ

ಧರ್ಮಸ್ಥಳ ಗ್ರಾಮದ ಬೊಳಿಯ ಎಂಬಲ್ಲಿನ ನಿವಾಸಿ ಸುರೇಂದ್ರ ನಾಯರ್. ಮೂಲತಃ ಕೇರಳದವರಾಗಿದ್ದರೂ ಸಹ ಹಲವಾರು ದಶಕಗಳಿಂದ ಆ ಜಾಗದಲ್ಲಿ ನೆಲೆ ನಿಂತವರು. ಅವರ ಪತ್ನಿ ಸಿಂಧೂದೇವಿ. ಸುರೇಂದ್ರ ನಾಯರ್ ಸಿವಿಲ್ ಕಂಟ್ರಾಕ್ಟರ್ ಆಗಿದ್ದರು. ಸಿಂಧೂದೇವಿ ಮನೆವಾರ್ತೆ ನೋಡಿಕೊಂಡಿರುವುದಷ್ಟೇ ಅಲ್ಲದೆ ಸಾಮಾಜಿಕ ಚಟುವಟಿಕೆಗಳಲ್ಲೂ ಸಕ್ರಿಯರಾಗಿದ್ದರು. ಜೆಡಿಎಸ್ ಪಕ್ಷದಿಂದ ಗ್ರಾಮ ಪಂಚಾಯತ್ ಸದಸ್ಯೆಯೂ ಆಗಿದ್ದರು. ಈ ದಂಪತಿಯ ಮಗಳೇ ಆಕಾಂಕ್ಷ. ಸುಮಾರು 22 ರ ಹರೆಯ. ಈಕೆ ಪಂಜಾಬಿನ ಜಲಂಧರ್‌ನ ಕಾಲೇಜೊಂದರಲ್ಲಿ ಏರೊನಾಟಿಕಲ್ ಇಂಜಿನಿಯರಿಂಗ್ ಪದವಿ ಪಡೆದಿದ್ದಳು. ಆಕೆಗೆ ದೆಹಲಿಯಲ್ಲಿ ಉದ್ಯೋಗ ಲಭಿಸಿತ್ತು. 6 ತಿಂಗಳಿನಿಂದ ಆ ಉದ್ಯೋಗದಲ್ಲಿದ್ದ ಆಕಾಂಕ್ಷಗೆ ಜರ್ಮನಿಯ ಕಂಪೆನಿಯೊಂದರಲ್ಲಿ ಉದ್ಯೋಗದ ಅವಕಾಶ ಲಭಿಸಿತ್ತು. ಆ ಉದ್ಯೋಗಕ್ಕೆ ಸೇರಬೇಕಾದರೆ ಆಕೆ ಕಲಿತ ಕಾಲೇಜಿನಿಂದ ಕೆಲವೊಂದು ದಾಖಲೆಗಳನ್ನು ಸಂಗ್ರಹಿಸಿ



ನೀಡಬೇಕಿತ್ತು. ಅದಕ್ಕಾಗಿ ಆಕೆ ತನ್ನ ಮನೆಯವರಿಗೆ ತಿಳಿಸಿಯೇ ಮೇ 16ರಂದು ಜಲಂಧರ್‌ಗೆ ಹೋಗಿದ್ದಳು. ಅಲ್ಲಿಗೆ ತಲುಪಿದ ಮೇಲೆ ತನ್ನ ತಾಯಿಗೆ ಮಾಹಿತಿ ನೀಡಿದ್ದಳು. ತಾನು ತನ್ನ ಸ್ನೇಹಿತನ ಬೈಕಿನಲ್ಲಿ ಕಾಲೇಜಿಗೆ ಹೋಗುತ್ತಿರುವುದಾಗಿ ತಿಳಿಸಿದ್ದಳು. ಮಧ್ಯಾಹ್ನದ ವೇಳೆಗೆ ಮತ್ತೆ ಕರೆ ಮಾಡಿ ಕಾಲೇಜಿಗೆ ತಲುಪಿರುವ ಮಾಹಿತಿ ನೀಡಿದ್ದಳು. ತದನಂತರ ಆಕೆಯ ಮೊಬೈಲ್ ಮನೆಯವರ ಸಂಪರ್ಕಕ್ಕೆ ಸಿಗಲಿಲ್ಲ.

**ಸಂಜೆಯ ವೇಳೆಗೆ ದುರಂತ ವಾರ್ತೆ**

ಮೇ 16ರಂದು ಮಧ್ಯಾಹ್ನದ ನಂತರ ಆಕಾಂಕ್ಷಳ ಯಾವುದೇ ಮಾಹಿತಿ ಮನೆಯವರಿಗೆ ತಿಳಿಯಲಿಲ್ಲ. ಸಂಜೆಯ ವೇಳೆಗೆ ಜಲಂಧರ್‌ನ ಪೊಲೀಸ್ ಠಾಣೆಯಿಂದ ದೂರವಾಣಿ ಕರೆಯೊಂದು ಬಂದಿತ್ತು. ಆ ಕರೆ ನೀಡಿದಂತಹ ಮಾಹಿತಿ ಅತ್ಯಂತ ಘೋರವಾಗಿತ್ತು. ಆಕಾಂಕ್ಷ ಕಾಲೇಜಿನಿಂದ ದಾಖಲೆ ಪತ್ರವನ್ನು ತೆಗೆದುಕೊಳ್ಳಲೆಂದು ಕಾಲೇಜಿನ 3ನೇ ಮಹಡಿಗೆ ಹೋಗಿದ್ದವಳು ಕಾಲು ಜಾರಿ ಬಿದ್ದು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾಳೆ. ತಕ್ಷಣ ಜಲಂಧರ್‌ಗೆ ಬರುವಂತೆ ಸೂಚನೆ ಬಂದಿತ್ತು. ಆಕಾಂಕ್ಷಳ ತಂದೆ ಸುರೇಂದ್ರ ನಾಯರ್, ತಾಯಿ ಸಿಂಧೂದೇವಿ, ಆಕೆಯ ಸಹೋದರ ಆಕಾಶ್ ನಾಯರ್ ಮತ್ತು ಸೋದರ ಸಂಬಂಧಿಯೊಬ್ಬರು ಅದೇ ದಿನ ರಾತ್ರಿ, ಪಂಜಾಬಿಗೆ ವಿಮಾನದ ಮೂಲಕ ಧಾವಿಸಿದ್ದರು. ಶನಿವಾರ ಬೆಳಿಗ್ಗೆ ಪೊಲೀಸ್ ಠಾಣೆಗೆ ಹೋದ ಆಕೆಯ ಮನೆಯವರು ಪೊಲೀಸರಿಂದ ಮಾಹಿತಿಗಳನ್ನು ಪಡೆದುಕೊಂಡಾಗ ಕೆಲವೊಂದು ಸಂಶಯ ಬಂತು. ಅವರು ಜಲಂಧರ್‌ನ ಪಾಗ್ವಾಡ ತಾಲೂಕಿನ ಸಿವಿಲ್ ಸರಕಾರಿ ಆಸ್ಪತ್ರೆಯಲ್ಲಿ ಕಾದಿಡಲಾಗಿದ್ದ ಮೃತದೇಹವನ್ನು ನೋಡಿದ ಬಳಿಕ ಪೊಲೀಸರಿಗೆ ದೂರು ನೀಡಿದ್ದಾರೆ. ಆ ವೇಳೆಗಾಗಲೇ ಜಲಂಧರ್‌ನ ಪಾಗ್ವಾಡ ಪೊಲೀಸರು ಆ ವೇಳೆಗಾಗಲೇ ಆಕಾಂಕ್ಷ ಕಾಲುಜಾರಿ ಬಿದ್ದು ಮೃತಪಟ್ಟಿದ್ದಾಳೆ ಎಂದು ಅಸ್ವಾಭಾವಿಕ ಸಾವು ಎಂದು ಕೇಸು ದಾಖಲಿಸಿಕೊಂಡಿದ್ದರು. ಯಾವಾಗ ಆಕೆಯ ಸಹೋದರ ಆಕಾಶ ನಾಯರ್ ಅವರು ಆಕಾಂಕ್ಷ ಆತ್ಮಹತ್ಯೆ ಮಾಡಿಕೊಂಡಿಲ್ಲ ಅಂತಹ ಮನಸ್ಥಿತಿಯವಳೂ ಅಲ್ಲ, ಆಕೆಯನ್ನು ಕೊಲೆ ಮಾಡಿರಬಹುದೆಂದು ಶಂಕಿಸಿ ದೂರು ನೀಡಿದರು. ಆದರೆ ಪೊಲೀಸರು ಆ ರೀತಿಯ ದೂರನ್ನು ಸ್ವೀಕರಿಸಲು ನಿರಾಕರಿಸಿ ತನಿಖೆ ನಡೆಸಲು ಮುಂದಾದರು. ಆ ವೇಳೆಗೆ ಪೊಲೀಸರಿಗೆ ಮತ್ತೊಂದು ಅಂಶ ತಿಳಿಯಿತು. ಅದೆಂದರೆ ಆಕಾಂಕ್ಷಳಿಗೆ ಇದ್ದಂತಹ ಪ್ರೇಮ ಸಂಬಂಧ.

**ಯಾರದು?**

ಆಕಾಂಕ್ಷ ಜಲಂಧರ್‌ನ ಪಾಗ್ವಾಡ ತಾಲೂಕಿನ ಎಲ್‌ಎಸ್‌ಎಲ್‌ಪಿಯು ಕಾಲೇಜಿನಲ್ಲಿ 3 ವರ್ಷಗಳ ಏರೋನಾಟಿಕಲ್ ಇಂಜಿನಿಯರಿಂಗ್ ಪದವಿಗೆ ಸೇರಿದ್ದಳು. 3 ವರ್ಷ ಆ ಕಾಲೇಜಿನಲ್ಲಿ ಕಲಿತಂತಹ ಆಕೆ ಕಳೆದ ವರ್ಷ ತನ್ನ ಡಿಗ್ರಿ ಕೋರ್ಸನ್ನು ಮುಗಿಸಿದ್ದಳು. ತದನಂತರ ಉದ್ಯೋಗದ ಬೇಟೆಗೆ ಇಳಿದಂತಹ ಆಕೆಗೆ ದೆಹಲಿಯ ಸಂಸ್ಥೆಯೊಂದರಲ್ಲಿ ಕೆಲಸ ಸಿಕ್ಕಿತ್ತು. ಆಕೆ ದೆಹಲಿಯಲ್ಲಿಯೇ ವಾಸವಿದ್ದಳು. ಆಕೆ ಪಾಗ್ವಾಡ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಅದೇ ಕಾಲೇಜಿನ ಪ್ರಾಧ್ಯಾಪಕ ಕೇರಳ ಮೂಲದ ಬಿಜಿಲ್ ಮ್ಯಾಥ್ಯೂ ಎಂಬಾತನೊಂದಿಗೆ ಪ್ರೇಮ ಸಂಬಂಧವನ್ನು ಹೊಂದಿದ್ದಳು. ಆದರೆ ಬಿಜಿಲ್ ಮ್ಯಾಥ್ಯೂಗೆ ಈಗಾಗಲೇ ಮದುವೆಯಾಗಿದ್ದು 2 ಮಕ್ಕಳನ್ನೂ ಹೊಂದಿದ್ದ. ಆತನಿಗೆ ತನ್ನ ಪತ್ನಿಗೆ ವಿಚ್ಛೇದನ ನೀಡಿ ತನ್ನನ್ನು ಮದುವೆಯಾಗುವಂತೆ ಆಕಾಂಕ್ಷ ಪೀಡಿಸುತ್ತಿದ್ದಳು. ಆದರೆ ಮ್ಯಾಥ್ಯೂ ಅದಕ್ಕೆ ಒಡಂಬಡಿರಲಿಲ್ಲ, ಇದರಿಂದಾಗಿ ಆಕಾಂಕ್ಷ ನೊಂದಿದ್ದಳು. ಇದೇ ವಿಚಾರಕ್ಕೆ ಮಾತನಾಡಲು ಎಂದು ಆಕೆ ದೆಹಲಿಯಿಂದ ಜಲಂಧರ್‌ಗೆ ಹೋಗಿದ್ದಳು. ಅಲ್ಲಿಂದ ಆತನ ಮನೆಗೂ ಹೋಗಿ ಗಲಾಟೆ ಮಾಡಿದ್ದಳು. ತದನಂತರ ಕಾಲೇಜಿಗೆ ಬಂದು ಬಿಜಿಲ್ ಮ್ಯಾಥ್ಯೂಗೆ ಒತ್ತಡ ಹೇರಲೆಂದು ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಮೆಸೇಜ್ ಕಳುಹಿಸಿದ್ದಳು. ಅದಕ್ಕೆ ಉತ್ತರ ಬಾರದೇ ಇದ್ದಂತಹ ಸಂದರ್ಭದಲ್ಲಿ ಕಾಲೇಜಿನ 3ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆಕಾಂಕ್ಷ ಆತ್ಮಹತ್ಯೆ ಮಾಡಿಕೊಳ್ಳಲು ಬಿಜಿಲ್ ಮ್ಯಾಥ್ಯೂ ದುಷ್ಪ್ರೇರಣೆ ನೀಡಿದ್ದಾನೆ ಎಂದು ಆಕೆಯ ಮನೆಯವರು ನೀಡಿದ ದೂರಿನಂತೆ ಪಾಗ್ವಾಡ ಠಾಣೆಯಲ್ಲಿ ಕೇಸು ದಾಖಲಾಗಿದ್ದು ಆತನನ್ನು ಪೊಲೀಸರು ಬಂಧಿಸಿದ್ದಾರೆ. ಆಕಾಂಕ್ಷಳ ಮೊಬೈಲ್‌ನಲ್ಲಿ ಡೆತ್ ನೋಟು ಪತ್ತೆಯಾಗಿದ್ದು ಅದರಲ್ಲಿ ಈ ಅಕ್ರಮ ಸಂಬಂಧದ ಬಗ್ಗೆ ವಿವರವಾಗಿ ಬರೆದಿದ್ದಾಳೆ. ಇದರ ಆಧಾರದಲ್ಲಿಯೇ ಕೇಸು ದಾಖಲಾಗಿದೆ.

**ಊರಿಗೆ ಮೃತದೇಹ**

ಆಕಾಂಕ್ಷಳ ಮರಣೋತ್ತರ ಪರೀಕ್ಷೆ ಪಾಗ್ವಾಡ ಸಿವಿಲ್ ಆಸ್ಪತ್ರೆಯಲ್ಲಿ ನಡೆದಿದ್ದು ಆಕೆ ಸ್ವಯಂ ಆಗಿ 3ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ. ಊರಿನಿಂದ ಜಲಂಧರ್‌ಗೆ ಹೋಗಿದ್ದಂತಹ ಸಂಬಂಧಿಕರಿಗೆ ಮೃತದೇಹವನ್ನು ಬಿಟ್ಟು ಕೊಡಲಾಗಿದೆ. ಆಕೆಯ ಮೃತದೇಹವನ್ನು ಊರಿಗೆ ಕಳುಹಿಸುವ ವ್ಯವಸ್ಥೆಯನ್ನು ಆಕೆ ದೆಹಲಿಯಲ್ಲಿ ಉದ್ಯೋಗದಲ್ಲಿದ್ದ ಸಂಸ್ಥೆಯವರು ಮಾಡಿದ್ದಾರೆ. ಆಕೆಗೆ ಮನೆಮಂದಿ ಬೆಂಗಳೂರಿಗೆ ಬಂದಿದ್ದರೆ ಆಕೆಯ ತಾಯಿ ಸಿಂಧೂದೇವಿ ಒಂದು ದಿನದ ಮೊದಲೇ ಊರಿಗೆ ಬಂದಿದ್ದಾರೆ. ಮೃತದೇಹ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದು ಅಲ್ಲಿಂದ ರಸ್ತೆಯ ಮೂಲಕ ಅಂಬುಲೆನ್ಸ್‌ನಲ್ಲಿ ಬೊಳಿಯದ ಮನೆಗೆ ತರಲಾಗಿತ್ತು. ಅಲ್ಲಿ ಹಿಂದೂ ಧಾರ್ಮಿಕ ವಿಧಿವಿಧಾನಗಳಂತೆ ಅಂತ್ಯಕ್ರಿಯೆ ನಡೆಸಲಾಗಿದೆ. ☯







# ಕರಡಿ ಸಂತೋಷ್‌ನನ್ನು ಬರ್ಬರವಾಗಿ ಕೊಲೆ ಮಾಡಿದ್ದ ಆರೋಪಿಗಳನ್ನು ಬಂಧಿಸಿದ ಹಾರೋಹಳ್ಳಿ ಪೊಲೀಸರು!

ರಾಮನಗರ

✍ ಶಾಂತರಾಜು ಜಿ. ಕಲ್ಲಹಳ್ಳಿ



ಸಂತೋಷ್ ಅಲಿಯಾಸ್ ಕರಡಿ ಬದುಕಿದ್ದಾಗ

**ಕಾ**ಯಕವೇ ಕೈಲಾಸ ಎಂಬಂತೆ ಪ್ರತಿಯೊಬ್ಬರು ಜೀವನ ನಡೆಸಲು ಯಾವುದಾದರೊಂದು ಕೆಲಸ ಮಾಡಲೇಬೇಕು. ಯಾಕೆಂದರೆ ಒಬ್ಬ ದುಡಿಯುವ ವ್ಯಕ್ತಿಯ ಮೇಲೆ ಅವರದೇ ಆದ ಕುಟುಂಬಯಿರುತ್ತೆ. ಅವರಿಗೂ ತನ್ನ ಹೆಂಡತಿ, ಮಕ್ಕಳು ಮತ್ತು ತಂದೆತಾಯಿಯ ಜವಾಬ್ದಾರಿಯೂ ಇರುತ್ತೆ. ಪ್ರತಿನಿತ ಜೀವನ ಸಾಗಿಸುವತ್ತ ಚಿಂತಿಸಿ ದುಡಿಮೆ ಮಾಡುತ್ತಾರೆ. ಮನೆಯಿಂದ ಹೊರಗೆ ಬಂದು ಕೆಲಸ ಕಾರ್ಯಗಳಲ್ಲಿದ್ದಾಗ ಯಾರಾದರೂ ಸರಿ ಸ್ನೇಹಿತರಾಗುತ್ತಾರೆ. ಅಲ್ಲಿ ಒಳ್ಳೆಯದು ಕೆಟ್ಟದ್ದು ಎಂಬ ಭಾವನೆ ಆ ಸಂದರ್ಭಕ್ಕೆ ಗೊತ್ತಾಗುವುದೇ ಇಲ್ಲ. ಹೇಗೋ ಸ್ನೇಹ ಬೆಳೆಸಿ ಹತ್ತಿರವಾಗುತ್ತಾರೆ. ಇಂದಿನ ಜೀವನದಂತೆ ಎಂಜಾಯ್‌ಮೆಂಟ್ ಎಂಬುದು ಎಲ್ಲರು ಬಯಸುವುದು ಸಹಜವಾಗಿದೆ. ಕಷ್ಟಪಟ್ಟು ದುಡಿಯುವವರೆಂದರೆ ಆಟೋ ಚಾಲಕರು, ಗೂಡ್ಸ್ ವಾಹನಗಳ ಡ್ರೈವರ್‌ಗಳು, ಗಾರೆಕೆಲಸ ಮಾಡುವ ಕಾರ್ಮಿಕರುಗಳು ಹೆಚ್ಚು ಬಿಡುವಿನ ವೇಳೆ ಅಥವಾ ಭಾನುವಾರದ ರಜಾದಿನಗಳಲ್ಲಿ ಸ್ನೇಹಿತರ ಜೊತೆ ಎಂಜಾಯ್ ಮಾಡಲು ಆಯ್ಕೆ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರು ಎಂಜಾಯ್ ಮಾಡುವುದೇ ಒಂದು ಜೀವನ ಎಂದು ತಿಳಿದು ತಮ್ಮ ಕುಟುಂಬದವರನ್ನು ಮರೆತು ಅವರ ಊಟ ಉಪಚಾರ ಎಲ್ಲವನ್ನು ಮರೆತು ಸ್ನೇಹಿತರೊಂದಿಗೆ ಸೇರಿ ಇಲ್ಲಸಲ್ಲದ ಚಟಗಳನ್ನು ಅಂದರೆ ಜೂಜಾಟ, ಗಾಂಜಾ ಸೇವನೆ ಹಾಗೂ ಕುಡಿತದ ಚಟಗಳನ್ನು ವಿಪರೀತವಾಗಿ ಅಭ್ಯಾಸ ಮಾಡಿಕೊಂಡು ಯಾರ ಮಾತಿಗೂ ಬೆಲೆ ಕೊಡದೇ ಸಣ್ಣಪುಟ್ಟ ವಿಚಾರಗಳಿಗೆ ಗಲಾಟೆ ಮಾಡಿಕೊಂಡು ಕೊನೆಗೆ ಕೊಲೆಯ ರೂಪದಲ್ಲಿ ಬೀದಿ ಹೆಣವಾಗುತ್ತಾರೆ. ಇಂತಹ ವಿಚಾರಗಳೇ ಈಗಿನ ಚಿತ್ರಣವಾಗಿದೆ.



ಎಸ್ಪಿ ಎಸ್. ಶ್ರೀನಿವಾಸ್‌ಗೌಡ

ರಾಮನಗರ ಜಿಲ್ಲೆ, ಹಾರೋಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇತ್ತೀಚೆಗೆ ಹಾರೋಹಳ್ಳಿಯ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಹತ್ತಿರ, ಅದು ಬೆಂಗಳೂರು-ಕನಕಪುರ ಮುಖ್ಯರಸ್ತೆ, ದಿನಾಂಕ 03-05-2025ರಂದು ಹಾರೋಹಳ್ಳಿಯ ಸಿದ್ದಾಪುರ ಗ್ರಾಮದ ಸಂತೋಷ್ ಕುಮಾರ್ ಅಲಿಯಾಸ್ ಕರಡಿ ಎಂಬಾತನು ತನ್ನ ಗ್ರಾಮದಿಂದ ಸಂಬಂಧಿಕನಾದ ಜಿತೇಂದ್ರನನ್ನು ತನ್ನ ಬೈಕ್‌ನಲ್ಲಿ ಕೂರಿಸಿಕೊಂಡು ಹೋಗುವಾಗ ಬೆಂಗಳೂರು ಕಡೆಯಿಂದ ಬಂದ ಐಕಾನ್ ಕಾರಿನಿಂದ ಸಂತೋಷ್ ಅಲಿಯಾಸ್ ಕರಡಿ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದು, ಡಿಕ್ಕಿ ಹೊಡೆದ ರಭಸಕ್ಕೆ ಗಾಡಿ ಕೆಳಕ್ಕೆ ಬಿದ್ದು ತಕ್ಷಣ ಗಾಬರಿಗೊಂಡು ಸಂತೋಷ್ ಓಡಿ ಹೋಗುವಾಗ ಕಾರಿನಿಂದ ಕೆಳಗೆ ಇಳಿದ ಆರೋಪಿಗಳು ಮತ್ತು ಆಟೋದಲ್ಲಿ ಬಂದಿದ್ದ ಮತ್ತೆ ಕೆಲವು ಆರೋಪಿಗಳು ಸಂತೋಷ್‌ನನ್ನು ಅಟ್ಟಾಡಿಸಿಕೊಂಡು ಹೋಗಿ ದುರ್ಗಾ ಹೋಟೆಲ್ ಮುಂಭಾಗ ಲಾಂಗುಗಳಿಂದ ಮನ ಬಂದಂತೆ ಸಂತೋಷ್ ಅಲಿಯಾಸ್ ಕರಡಿಯನ್ನು ಕೊಚ್ಚಿ ಕೊಲೆ ಮಾಡಿ ಅಲ್ಲಿಂದ ಪರಾರಿಯಾಗಿದ್ದರು. ಈ ವಿಚಾರವಾಗಿ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಮೊ.ಸಂ. 113/2025 ಕಲಂ 281, 125(ಎ), 103(1), 3(5) ಬಿಎನ್‌ಎಸ್ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು, ಆರೋಪಿಗಳ ಪತ್ತೆಗಾಗಿ ವಿಶೇಷ ತಂಡವನ್ನು ರಾಮನಗರ ಜಿಲ್ಲಾ ವರಿಷ್ಠಾಧಿಕಾರಿಗಳ ಮಾರ್ಗದರ್ಶನದಲ್ಲಿ ರಚನೆ ಮಾಡಿ ಈ ಪ್ರಕರಣದ ತನಿಖೆಯನ್ನು ಬೇಧಿಸಿದಾಗ ಮೃತ ಸಂತೋಷ್‌ಕುಮಾರ್ ಅಲಿಯಾಸ್ ಕರಡಿ ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ಠಾಣಾ ವ್ಯಾಪ್ತಿಯಲ್ಲಿ 2023ನೇ ಇಸವಿಯಲ್ಲಿ ಶರತ್ ಎಂಬಾತನ ಕೊಲೆ ಮಾಡಿ ಆ ಪ್ರಕರಣದಲ್ಲಿ ಜೈಲು ಸೇರಿದ್ದ. ಕೆಲದಿನಗಳ ನಂತರ ಜಾಮೀನು ಪಡೆದು ಜೈಲಿನಿಂದ ಹೊರಬಂದು ಹಾರೋಹಳ್ಳಿಯ ತನ್ನ ಗ್ರಾಮವಾದ ಸಿದ್ದಾಪುರಕ್ಕೆ ಬಂದು ನೆಲೆಸಿದ್ದ. ಇತ್ತ ಮೃತ ಶರತ್‌ನ ಸಹೋದರ ವರುಣ್ ತನ್ನ ತಮ್ಮನ ಸಾವಿಗೆ ಕಾರಣನಾದ ಸಂತೋಷ್ ಅಲಿಯಾಸ್ ಕರಡಿಯ ಕೊಲೆ ಮಾಡಿ ಸೇಡು ತೀರಿಸಿಕೊಳ್ಳಲೇಬೇಕು ಎಂದು ನಿರ್ಧರಿಸಿ, ತನ್ನ ಸ್ನೇಹಿತರನ್ನು ಗುಂಪು ಕಟ್ಟಿಕೊಂಡು ಸಂತೋಷ್ ಅಲಿಯಾಸ್ ಕರಡಿಯ ಚಲನವಲನಗಳು ಪತ್ತೆ ಮಾಡಿಕೊಂಡು ಕೊಲೆ ಮಾಡಲು ಸಂಚು ರೂಪಿಸಿಕೊಂಡು ಬೆಂಗಳೂರಿನಿಂದ ಹಾರೋಹಳ್ಳಿ ಕಡೆ ಬಂದು ಸಂತೋಷ್‌ನನ್ನು ಹಿಂಬಾಲಿಸಿಕೊಂಡು ಬಂದು ಕೊಲೆ ಮಾಡಿರುವುದು ವಿಚಾರಣೆಯಲ್ಲಿ ಒಪ್ಪಿಕೊಂಡಿದ್ದಾರೆ.



ರಕ್ತದ ಮಡುವಿನಲ್ಲಿ ಸಂತೋಷ್‌ನ ಮೃತದೇಹ



ಪ್ರಮುಖ ಆರೋಪಿ ವರುಣ್ ಎಸ್. ಅ॥ ಬೋಡ

ಆರೋಪಿಗಳಾದ 1) ವರುಣ್ ಎಸ್. ಅಲಿಯಾಸ್ ವರುಣ್‌ಗೌಡ ಅಲಿಯಾಸ್ ವರುಣ್‌ಕುಮಾರ್ ಅಲಿಯಾಸ್ ಬೋಡ ಬಿನ್ ಶಿವಕುಮಾರ್, 30 ವರ್ಷ, ವೃತ್ತಿ ಚಾಲಕ. ಈತ ಮೂಲ ಕನಕಪುರದ ಕೋಡಿಹಳ್ಳಿಯ ಹೂಕುಂದ ಗ್ರಾಮದವನು. ಈಗ ಸೋಮನಹಳ್ಳಿಯಲ್ಲಿ ವಾಸವಿದ್ದ. 2) ರಜಿತ್ ಅಲಿಯಾಸ್ ಜಿಮ್ಮಿ ಬಿನ್ ರಾಮಕೃಷ್ಣ, 28 ವರ್ಷ, ವೃತ್ತಿ- ಝೆಪ್ಟೋ ಡೆಲಿವರಿ, ಬಾರ್ ಕೆಲಸ. ಈತ ಕನಕಪುರ ಮುಖ್ಯರಸ್ತೆಯ ದೊಡ್ಡಕಲ್ಲಸಂದ್ರದವನು. 3) ಹರೀಶ್ ಅಲಿಯಾಸ್ ಲೊಡ್ಡೆ ಬಿನ್ ಲೇಟ್ ಶ್ರೀನಿವಾಸ್, 29 ವರ್ಷ, ವೃತ್ತಿ ಝೆಪ್ಟೋ ಡೆಲಿವರಿ ಬಾಯ್, ಈತ ದೊಡ್ಡಕಲ್ಲಸಂದ್ರದವನು. 4) ದರ್ಶನ್ ಅಲಿಯಾಸ್ ಆಟೋ ಧನು ಬಿನ್ ಕೃಷ್ಣ, 25 ವರ್ಷ, ಆಟೋ ಚಾಲಕ, ಈತ ಮದ್ದೂರು ತಾಲ್ಲೂಕಿನವನು, ಹಾಲಿ ವಾಸ ದೊಡ್ಡಕಲ್ಲಸಂದ್ರ, ಬೆಂಗಳೂರಿನವನು. 5) ಯಶ್ವಂತ್ ಎಸ್. ಅಲಿಯಾಸ್ ರಿಚ್‌ಕಿಡ್ ಅಲಿಯೊಸ್ ವೊಟ್ಟೆ ಬಿನ್ ಶಿವಲಿಂಗೇಗೌಡ, 23 ವರ್ಷ, ಆಟೋ ಚಾಲಕ, ಹಾಲಿ ವಾಸ ತಾತಗುಣಿ, ಮೂಲ ವಾಸ ಕನಕಪುರದ ಚೀರಣಕುಪ್ಪೆ ಗ್ರಾಮದವನು.

ಈ ಎಲ್ಲಾ ಆರೋಪಿಗಳ ಪತ್ತೆಕಾರ್ಯದಲ್ಲಿ

☞ 10



ಎಎಸ್ಪಿ ಸುರೇಶ್



ಡಿವೈಎಸ್ಪಿ ಶ್ರೀನಿವಾಸ್



ಸಿಪಿಐ ಅರ್ಜುನ್ ಸಿ.ಆರ್.



ಪಿಎಸ್‌ಐ ನಟರಾಜು



ಘಟನಾ ಸ್ಥಳದಲ್ಲಿ ಪೊಲೀಸರು




ಇದೇ ಬೈಕ್‌ಗೆ ಗುದ್ದಿರುವುದು (ಸಂತೋಷ್ ಬೈಕ್)



ಇದೇ ಕಾರಿನಲ್ಲಿ ಬಂದು ಬೈಕ್‌ಗೆ ಗುದ್ದಿದ್ದು

# ಯಾರ ನೆರವೂ ಇಲ್ಲ, ಬೆಂಬಲವೂ ಇಲ್ಲ... ಭಯೋತ್ಪಾದನೆ ವಿರುದ್ಧ ಭಾರತ ಏಕಾಂಗಿ ಸಮರ!



ಗಿರೀಶ್ ಲಿಂಗಣ್ಣ

**ಈ ಅದ್ಭುತ ವಿಚಾರವನ್ನು ದೇಶದ ಜನತೆಯೊಂದಿಗೆ ಹಂಚಿಕೊಂಡಿರುವ ಶ್ರೀ ಗಿರೀಶ್ ಲಿಂಗಣ್ಣ ಅವರು ವಿಜ್ಞಾನ ಬರಹಗಾರ, ರಕ್ಷಣೆ, ಏರೋಸ್ಪೇಸ್ ಮತ್ತು ರಾಜಕೀಯ ವಿಶ್ಲೇಷಕರಾಗಿದ್ದು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಪ್ರಸ್ತುತ ಅವರು ಜರ್ಮನಿಯ ಎಡಿಡಿ ಇಂಜಿನಿಯರಿಂಗ್ ಜಿಎಂಬಿಎಚ್ ಸಂಸ್ಥೆಯ ಅಂಗಸಂಸ್ಥೆಯಾದ ಎಡಿಡಿ ಇಂಜಿನಿಯರಿಂಗ್ ಕಾಂಪೊನೆಂಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ನಿರ್ದೇಶಕರಾಗಿದ್ದಾರೆ.**





ಭಾರತ ನಿರಂತರವಾಗಿ ಪಾಕಿಸ್ತಾನದ ಜೊತೆಗಿನ ಸಮಸ್ಯೆಗೆ ಮೂರನೆಯವರ ಮಧ್ಯಸ್ಥಿಕೆ ಬೇಕಾಗಿಲ್ಲವೆಂದು ಹೇಳುತ್ತಲೇ ಬಂದಿದೆ. ಆದರೂ, ಅಮೆರಿಕಾ ಮತ್ತೊಮ್ಮೆ ತಾನು ಮಧ್ಯಸ್ಥಿಕೆ ವಹಿಸಬಲ್ಲೆ ಎಂದು ಮುಂದೆ ಬಂದಿದೆ. ಕುತೂಹಲಕರ ಅಂಶವೆಂದರೆ, ಭಾರತೀಯ ಸಂಜಾತೆಯನ್ನು ವಿವಾಹವಾಗಿರುವ, ತನ್ನ ಕಠಿಣ ನಿಲುವಿಗೆ ಹೆಸರಾಗಿರುವ ಅಮೆರಿಕಾದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಈ ಯುದ್ಧದಲ್ಲಿ ಮಧ್ಯ ಪ್ರವೇಶಿಸುವುದು ಅಮೆರಿಕಾಗೆ ಅಗತ್ಯವಿಲ್ಲ ಎಂದಿದ್ದಾರೆ. ಈ ಮೊದಲು ಇಂತಹ ಪರಿಸ್ಥಿತಿ ತಲೆದೋರಿದಾಗ ಅಮೆರಿಕನ್ ನಾಯಕರು ಪಾಕಿಸ್ತಾನಿ ಮುಖಂಡರನ್ನು ವಾಷಿಂಗ್ಟನ್‌ಗೆ ಕರೆದು, ಕದನದಿಂದ ಹಿಂದೆ ಸರಿಯುವಂತೆ ಕಠಿಣ ಎಚ್ಚರಿಕೆ ನೀಡುತ್ತಿದ್ದರು. ಆದರೆ, ಅಮೆರಿಕಾದ ಈಗಿನ ನಿಲುವಿನಲ್ಲಿ ಮಹತ್ತರ ಬದಲಾವಣೆ ಆಗಿರುವಂತೆ ತೋರುತ್ತಿದೆ. ಆಶ್ಚರ್ಯಕರವಾಗಿ, ಭಾರತ - ಪಾಕಿಸ್ತಾನ ನಡುವಿನ ಇತ್ತೀಚಿನ ಕದನ ಹೆಚ್ಚೇನೂ ಜಾಗತಿಕ ಗಮನ ಸೆಳೆಯಲಿಲ್ಲ. ಈ ಯುದ್ಧದಲ್ಲಿ ಹಲವಾರು ವಿದೇಶೀ ಶಕ್ತಿಗಳು ಹಿನ್ನೆಲೆಯಲ್ಲಿ ಕಾರ್ಯಾಚರಿಸುತ್ತಿದ್ದರೂ, ವಿದೇಶೀ ಮಾಧ್ಯಮಗಳಲ್ಲಿ ಇದಕ್ಕಿಂತಲೂ ಹೆಚ್ಚು ನೂತನ ಪೋಪ್ ಆಯ್ಕೆಯ ವರದಿಗಳೇ ಕಾಣಿಸಿಕೊಂಡಿದ್ದವು. ಹಾಗೆಂದು ಈ ಕದನದ ಕುರಿತು ಕಡಿಮೆ ಆಸಕ್ತಿ ವ್ಯಕ್ತವಾಗಿರುವುದೇನೂ ಆಶ್ಚರ್ಯಕರ ಬೆಳವಣಿಗೆಯಲ್ಲ. ಈಗಾಗಲೇ ಗಾಜಾ, ಉಕ್ರೇನ್, ಯೆಮೆನ್, ಮಯನ್ಮಾರ್, ಅಷ್ಟೇ ಏಕೆ, ಅಂತರ್ಯುದ್ಧದಿಂದಾಗಿ ಪಾಕಿಸ್ತಾನದಲ್ಲೂ ಸಾವಿರಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ. ದುರದೃಷ್ಟವಶಾತ್, ಯುದ್ಧ ಮತ್ತು ಹಿಂಸಾಚಾರಗಳು ಈಗ ಸಾಮಾನ್ಯ ಸುದ್ದಿಯಂತಾಗಿದ್ದು, ಸಾಮಾನ್ಯ ನಾಗರಿಕರು ಇದಕ್ಕೆ ಪ್ರತಿಕ್ರಿಯಿಸುವುದು ಬಹಳಷ್ಟು ಕಡಿಮೆಯಾಗಿದೆ.



ವೀರ ವನಿತೆಯರಾದ ವ್ಯೂಮಿಕ ಸಿಂಗ್, ಸೋಫಿಯಾ ಖುರೇಶಿ

### ಅಮೆರಿಕಾದ ದ್ವಿಮುಖ ನಿಲುವು


ಅಮೆರಿಕಾದ ದ್ವಂದ್ವ ನಿಲುವು ವಿಚಿತ್ರವಾಗಿ ಕಂಡು ಬರುತ್ತಿದೆ. ಏಪ್ರಿಲ್ 24ರಂದು, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಬಲವಾಗಿ ಖಂಡಿಸಿ, ಅಮೆರಿಕಾ ಭಾರತದೊಡನೆ ನಿಲ್ಲುವುದಾಗಿ ಹೇಳಿದರು. ಮೇ 8ರಂದು ಅಮೆರಿಕಾದ ಸ್ಟೇಟ್ ಡಿಪಾರ್ಟ್ಮೆಂಟ್ ಸಹ ಈ ಬೆಂಬಲವನ್ನು ಪುನರುಚ್ಚರಿಸಿತು. ಆದರೆ, ಭಾರತ ಪಾಕಿಸ್ತಾನದ ಮೇಲೆ ದಾಳಿ ನಡೆಸಿದ ತಕ್ಷಣ ಅಮೆರಿಕಾದ ವರಸೆ ಬದಲಾಯಿತು. ಅಧ್ಯಕ್ಷ ಟ್ರಂಪ್ ಈ ಪರಿಸ್ಥಿತಿಯನ್ನು 'ಶೇಮ್' ಎಂದು ಕರೆದರು. ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಅವರು ಪಾಕಿಸ್ತಾನಿ ಪ್ರಧಾನಿ ಶೆಹಬಾ ಶರೀಫ್ ಅವರೊಡನೆ ಮಾತುಕತೆ ನಡೆಸಿ, ನಾಗರಿಕರ ಸಾವಿಗೆ ಸಂತಾಪ ಸೂಚಿಸಿದರು. ಆ ಬಳಿಕ, ಭಯೋತ್ಪಾದನೆಗೆ ಬೆಂಬಲಿಸುವಲ್ಲಿ ಪಾಕಿಸ್ತಾನದ ಪಾತ್ರವನ್ನು ಕುರಿತು ಯಾವುದೇ ಮಾತುಗಳು ಕೇಳಿಬರಲಿಲ್ಲ!

ಮೇ 9ರಂದು ಅಮೆರಿಕಾ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಭಾರತ - ಪಾಕಿಸ್ತಾನ ಯುದ್ಧದಲ್ಲಿ ಅಮೆರಿಕಾ ಮಧ್ಯ ಪ್ರವೇಶಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಅದು 'ಅಮೆರಿಕಾದ ಆಸಕ್ತಿಯಲ್ಲ' ಎಂದ ವ್ಯಾನ್ಸ್, ಈ ಕದನಕ್ಕೂ ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಗೂ ಯಾವುದೇ ಸಂಬಂಧವಿಲ್ಲ ಎಂದಿದ್ದರು.

ಅದೇ ದಿನ, ತನ್ನ ಇತರ ಜವಾಬ್ದಾರಿಗಳೊಡನೆ ಅಮೆರಿಕಾದ ರಾಷ್ಟ್ರೀಯ ಭದ್ರತಾ ಸಲಹೆಗಾರರೂ ಆಗಿರುವ ಮಾರ್ಕೊ ರುಬಿಯೊ ಪಾಕಿಸ್ತಾನದ ಉಪ ಪ್ರಧಾನಿ ಇಶಾಕ್ ದರ್ ಜೊತೆಗೂ ಸಮಾಲೋಚನೆ ನಡೆಸಿದರು. ಇದರ ಹಿಂದಿನ ದಿನವಷ್ಟೇ ರುಬಿಯೊ ಭಾರತದ ವಿದೇಶಾಂಗ ಸಚಿವರಾದ ಎಸ್. ಜೈಶಂಕರ್‌ಜೊತೆ ಮಾತನಾಡಿದ್ದರು.

ಈ ಎರಡೂ ಮಾತುಕತೆಗಳ ಹಿಂದಿನ ಸಾರಾಂಶವೆಂದರೆ, ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳಿಗೆ ಅಮೆರಿಕಾ ಒಂದೇ ಸಣ್ಣ ಮತ್ತು ತಟಸ್ಥ ಸಂದೇಶ ನೀಡಿತ್ತು. ಇದು ಹಿಂದಿನ ಅಮೆರಿಕಾ ಆಡಿದ ಮಾತಿಗಿಂತ ಸಂಪೂರ್ಣ ಭಿನ್ನವಾಗಿತ್ತು. ಹಿಂದಿನ ಸಂದೇಶದಲ್ಲಿ, ಅಮೆರಿಕಾ ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಭಾರತವನ್ನು ಬೆಂಬಲಿಸುವುದಾಗಿ ಹೇಳಿತ್ತು.

ಇತ್ತೀಚಿನ 'ಕದನ ವಿರಾಮವನ್ನು' ಭಾರತ ಕೇವಲ ಗುಂಡಿನ ದಾಳಿ ಮತ್ತು ಮಿಲಿಟರಿ ಕ್ರಮದ ತಾತ್ಕಾಲಿಕ ಸ್ಥಗಿತ ಎಂದಷ್ಟೇ ಹೇಳಿದೆ. ಆದರೆ, ಅಮೆರಿಕಾ ಕದನ ವಿರಾಮಕ್ಕಾಗಿ ಭಾರತ-ಪಾಕಿಸ್ತಾನ ಎರಡನ್ನೂ ಸಮಾನವಾಗಿ ಶ್ಲಾಘಿಸಿದೆ. ಭಯೋತ್ಪಾದನೆಗೆ ಬೆಂಬಲ ಕೊಡುತ್ತಿದ್ದವರು ಯಾರು, ಅಮೆರಿಕಾ ಭಯೋತ್ಪಾದನೆಯ ವಿರುದ್ಧ ಹೋರಾಡುತ್ತಿದ್ದದ್ದು ಯಾರು ಎಂಬುದನ್ನೂ ಗಮನಿಸದೆ, ಭಾರತ-ಪಾಕಿಸ್ತಾನ ಎರಡನ್ನೂ ಸಮಾನವಾಗಿ ಪರಿಗಣಿಸಿದೆ!



### ಯುದ್ಧದಿಂದ ಹೊರ ನಿಂತ ಅಮೆರಿಕಾ!

ಸರಳವಾಗಿ ಹೇಳುವುದಾದರೆ, ಅಮೆರಿಕನ್ ಸರ್ಕಾರದೊಳಗೇ ಎರಡು ವಿಭಿನ್ನ ದೃಷ್ಟಿಕೋನಗಳು ಇರುವಂತೆ ತೋರುತ್ತಿದೆ. ಒಂದು ಗುಂಪು 'ಅಮೆರಿಕಾ ಫಸ್ಟ್' ಎಂಬ ಆದ್ಯತೆಯನ್ನು ಹೊಂದಿ, ಇತರ ದೇಶಗಳ ಕದನದಿಂದ ಅಮೆರಿಕಾ ದೂರ ಉಳಿಯಬೇಕು ಎಂದು ಆಗ್ರಹಿಸುತ್ತದೆ. ಆದರೆ ಇನ್ನೊಂದು ಗುಂಪು ಇಂತಹ ಚಕಮಕಿಯಲ್ಲಿ ಪಾಲ್ಗೊಳ್ಳುತ್ತದಾದರೂ, ಒಂದು ಮಿತಿಯಲ್ಲಷ್ಟೇ ಮಧ್ಯ ಪ್ರವೇಶಿಸುತ್ತದೆ.

ಸಾಮಾನ್ಯ ಪರಿಸ್ಥಿತಿಯಲ್ಲಿ ಉಕ್ರೇನ್ ಯುದ್ಧ ಅಮೆರಿಕಾದ ವಿದೇಶಾಂಗ ನೀತಿಯಲ್ಲಿ ಪ್ರಧಾನ ಭಾಗವಾಗಿರುತ್ತಿತ್ತು. ಆದರೆ, ಈಗ ಅಮೆರಿಕಾ ಅದರಿಂದಲೂ ಹಿಂದೆ ಸರಿದಿದೆ.

ಹಿಂದಿನ ಅಮೆರಿಕನ್ ನಾಯಕತ್ವದ ರೀತಿಯಲ್ಲದೆ, ಈಗಿನ ಆಡಳಿತಕ್ಕೆ ಭಾರತ-ಪಾಕಿಸ್ತಾನಗಳ ಸುದೀರ್ಘ ಮತ್ತು ಸಂಕೀರ್ಣ ಇತಿಹಾಸದ ಅರಿವಿಲ್ಲ, ಅದರೊಡನೆ, ಭಾರತ ಪಾಕಿಸ್ತಾನದಲ್ಲಿ ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದ ಪ್ರತಿಯೊಂದು ತಾಣವೂ ಸಹ ಅಮೆರಿಕನ್ ಸರ್ಕಾರದ ಭಯೋತ್ಪಾದಕ ಸಂಸ್ಥೆಗಳ ಪಟ್ಟಿಯಲ್ಲಿ ದಾಖಲಾಗಿತ್ತು ಎಂಬ ಸತ್ಯವನ್ನೂ ಅಮೆರಿಕಾ ಸರ್ಕಾರ ಗಮನಿಸಿದಂತಿಲ್ಲ.

ಮೇ 9ರಂದು, ಅಮೆರಿಕಾ ಅತಿಹೆಚ್ಚು ಮತದ ಪಾಲು ಹೊಂದಿರುವ ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಪಾಕಿಸ್ತಾನಕ್ಕೆ 2.4 ಬಿಲಿಯನ್ ಡಾಲರ್ ಮೊತ್ತದ ಸಾಲ ನೀಡಲು ಅನುಮತಿಸಿತು. ಅದೇ ದಿನ ಪಾಕ್ ಪ್ರಧಾನಿ ಪಾಕಿಸ್ತಾನದ ಪರಮಾಣು ಶಸ್ತ್ರಾಸ್ತ್ರಗಳ ನಿರ್ವಹಣೆ ನಡೆಸುವ ನ್ಯಾಷನಲ್ ಕಮಾಂಡ್ ಅಥಾರಿಟಿಯೊಡನೆ ಸಭೆ ನಡೆಸಿದರು. ಈ ನಡೆಯನ್ನು ಜಗತ್ತು ಎಚ್ಚರಿಕೆಯ ಗಂಟೆಯಾಗಿ, ಯುದ್ಧ ಇನ್ನಷ್ಟು ತೀವ್ರತೆ ಪಡೆದುಕೊಳ್ಳುವುದರ ಸಂಕೇತವಾಗಿ ಪರಿಗಣಿಸಿತು.


ಈ ಸಂದೇಶವನ್ನು ರವಾನಿಸಿದ ಬಳಿಕ, ಪಾಕಿಸ್ತಾನವೂ ತನ್ನ ಧಾಟಿಯನ್ನು ಬದಲಾಯಿಸಿತು. ಮಧ್ಯಸ್ಥಿಕೆಗೆ ಪ್ರಯತ್ನ ನಡೆಸಿದ ದೇಶಗಳಿಗೆ ಪಾಕಿಸ್ತಾನ ಧನ್ಯವಾದ ಅರ್ಪಿಸಿತು. ಪಾಕಿಸ್ತಾನ ಕಳೆದ 30 ವರ್ಷಗಳಿಂದ ಭಾರತ-ಪಾಕಿಸ್ತಾನ ವಿಚಾರದಲ್ಲಿ ಅಂತಾರಾಷ್ಟ್ರೀಯ ಸಮುದಾಯವನ್ನೂ ಒಳಗೊಳ್ಳಲು ಪ್ರಯತ್ನ ನಡೆಸುತ್ತಿತ್ತು. ಭಾರತದ ದಾಳಿಯಲ್ಲಿ ಪಾಕಿಸ್ತಾನುಮಿಲಿಟರಿ ಭಾರೀ ಹೊಡೆತ ತಿಂದರೂ, ಇಸ್ಲಾಮಾಬಾದ್ ದೃಷ್ಟಿಯಲ್ಲಿ ಈ ಪರಿಸ್ಥಿತಿ ಅದರ ಪಾಲಿಗೆ ದೊಡ್ಡ ರಾಜತಾಂತ್ರಿಕ ಗೆಲುವಾಗಿದೆ.

### ಸಾಲದ ಕುರಿತು ಐಎಂಎಫ್ ಅಭಿಪ್ರಾಯವೇನು?

ಪಾಕಿಸ್ತಾನದ ವಿಚಾರದಲ್ಲಿ ಇನ್ನಷ್ಟು ತೊಂದರೆದಾಯಕ ಬೆಳವಣಿಗೆ ಎಂದರೆ, ಪಾಕಿಸ್ತಾನ 'ಯೋಜನೆಗಳ ಜಾರಿಯಲ್ಲಿ ಉತ್ತಮ ಕ್ರಮ ಕೈಗೊಂಡಿದೆ' ಎಂದು ಶ್ಲಾಘಿಸಿರುವ ಐಎಂಎಫ್, ಆ ದೇಶಕ್ಕೆ ಸಾಲ ನೀಡಲು ಒಪ್ಪಿಗೆ ಸೂಚಿಸಿದೆ. ಎರಡನೇ ಮಹಾಯುದ್ಧದ ಬಳಿಕ, ಜಗತ್ತಿನಲ್ಲಿ ಆರ್ಥಿಕ ಸ್ಥಿರತೆ ತರುವ ನಿಟ್ಟಿನಲ್ಲಿ ಐಎಂಎಫ್ ಅನ್ನು ಸ್ಥಾಪಿಸಲಾಯಿತು. ಶಾಂತಿ ಸ್ಥಾಪನೆಗೆ ಮತ್ತು ಸ್ಥಿರ ಆರ್ಥಿಕತೆಯ ನಿರ್ಮಾಣಕ್ಕಾಗಿ ಬೆಂಬಲ ನೀಡುವುದು ಇದರ ಗುರಿಯಾಗಿದೆ.

ಆದರೆ, ನಿರಂತರವಾಗಿ ಉದ್ವಿಗ್ನತೆಗೆ ಕಾರಣವಾಗುತ್ತಿರುವ ಪಾಕಿಸ್ತಾನದಂತಹ ದೇಶಕ್ಕೆ ಹಣ ನೀಡುವುದು ಐಎಂಎಫ್ ಉದ್ದೇಶದ ವಿರುದ್ಧವಾಗಿದೆ. ಯುದ್ಧಕ್ಕೆ ಸಕ್ರಿಯವಾಗಿ ಬೆಂಬಲ ನೀಡುವ ದೇಶವೊಂದನ್ನು ಆರ್ಥಿಕವಾಗಿ ಜವಾಬ್ದಾರಿಯುತ ಅಥವಾ ಸ್ಥಿರ ಎಂದು ಪರಿಗಣಿಸಲು ಸಾಧ್ಯವಿಲ್ಲ.

### ಇತಿಹಾಸ ಕಾನೂನು ನಿರ್ಮಿಸುವುದಿಲ್ಲ



ಹಿಂದಿನ ಉದಾಹರಣೆಗಳನ್ನು ಗಮನಿಸಿದರೆ, ಪಾಕಿಸ್ತಾನ ಯಾವಾಗೆಲ್ಲ ಭಯ ಸೃಷ್ಟಿಸಲು ಪರಮಾಣು ಶಸ್ತ್ರಾಸ್ತ್ರಗಳ ಬೆದರಿಕೆ ಒಡ್ಡಿದೆ, ಅಲ್ಲೆಲ್ಲ ಒಂದು ಮಾದರಿ ಸ್ಪಷ್ಟವಾಗಿ ಕಾಣುತ್ತದೆ. 1999ರ ಕಾರ್ಗಿಲ್ ಯುದ್ಧದ ವೇಳೆ, ಭಾರತೀಯ ಮಿಲಿಟರಿಯ, ಅದರಲ್ಲೂ ಭಾರತೀಯ ವಾಯುಪಡೆಯ ತೀವ್ರ ಪ್ರತಿಕ್ರಿಯೆ ಪಾಕಿಸ್ತಾನವನ್ನು ಹೊಸಕಿ ಹಾಕತೊಡಗಿತ್ತು. ಯುದ್ಧದ ಸಂಪೂರ್ಣ ವಿವರವನ್ನೇ ತಿಳಿದಿರದ ಆಗಿನ ಪ್ರಧಾನಿ ನವಾಜ್ ಶರೀಫ್ ಯುದ್ಧ ನಿಲ್ಲಿಸಲು ನೆರವು ಕೋರಿ ವಾಷಿಂಗ್ಟನ್‌ಗೆ ತರಾತುರಿಯಲ್ಲಿ ತೆರಳಿದ್ದರು.

ಅಮೆರಿಕಾ ಪ್ರಧಾನಿ ಬಿಲ್ ಕ್ಲಿಂಟನ್ ಮಾತ್ರವಲ್ಲದೆ, ಯುಕೆ ಪ್ರಧಾನಿ ಟೋನಿ ಬ್ಲೇರ್ ಅವರಂತಹ ನಾಯಕರು, ಅಷ್ಟೇ ಯಾಕೆ, ರಷ್ಯಾ ಸಹ ಯುದ್ಧದ ನಿಲುಗಡೆಗೆ ನೆರವಾಗಿದ್ದರು. ಹಿಂದೆ ಪಾಕಿಸ್ತಾನ ಉದ್ವಿಗ್ನತೆಯನ್ನು ತೀವ್ರಗೊಳಿಸಿದಾಗ ಅಂತಾರಾಷ್ಟ್ರೀಯ ಒತ್ತಡಗಳು ಹೇಗೆ ಕಾರ್ಯಾಚರಿಸುತ್ತಿದ್ದವು ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ.

ಆಗ ನೀಡಿದ ಅಧಿಕೃತ ಹೇಳಿಕೆಯಲ್ಲಿ, ಕಾಶ್ಮೀರದ ಕಾರ್ಗಿಲ್‌ನಲ್ಲಿ ನಡೆಯುತ್ತಿರುವ ಯುದ್ಧ ಅಪಾಯಕಾರಿಯಾಗಿದ್ದು, ಇನ್ನಷ್ಟು ತೀವ್ರ ಯುದ್ಧಕ್ಕೆ ಹಾದಿ ಮಾಡಿಕೊಡುವ ಸಾಧ್ಯತೆಗಳಿವೆ ಎಂದು ಕ್ಲಿಂಟನ್ ಮತ್ತು ನವಾಜ್ ಶರೀಫ್ ಅಭಿಪ್ರಾಯ ಪಟ್ಟಿದ್ದರು. ಭಾರತ ಮತ್ತು ಪಾಕಿಸ್ತಾನಗಳೆರಡೂ 1972ರ ಶಿಮ್ಲಾ ಒಪ್ಪಂದದಲ್ಲಿ ಜಾರಿಗೆ ಬಂದ ಲೈನ್ ಆಫ್ ಕಂಟ್ರೋಲ್ (ಎಲ್‌ಒಸಿ) ಅನ್ನು ಗೌರವಿಸಬೇಕು ಎಂದೂ ಅವರು ಅಭಿಪ್ರಾಯ ಪಟ್ಟಿದ್ದರು.

ಆದರೆ, ಅಮೆರಿಕಾ ಮಧ್ಯಸ್ಥಿಕೆದಾರನಾಗುವ, ಅಥವಾ ಯಾವುದಾದರೂ ನಿರ್ಣಯ ನೀಡುವ ಕುರಿತು ಆಗಲೂ ಯಾವುದೇ ಮಾತುಕತೆಗಳಾಗಿರಲಿಲ್ಲ. ಆಗಿನ ಗಮನ ಸಂಪೂರ್ಣವಾಗಿ ಹಿಂದಿನ ಒಪ್ಪಂದಗಳಿಗೆ ಬದ್ಧವಾಗಿದ್ದು, ಇನ್ನಷ್ಟು ಚಕಮಕಿ ನಡೆಯದಂತೆ ತಡೆಯುವುದರತ್ತಲೇ ಇತ್ತು.

ಡಿಸೆಂಬರ್ 13, 2001ರಂದು ಉಗ್ರಗಾಮಿ ಸಂಘಟನೆಯಾದ ಜೈಷ್ ಎ. ಮೊಹಮ್ಮದ್ ಭಯೋತ್ಪಾದಕರು ದಾಳಿ ನಡೆಸಿದ ಬಳಿಕ, ಭಾರತ 'ಆಪರೇಷನ್ ಪರಾಕ್ರಮ್' ನಡೆಸಿತ್ತು. ಭಯೋತ್ಪಾದನಾ ದಾಳಿಗೆ ಪ್ರತಿಕ್ರಿಯೆಯಾಗಿ ಭಾರತ ಸಾವಿರಾರು ಸೈನಿಕರು ಮತ್ತು ಭಾರೀ ಆಯುಧಗಳನ್ನು ಭಾರತ-ಪಾಕ್ ಗಡಿಗೆ ರವಾನಿಸಿತ್ತು.

ಗಡಿಯಲ್ಲಿ ಯೋಧರ ಕಲೆಹಾಕುವಿಕೆ ಭಾರತ - ಪಾಕಿಸ್ತಾನ ಎರಡನ್ನೂ ಅಪಾಯಕಾರಿ ಯುದ್ಧದಂಚಿಗೆ ತಂದು ನಿಲ್ಲಿಸಿತ್ತು. ಪರಿಸ್ಥಿತಿಯನ್ನು ತಿಳಿಯಾಗಿಸುವ ಸಲುವಾಗಿ ಅಮೆರಿಕಾದ ರಕ್ಷಣಾ ಕಾರ್ಯದರ್ಶಿ ಡೊನಾಲ್ಡ್ ರಮ್ಸ್‌ಫೆಲ್ಡ್ ನವದೆಹಲಿಗೆ ಬಂದಿದ್ದರು. ಜಪಾನ್ ಮತ್ತು ಯುಕೆ ಸಹ ಉದ್ವಿಗ್ನತೆ ಶಮನಗೊಳಿಸಿ, ಪೂರ್ಣ ಪ್ರಮಾಣದ ಯುದ್ಧ ಉಂಟಾಗದಂತೆ ತಡೆಯಲು ಪ್ರಯತ್ನ ನಡೆಸಿದ್ದವು.

2019ರ ಬಾಲಾಕೋಟ್ ವಾಯುದಾಳಿಯ ಸಂದರ್ಭದಲ್ಲಿ, ಅಮೆರಿಕಾ ತೆರೆಮರೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಭಾರತೀಯ ಪೈಲಟ್ ಪಾಕಿಸ್ತಾನದಲ್ಲಿ ಸೆರೆಯಾದ ಬಳಿಕ, ಆತನನ್ನು ತಕ್ಷಣವೇ ಬಿಡುಗಡೆಗೊಳಿಸುವಂತೆ ಅಮೆರಿಕಾ ಪಾಕ್ ಮೇಲೆ ಭಾರೀ ಒತ್ತಡ ಹೇರಿತ್ತು. ಆ ಬಳಿಕ, ಡೊನಾಲ್ಡ್ ಟ್ರಂಪ್ ತನ್ನ ಮೊದಲನೇ ಅಧ್ಯಕ್ಷೀಯ ಅವಧಿಯಲ್ಲಿ ಕಾಶ್ಮೀರ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸುವುದಾಗಿ ಮೂರು ಬಾರಿ ಹೇಳಿದ್ದರು.

ಆದರೆ, ಪ್ರತಿ ಬಾರಿಯೂ ಭಾರತ ಡೊನಾಲ್ಡ್ ಟ್ರಂಪ್ ಸಲಹೆಯನ್ನು ದೃಢವಾಗಿ ನಿರಾಕರಿಸಿತ್ತು. ಕಾಶ್ಮೀರ ವಿಚಾರ ಭಾರತ - ಪಾಕಿಸ್ತಾನಗಳ ನಡುವಿನ ದ್ವಿಪಕ್ಷೀಯ ವಿಚಾರ ಎನ್ನುವುದು ಭಾರತದ ಸ್ಪಷ್ಟ ನಿಲುವಾಗಿತ್ತು. ಈ ಬಾರಿಯೂ ಭಾರತ ಇದೇ ಪ್ರತಿಕ್ರಿಯೆ ನೀಡುವ ನಿರೀಕ್ಷೆಗಳಿದ್ದು, ಭಾರತ ಯಾವುದೇ ಬಾಹ್ಯ ಮಧ್ಯಸ್ಥಿಕೆಯನ್ನು ಒಪ್ಪುವ ಸಾಧ್ಯತೆಗಳಿಲ್ಲ.

### ಮೈದಾನದಲ್ಲಿ ಹೊಸ ಆಟಗಾರರು!

ಭಾರತ-ಪಾಕ್ ವಿಚಾರದಲ್ಲಿ ಪಾಲ್ಗೊಳ್ಳುತ್ತಿರುವ ಹೊಸ ರಾಷ್ಟ್ರಗಳತ್ತ ಈಗ ಗಮನ ಹರಿಸೋಣ. ಅಂತಹ ರಾಷ್ಟ್ರಗಳ ಪೈಕಿ ಅಜರ್ ಬೈಜಾನ್ ಸಹ ಒಂದಾಗಿದ್ದು, ಪಾಕಿಸ್ತಾನಕ್ಕೆ ಆಯುಧ ಪೂರೈಕೆ ನಡೆಸುವುದು ಮಾತ್ರವಲ್ಲದೆ, ಆ ದೇಶಕ್ಕೆ ಬಲವಾದ ಬೆಂಬಲ ನೀಡಿದೆ. ಅಜರ್ಬೈಜಾನ್ ಇತ್ತೀಚೆಗೆ ಲೇಸರ್ ಆಧಾರಿತ ಆಯುಧಗಳು ಮತ್ತು ಮೂಲತಃ ಟರ್ಕಿ ನಿರ್ಮಾಣದ ಬೇರಾಕ್ತರ್ ಟಿಬಿ-2 ಡ್ರೋನ್‌ಗಳು ಸೇರಿದಂತೆ, ರಕ್ಷಣಾ ಉಪಕರಣಗಳ ಉತ್ಪಾದನೆಯನ್ನು ಹೆಚ್ಚಿಸಿದೆ. ಈ ಡ್ರೋನ್ ಒಂದು ವಿವಾದಿತ ಪ್ರದೇಶಕ್ಕಾಗಿ ಅಜರ್ ಬೈಜಾನ್ ಮತ್ತು ಅರ್ಮೇನಿಯಾಗಳ ನಡುವೆ ನಡೆದ ನಗೊರ್ನೊ-ಕರಾಬಾಖ್ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಬೇರಾಕ್ತರ್ ಟಿಬಿ-2 ಡ್ರೋನ್ ಆಗಸದಿಂದಲೇ ಶತ್ರು ನೆಲೆಗಳ ಮೇಲೆ ದಾಳಿ ನಡೆಸಲು ಯಶಸ್ವಿಯಾಗಿ, ಆ ಯುದ್ಧದಲ್ಲಿ ಅಜರ್‌ಬೈಜಾನ್‌ಗೆ ಮೇಲುಗೈ ಸಾಧಿಸಲು ನೆರವಾಗಿತ್ತು.

ಇನ್ನು ಟರ್ಕಿ ಸಹ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ ಎನ್ನಲಾಗಿದೆ. ಮೇ 8ರಂದು ಟರ್ಕಿ ಮಿಲಿಟರಿ ಸಾಗಾಣಿಕಾ ವಿಮಾನವೊಂದು ಕರಾಚಿಯಲ್ಲಿ ಕಾಣಿಸಿಕೊಂಡಿತ್ತು. ಅದಕ್ಕೆ ಕೆಲ ದಿನಗಳ ಹಿಂದಷ್ಟೇ ಒಂದು ಟರ್ಕಿ ಯುದ್ಧನೌಕೆ ಅಲ್ಲಿ ಡಾಕಿಂಗ್ ನಡೆಸಿತ್ತು.

ಪಾಕಿಸ್ತಾನ ಈಗಾಗಲೇ ಬೇರಾಕ್ತರ್ ಅಕಿಂಚಿಯಂತಹ ಶಕ್ತಿಶಾಲಿ, ಸಶಸ್ತ್ರ ಡ್ರೋನ್ ಸೇರಿದಂತೆ ಟರ್ಕಿಶ್ ಡ್ರೋನ್‌ಗಳನ್ನು ಬಳಸುತ್ತಿದೆ. ಈ ಡ್ರೋನ್ 1,500 ಕೆಜಿಯಷ್ಟು ತೂಕದ ಆಯುಧಗಳನ್ನು ಒಯ್ಯಬಲ್ಲದಾಗಿದ್ದು, 6,000 ಕಿಲೋಮೀಟರ್‌ಗಳಷ್ಟು ದೂರ ಸಾಗಬಲ್ಲದು. ಇದೊಂದು ಕೇವಲ ಕಣ್ಗಾವಲು ಡ್ರೋನ್ ಮಾತ್ರವಲ್ಲದೆ, ಸಂಪೂರ್ಣ ಯುದ್ಧದ ಏರ್‌ಕ್ರಾಫ್ಟ್ ಆಗಿದ್ದು, ಬಹಳಷ್ಟು ದೂರದಲ್ಲಿರುವ ಗುರಿಗಳ ಮೇಲೂ ದಾಳಿ ನನಡೆಸಬಲ್ಲದು.

ಇಲ್ಲಿಯತನಕ ಪಾಕಿಸ್ತಾನ ಕೇವಲ ಸೊಂಗಾರ್ ಡ್ರೋನ್‌ಗಳನ್ನು ಮಾತ್ರವೇ ಬಳಸಿಕೊಂಡಿದೆ ಎನ್ನಲಾಗಿದೆ. ಈ ಡ್ರೋನ್‌ಗಳು





☞12

## ಪಾಕ್ ಕಳ್ಳಾಟ ಮತ್ತೆ ಬಯಲು!

ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ತನ್ನ ಇಡೀ ಕುಟುಂಬವನ್ನು ಕಳೆದುಕೊಂಡ ಉಗ್ರ ಮಸೂದ್ ಆಜರ್ ಕುಟುಂಬಕ್ಕೆ ಪಾಕಿಸ್ತಾನ ಸರ್ಕಾರ 14 ಕೋಟಿ ರೂ ಪರಿಹಾರ ನೀಡಲು ಮುಂದಾಗಿದೆ. ಈ ಹಿಂದೆ ಭಾರತದ ಸೇನಾ ದಾಳಿಯಿಂದ ತನ್ನ ಮೂಲಭೂತ ಸೌಕರ್ಯಗಳು ನಾಶವಾಗಿದೆ ಎಂದು ಹೇಳಿ ಅತ್ತೂ ಕರೆದು ಅಂತಾರಾಷ್ಟ್ರೀಯ ಹಣಕಾಸು ನಿಧಿ (IMF)ನಿಂದ ನೂರಾರು ಬಿಲಿಯನ್ ಡಾಲರ್ ಹಣ ಸಾಲ ಪಡೆದುಕೊಂಡಿದ್ದ ಪಾಕಿಸ್ತಾನ ಇದೀಗ ಆ ಹಣವನ್ನು ದುರ್ಬಳಕೆ ಮಾಡಿಕೊಳ್ಳಲು ಮುಂದಾಗಿದೆ ಎಂದು ಹೇಳಲಾಗುತ್ತಿದೆ.

ಟ್ರಿಬ್ಯೂನ್ ಇಂಡಿಯಾದ ವರದಿಯ ಪ್ರಕಾರ, ಪಾಕಿಸ್ತಾನ ಸರ್ಕಾರ ಭಯೋತ್ಪಾದಕ ಮಸೂದ್ ಅಜರ್‌ಗೆ 14 ಕೋಟಿ ರೂಪಾಯಿ ಪರಿಹಾರ ನೀಡಬಹುದು ಎನ್ನಲಾಗಿದೆ. ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರ ವೇಳೆ ಮಸೂದ್ ಅಜರ್‌ನ ಉಗ್ರ ತರಬೇತಿ ಕೇಂದ್ರದ ಮೇಲೂ ದಾಳಿಯಾಗಿತ್ತು. ಭಾರತವು ಮಸೂದ್‌ನ ಭಯೋತ್ಪಾದಕ ಸಂಘಟನೆ ಜೈಶ್-ಎ-ಮೊಹಮ್ಮದ್‌ನ ಬಹಾವಲ್ಪುರ್ ಪ್ರಧಾನ ಕಚೇರಿಯ ಮೇಲೆ ಭಾರತ ವಾಯುದಾಳಿ ನಡೆಸಿತ್ತು. ಈ ವೇಳೆ ಮಸೂದ್ ಅಜರ್ ಕುಟುಂಬದ 14 ಸದಸ್ಯರು ಸಾವಿಗೀಡಾಗಿದ್ದರು. ಮೃತರಲ್ಲಿ ತನ್ನ ಅಕ್ಕ ಮತ್ತು ಆಕೆಯ ಪತಿ, ಸೋದರಳಿಯ ಮತ್ತು ಅವರ ಪತ್ನಿ, ಸೊಸೆ ಮತ್ತು ಕುಟುಂಬದ ಐದು ಮಕ್ಕಳು ಸೇರಿದ್ದಾರೆ. ಈ ಘಟನೆ ಬಳಿಕ ಉಗ್ರ ಮಸೂದ್ ಅಜರ್‌ಭಾರತದ ವಿರುದ್ಧ ಕತ್ತಿ ಮಸೆಯುತ್ತಿದ್ದು, ತನ್ನ ಉಗ್ರಗಾಮಿಗಳನ್ನು ಮುಂದಿಟ್ಟುಕೊಂಡು ಯಾವಾಗ ಬೇಕಾದರೂ ಭಾರತದ ಮೇಲೆ ದಾಳಿಗೆ ಸಂಚು ರೂಪಿಸಬಹದು.

ಆದರೆ ಇದೇ ಸಂದರ್ಭದಲ್ಲೇ ಪಾಕಿಸ್ತಾನ ಸರ್ಕಾರ ಮಸೂದ್ ಅರ್ಜ ಕುಟುಂಬಕ್ಕೆ 14 ಕೋಟಿ ರೂಪಾಯಿ ಪರಿಹಾರ ನೀಡಲು ಮುಂದಾಗಿರುವುದು ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. ಇಷ್ಟಕ್ಕೂ ಮಸೂದ್‌ಗೆ ಏಕೆ ಪಾಕ್ ಸರ್ಕಾರ ಹಣ ನೀಡುತ್ತಿದೆ ಗೊತ್ತೇ?

ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರ್‌ನಲ್ಲಿ ಸಾವಿಗೀಡಾದವರಿಗೆ ಪಾಕಿಸ್ತಾನ ಸರ್ಕಾರ ತಲಾ 1 ಕೋಟಿ ರೂ, ಪರಿಹಾರ ಘೋಷಣೆ ಮಾಡಿದೆ. ಅದರಂತೆ ಮಸೂದ್ ಅಜರ್ ಕುಟುಂಬದ 14 ಮಂದಿ ಸಾವನ್ನಪ್ಪಿದ್ದು, ಹೀಗಾಗಿ ತಲಾ 1 ಕೋಟಿ ರೂ. ನಂತೆ ಮಸೂದ್ ಅಜರ್ ಕುಟುಂಬಕ್ಕೆ ಒಟ್ಟು 14 ಕೋಟಿ ರೂ. ಪರಿಹಾರ ಸಿಗುವ ಸಾಧ್ಯತೆ ಇದೆ. ಈ ರೀತಿಯಾಗಿ, ಪಾಕಿಸ್ತಾನ ಸರ್ಕಾರವು ಸಹಾಯದ ಹೆಸರಿನಲ್ಲಿ ಬಿಡುಗಡೆ ಮಾಡುವ ಹಣವು ಭಯೋತ್ಪಾದಕರು ಮತ್ತು ಅವರ ಕುಟುಂಬಗಳಿಗೆ ನೇರವಾಗಿ ಸಹಾಯ ಮಾಡುತ್ತದೆ. ಪಾಕಿಸ್ತಾನದ ಪ್ರಧಾನಿ ಕಚೇರಿ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯಲ್ಲಿ, 1 ಕೋಟಿ ರೂಪಾಯಿಗಳ ಸಹಾಯವನ್ನು ಘೋಷಿಸಲಾಗಿದೆ. ಸಹಾಯದ ಹೆಸರಿನಲ್ಲಿ ಬಿಡುಗಡೆಯಾದ ಈ ಮೊತ್ತದ ನೇರ ಲಾಭವನ್ನು ಈಗ ಮಸೂದ್ ಅಜರ್ ಮಾತ್ರ ಪಡೆಯಲಿದ್ದಾನೆ. ☯

## ಪಾಕಿಸ್ತಾನಕ್ಕೆ ಸೇನಾ ಮಾಹಿತಿ ರವಾನಿಸುತ್ತಿದ್ದ ಆರು ಮಂದಿ 'ನಮಕ್ ಹರಾಮಿ'ಗಳ ಅರೆಸ್ಟ್!



ಜ್ಯೋತಿ ಮಲ್ಹೋತ್ರಾ

'ಆಪರೇಷನ್ ಸಿಂಧೂರ್' ಪ್ರಹಾರದ ಬಳಿಕ ಶತ್ರು ರಾಷ್ಟ್ರಗಳಿಂದ ಭಾರತದ ಮೇಲೆ ಬೇಹುಗಾರಿಕೆ ತೀವ್ರಗೊಂಡಿದ್ದು, ಹಣದಾಸೆಗಾಗಿ ಪಾಕಿಸ್ತಾನದ ಐಎಸ್‌ಐಗೆ ಸೇನಾ ಮಾಹಿತಿ ನೀಡಿದ ಆರೋಪದ ಮೇಲೆ ಆರು ಜನರನ್ನು ಬಂಧಿಸಲಾಗಿದೆ! ಹೆಸರಾಂತ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಪ್ರಮುಖ ಆರೋಪಿಯಾಗಿದ್ದು, ಉಳಿದಂತೆ, ಕೈತಾಲ್ ಪಾಣಿಪತ್, ನುಹ್ನಿಂದ ತಲಾ ಒಬ್ಬೊಬ್ಬರನ್ನು ಬಂಧಿಸಲಾಗಿದೆ. ಆರೋಪಿಗಳು ಐಎಸ್‌ಐ ಜೊತೆ ನಿರಂತರ ಸಂಪರ್ಕದಲ್ಲಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ದೇಶದ್ರೋಹಿ ಜ್ಯೋತಿ ಮಲ್ಹೋತ್ರಾ ಯೂಟ್ಯೂಬ್‌ನಲ್ಲಿ ಮೂರು ಲಕ್ಷದ 77 ಸಾವಿರ ಚಂದಾದಾರರನ್ನು ಮತ್ತು ಇನ್ಸ್ಟಾಗ್ರಾಮ್‌ನಲ್ಲಿ ಒಂದು ಲಕ್ಷದ 32 ಸಾವಿರ ಅನುಯಾಯಿಗಳನ್ನು ಹೊಂದಿದ್ದಾಳೆ. ಇದೇ ವರ್ಷ ಮಾರ್ಚ್‌ನಲ್ಲಿ ಈಕೆ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದು ಸಹ ಗೊತ್ತಾಗಿದೆ. ಅದಕ್ಕೆ ಸಂಬಂಧಿಸಿದ ವೀಡಿಯೊಗಳನ್ನು ಸಹ ಈಕೆ ಪೋಸ್ಟ್ ಮಾಡಿದ್ದಾಳೆ. ಜ್ಯೋತಿ ಇತ್ತೀಚಿಗೆ ಮೂರು ಬಾರಿ ಪಾಕಿಸ್ತಾನಕ್ಕೆ ಭೇಟಿ ನೀಡಿರುವುದು ತನಿಖೆಯಿಂದ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಆಕೆಯ ಪಾಸ್‌ಪೋರ್ಟ್ ಅನ್ನು ಸಹ ವಶಪಡಿಸಿಕೊಂಡಿದ್ದಾರೆ. ಇತರ ಇಬ್ಬರು ಆರೋಪಿಗಳು ಜ್ಯೋತಿಯ ಸಹಚರರಾಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಹರಿಯಾಣದ ಮಸ್ತ್‌ಗಢ್ ಚೀಕಾ ಗ್ರಾಮದ ದೇವೇಂದ್ರ ಸಿಂಗ್ (25) ಎಂಬ ಡಿಪ್ಲೊಮಾ ವಿದ್ಯಾರ್ಥಿಯನ್ನು ಸಹ ಬಂಧಿಸಲಾಗಿದೆ.

ನಮ್ಮ ಸೈಬರ್ ಪೊಲೀಸ್ ಠಾಣೆಯ ಸಿಬ್ಬಂದಿ ವಿದ್ಯಾರ್ಥಿಯಾಗಿರುವ ಸಿಂಗ್‌ನಿಂದ ವಶಪಡಿಸಿಕೊಂಡ ಸಾಧನಗಳ ಬಗ್ಗೆ ಸಂಪೂರ್ಣ ತನಿಖೆ ನಡೆಸುತ್ತಿದ್ದಾರೆ. ಆತನ ಸಾಧನಗಳ ಮೂಲಕ ಆತ ಪಾಕಿಸ್ತಾನಕ್ಕೆ ಏನೇನು ಸಂದೇಶಗಳನ್ನು ರವಾನಿಸಿದ್ದಾನೆ ಎಂಬುದು ಗೊತ್ತಾಗಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವರದಿಗಳ ಪ್ರಕಾರ, ಸಿಂಗ್ ಪಂಜಾಬ್‌ನ ಕಾಲೇಜಿನಲ್ಲಿ ಓದುತ್ತಿದ್ದ. ಕಳೆದ ವರ್ಷ ನವೆಂಬರ್‌ನಲ್ಲಿ, ಆತ ಪಾಕಿಸ್ತಾನದ ನಂಕಾನ ಸಾಹಿಬ್ ಗುರುದ್ವಾರಕ್ಕೆ ಯಾತ್ರೆಗೆ ತೆರಳಿದ್ದ. ಅಲ್ಲಿ ಆತನಿಗೆ ಪಾಕಿಸ್ತಾನದ ಗುಪ್ತಚರ ಅಧಿಕಾರಿಗಳು ಸಂಪರ್ಕಕ್ಕೆ ಬಂದಿದ್ದರು ಎನ್ನಲಾಗಿದೆ. ಭಾರತಕ್ಕೆ ಹಿಂದಿರುಗಿದ ನಂತರ ನಂತರವೂ ಸಿಂಗ್ ಅವರೊಂದಿಗೆ ಸಂಪರ್ಕದಲ್ಲಿದ್ದ... ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಇದಕ್ಕೂ ಮೊದಲು, ಪಂಜಾಬ್‌ನಲ್ಲಿ ಪಾಲಕ್ ಶೇರ್ ಮಸಿಹ್ ಮತ್ತು ಸೂರಜ್ ಮಸಿಹ್ ಎಂಬ ಇಬ್ಬರು ವ್ಯಕ್ತಿಗಳನ್ನು ಬಂಧಿಸಲಾಗಿತ್ತು. ಅವರು ಭಾರತೀಯ ಮಿಲಿಟರಿ ನೆಲೆಗಳ ಬಗ್ಗೆ ಸೂಕ್ಷ್ಮ ಮಾಹಿತಿಯನ್ನು ಐಎಸ್‌ಐಗೆ ರವಾನಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಬಂಧಿತರೆಲ್ಲರೂ ಐಎಸ್‌ಐ ಜೊತೆ ಸಂಪರ್ಕದಲ್ಲಿದ್ದರು. ಅವರು ಭಾರತದ ರಕ್ಷಣಾ ವ್ಯವಸ್ಥೆ ಮತ್ತು ಮಿಲಿಟರಿ ಚಲನವಲನಗಳ ಬಗ್ಗೆ ಮಾಹಿತಿ ನೀಡುತ್ತಿದ್ದರು. ಇವರು ಕೊಟ್ಟ ಮಾಹಿತಿಯನ್ನು ಐಎಸ್‌ಐ ಭಾರತದ ವಿರುದ್ಧ ಬಳಸಿರಬಹುದಾದ ಶಂಕೆಯಿದೆ. ಈ ಪ್ರಕರಣದ ತನಿಖೆ ಇನ್ನೂ ನಡೆಯುತ್ತಿದೆ. ಪೊಲೀಸರು ಬಂಧಿತರನ್ನು ವಿಚಾರಣೆ ನಡೆಸುತ್ತಿದ್ದಾರೆ. ಈ ಜಾಲದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ☯

# ವಿಜಯಲಕ್ಷ್ಮಿ ದರ್ಶನ್ ಮ್ಯಾರೇಜ್ ಆನಿವರ್ಸರಿ ಎಫೆಕ್ಟ್! ಲಿಫ್ಟ್‌ಗೆ ನುಗ್ಗಿ ಬಲವಂತವಾಗಿ ನಂಬರ್ ಪಡೆದುಕೊಂಡ ಪವಿತ್ರ!!

ರೇಣುಕಾಸ್ವಾಮಿ ಕೊಲೆ ಕೇಸ್ ವಿಚಾರಣೆಗಾಗಿ ಪ್ರತಿ ಭಾರಿ ಕೋರ್ಟ್‌ಗೆ ಬಂದಾಗಲೂ ಎ-2 ಆರೋಪಿ ದರ್ಶನ್ ಎ-1 ಆರೋಪಿ ಪವಿತ್ರ ಗೌಡಳಿಂದ ಅಂತರ ಕಾಯ್ದುಕೊಂಡು, ಅಲ್ಲೆಲ್ಲೋ ನಿಂತುಕೊಂಡು ವಿಚಾರಣೆ ಎದುರಿಸಿ ಮುಂದಿನ ಡೇಟ್ ಅನೌನ್ಸ್ ಆದ ಕೂಡಲೇ ತನ್ನ ಗನ್‌ಮ್ಯಾನ್‌ಗಳ ಜೊತೆ ಹೊರಟು ಹೋಗುತ್ತಿದ್ದರು. ಪವಿತ್ರ ಗೌಡ ದೂರದಿಂದಲೇ ನೋಡಿ, ಮಾತಾಡಿಸಲು ಆಗದೆ ಕೈ ಕೈ ಹಿಸುಕಿಕೊಂಡು ಜಾಗ ಖಾಲಿ ಮಾಡುತ್ತಿದ್ದಳು! ಈ ನಡುವೆ ದರ್ಶನ್ ಪತ್ನಿ ವಿಜಯಲಕ್ಷ್ಮಿ ಗಂಡನ ಮೊಬೈಲ್ ನಂಬರ್ ಕೂಡ ಬದಲಿಸಿ ಬೇರೊಂದು ಸಿಮ್ ಕೊಡಿಸಿ ಹೊಸ ನಂಬರ್ ಲೀಕ್ ಆಗದಂತೆ ನೋಡಿಕೊಂಡಿದ್ದರು! ಆದರೆ, ನಿನ್ನೆ ಮಂಗಳವಾರ ದರ್ಶನ್ ಕೋರ್ಟ್ ಮುಗಿಸಿಕೊಂಡು ಹೊರಟಿದ್ದಾಗ, ಕಿಡಿಗೇಡಿ ಲೇಡಿ ಪವಿತ್ರ ಗೌಡ ಲಿಫ್ಟ್‌ನೊಳಗೆ ನುಗ್ಗಿ ಸುಬ್ಬನಿಂದ ಬಲವಂತವಾಗಿ ನಂಬರ್ ಪಡೆದುಕೊಂಡು ಹೋಗಿದ್ದಾಳೆ! ಸುಬ್ಬ ಅದೇನು ಹಳೇ ನಂಬರ್ ಕೊಟ್ಟಿದ್ದಾನೋ ಅಥವಾ ಹೊಸ ನಂಬರ್ ಕೊಟ್ಟಿದ್ದಾನೋ!! ಒಟ್ಟಾರೆ, ವಿಜಯಲಕ್ಷ್ಮಿ ನೆಮ್ಮದಿಗೆ ಮತ್ತೆ ಬೆಂಕಿ ಬೀಳುವ ಲಕ್ಷಣಗಳು ಗೋಚರಿಸುತ್ತಿವೆ!!!


Celebrating love and togetherness Darshan and Vijayalakshmi dance to "Muddu Rakshasi" on their special day.



ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳು ದಿನಾಂಕ 20-05-2025 ಮಂಗಳವಾರದಂದು 57ನೇ ಸಿಸಿಹೆಚ್ ಕೋರ್ಟ್‌ಗೆ ಹಾಜರಾಗಿದ್ದರು. ಒಟ್ಟು 17 ಆರೋಪಿಗಳ ಪೈಕಿ ಮೂವರನ್ನು ಬಿಟ್ಟು ಉಳಿದವರೆಲ್ಲ ಹಾಜರ್ ಆಗಿದ್ದರು. (ಈ ನಡುವೆ ಕಾಮಾಕ್ಷಿಪಾಳ್ಯ ಪೊಲೀಸರು ಹೆಚ್ಚಿನ ತನಿಖೆ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹೆಚ್ಚುವರಿ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದಾರೆ! ಆರೋಪಿಗಳ ವಿರುದ್ಧ ಹೆಚ್ಚುವರಿ ಸಾಕ್ಷ್ಯಗಳನ್ನು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖ ಮಾಡಲಾಗಿದೆಯಂತೆ!!)

ಎ-1ಆರೋಪಿ ಪವಿತ್ರ ಗೌಡ, ಎ-2ಆರೋಪಿ ನಟ ದರ್ಶನ್ ಸೇರಿದಂತೆ ಇತರೆ ಆರೋಪಿಗಳು ಕೋರ್ಟ್ ಬಾಗಿಲಲ್ಲಿ ನಿಂತಿದ್ದು, ಮಾನ್ಯ ನ್ಯಾಯಾಧೀಶರು ಹೆಸರು ಕೂಗುತ್ತಿದ್ದಂತೆಯೇ ಎಲ್ಲರೂ ನಾ ಮುಂದು ತಾ ಮುಂದು ಎಂಬಂತೆ ಒಳಗಡೆ ಓಡಿ ಬರುತ್ತಿದ್ದರು. ದರ್ಶನ್ ಹಿಂದಿನ ದಿನವಷ್ಟೇ ತಮ್ಮ 22ನೇ ವರ್ಷದ ವಿವಾಹ ವಾರ್ಷಿಕೋತ್ಸವವನ್ನು ಪತ್ನಿ ವಿಜಯಲಕ್ಷ್ಮಿ ಜೊತೆ ಅದ್ದೂರಿಯಾಗಿ ಆಚರಿಸಿಕೊಂಡು ಮುದ್ದು ಮುದ್ದು ಮುದ್ದು ರಾಕ್ಷಸಿ... ಹಾಡಿಗೆ ಭರ್ಜರಿ ಡಾನ್ಸ್ ಮಾಡಿದ್ದರಿಂದಲೋ ಏನೋ, ಪವಿತ್ರ ಗೌಡ್ತಿ ಬಿಳಿ ಸೀರೆ ಧರಿಸಿಕೊಂಡು ಹಣೆಗೊಂದು ಬೊಟ್ಟು ಇಡದೆ ಕೋರ್ಟ್‌ಗೆ ಆಗಮಿಸಿದ್ದಳು!

ಎಲ್ಲರಿಗೂ ಮೊದಲೇ ಕೋರ್ಟ್ ಹಾಲ್ ಒಳಗೆ ಬಂದು ನಿಂತಿದ್ದ ಪವಿತ್ರ, ಪಾಪಿ ಪವಿತ್ರ ಗೌಡ,ಸುಬ್ಬನಿಗಾಗಿ ಕಾದಿರುವಾಗಲೇ, 'ವಾಮನ' ಧನ್ವೀರ್ ಜೊತೆ ದರ್ಶನ್ ಕೋರ್ಟ್ಗೆ ಆಗಮಿಸಿದರು! ಪವಿತ್ರ ಅಲ್ಲಿದ್ದುದರಿಂದ ದರ್ಶನ್ ಅವರು ಒಳಗೆ ಬರದೆ ಹೊರಗೆಯೇ ನಿಂತಿದ್ದರು!

ಪವಿತ್ರಾಗೌಡ ಅವರಿಂದ ದರ್ಶನ್ ದೂರ ನಿಂತಿದ್ದನ್ನು ಗಮನಿಸಿದ ನ್ಯಾಯಾಧೀಶರು 1ನೇ ಆರೋಪಿತೆ ಪಕ್ಕ ನಿಲ್ಲಿ ಎಂದು ಆರೋಪಿ 2ಗೆ ಸೂಚಿಸಿದರು! ನಂತರ ದರ್ಶನ್ ಓಡೋಡಿ ಬಂದು ಪವಿತ್ರ ಗೌಡ್ತಿ ಪಕ್ಕ ಕೈಕಟ್ಟಿಕೊಂಡು ನಿಂತರು! ಇತರೆ ಆರೋಪಿಗಳು ತಮ್ಮ ತಮ್ಮ ನಂಬರ್ ಪ್ರಕಾರ ಸರತಿ ಸಾಲಿನಲ್ಲಿ ನಿಂತುಕೊಂಡರು.

ಅನಂತರ ಮಾನ್ಯ ನ್ಯಾಯಾದೀಶರು ಎಲ್ಲರಿಗೂ ಸೇರಿದಂತೆ, ರೇಣುಕಾ ಸ್ವಾಮಿಯನ್ನು ಕೊಲೆ ಮಾಡಿರುವ ಆರೋಪ ನಿಮ್ಮೆಲ್ಲರ ಮೇಲಿದೆ, ಕೊಲೆ ಮಾಡಿರುವುದನ್ನು ಒಪ್ಪಿಕೊಳ್ಳುವಿರಾ? ಎಂದು ಪ್ರಶ್ನಿಸಿದ್ದು ಇದಕ್ಕೆ ಆರೋಪಿಗಳು, ಇಲ್ಲಾ ಸ್ವಾಮಿ ಎಂದು ಉತ್ತರಿಸಿದ್ದು (ಕೆಲವರು ಇಲ್ಲವೆಂಬಂತೆ ತಲೆಯಾಡಿಸಿದ್ದಾರೆ) ಮಾನ್ಯ ನ್ಯಾಯಾಲಯ ಮುಂದಿನ ವಿಚಾರಣೆಯನ್ನು ಜುಲೈ10ಕ್ಕೆ ಮುಂದೂಡಿತು.



ದರ್ಶನ್ ಮನೆಯಿಂದ ಹಾಗೂ ಆರೋಪಿಗಳ ಬಳಿ ಜಪ್ತಿ ಮಾಡಿದ್ದ ಹಣದ ಬಗ್ಗೆಯೂ ವಿಚಾರಣೆ ನಡೆದು, ಅದರ ವಿಚಾರಣೆಯನ್ನು ಜೂನ್ 3 ಕ್ಕೆ ಮುಂದೂಡಲಾಗಿದೆ! ಇಷ್ಟಾಯಿತಲ್ಲ, ಈಗ ಬನ್ನಿ 'ಬ್ರೇಕಿಂಗ್ ನ್ಯೂಸ್' ಹೇಳ್ತೀನಿ!

ಕೋರ್ಟ್ ಹಾಲ್ ಒಳಗೆ ಗಪ್‌ಚುಪ್ ಆಗಿ ನಿಂತಿದ್ದ ಪವಿತ್ರ ಗೌಡ ನೆಕ್ಸ್ಟ್ ಡೇಟ್ ಅನೌನ್ಸ್ ಆಗಿ ದರ್ಶನ್ ತನ್ನ ಎಸ್ಕಾರ್ಟ್ ಜೊತೆ ಹೊರಡುತ್ತಿದ್ದಂತೆಯೇ ಆತುರವಾಗಿ ಹಿಂದೆ ಓಡಿದ್ದಾಳೆ. ಸುಬ್ಬ ಲಿಫ್ಟ್ ಒಳಗೆ ನುಗ್ಗುತ್ತಿದ್ದಂತೆಯೇ ತಾನು ಬಲವಂತವಾಗಿ ಲಿಫ್ಟ್‌ಗೆ ತೂರಿಕೊಂಡು, ಪ್ಲೀಸ್ ನಿಮ್ಮ ನಂಬರ್ ಕೊಡಿ ಸರ್.... ಎನ್ನುತ್ತಾ, ದರ್ಶನ್ ಕೈಗೆ ತನ್ನ ಮೊಬೈಲ್ ಇಟ್ಟುವಿಷಾದವಾಗಿ ನಕ್ಕಿದ್ದಾಳೆ! ದರ್ಶನ್ ಅನ್ಯ ಮಾರ್ಗವಿಲ್ಲದೆ ತನ್ನ(?) ನಂಬರ್ ಅನ್ನು ಡಯಲ್ ಮಾಡಿ, ಸುಬ್ಬಿ ಕೈಗೆ ಮೊಬೈಲ್ ಇಟ್ಟು ತಿರುಗಿ ನೋಡದೆ ಹೊರಟಿದ್ದಾರೆ!



ಓನ್ಸ್ ಅಗೈನ್, ದರ್ಶನ್ ಮೊನ್ನೆಯಷ್ಟೇ ತಮ್ಮ 22ನೇ ವರ್ಷದ ಮ್ಯಾರೇಜ್ ಆನಿವರ್ಸರಿ ಆಚರಿಸಿಕೊಂಡು, ಪತ್ನಿ ವಿಜಯಲಕ್ಷ್ಮಿ ಜೊತೆ ಭರ್ಜರಿ ಸ್ಟೆಪ್ ಹಾಕಿ ಸಂಭ್ರಮಿಸಿದ್ದಾರೆ! ಗೆಳೆಯ ಧನ್ವೀರ್ ಅಭಿನಯದ ವಾಮನ ಚಿತ್ರದ ಮುದ್ದು ಮುದ್ದು ಮುದ್ದು ರಾಕ್ಷಸಿ... ಸಾಂಗ್ ಎಷ್ಟು ಚನ್ನಾಗಿದೆ ಅಲ್ವಾ, ಅದೇ ಸಾಂಗ್‌ಗೆ ಡ್ಯಾನ್ಸ್ ಮಾಡಿದ್ದಾರೆ, ದಚ್ಚು ವಿಜಿ!! ಅದು ಸೋಶಿಯಲ್ ಮೀಡಿಯಾದಲ್ಲಿ ಭಾರಿ ವೈರಲ್ ಆಗಿದೆ. ಪವಿತ್ರ ಪಾಪಿಗೆ ಹೊಟ್ಟೆ ನೋವು ಬಾರದಿರಲು ಸಾಧ್ಯವೇ?! ಆ ಸಂಕಟಕ್ಕೋ ಏನೋ ಬಿಳಿ ಸೀರೆ ಉಟ್ಟುಕೊಂಡೆ ಕೋರ್ಟ್‌ಗೆ ಬಂದಿದ್ದಾಳೆ!

ಸುಬ್ಬ ಇದಕ್ಕೆಲ್ಲ ಕೇರ್ ಮಾಡಿಲ್ಲ, ಸುಬ್ಬಿಗೆ ತದ್ವಿರುದ್ಧವಾಗಿ ಬ್ಲ್ಯಾಕ್ ಅಂಡ್ ಬ್ಲ್ಯಾಕ್‌ನಲ್ಲಿ ಮಿಂಚುತ್ತಿದ್ದ ಆಸಾಮಿ, ಲಿಫ್ಟ್‌ಗೆ ನುಗ್ಗಿದಾಗಲು ಡಿಸ್ಟರ್ಬ್ ಆಗದೆ ಯಾವುದೋ ನಂಬರ್ ಕೊಟ್ಟು ಹೋಗಿದ್ದಾನೆ! ಬಹುಷಃ ವಿಜಿ ನಂಬರ್ರೇ ಕೊಟ್ಟು ಹೋಗಿರಬಹುದು ಎಂಬ ಅನುಮಾನವಿದೆ!!

ಅಂದಹಾಗೆ,ದಾರಿ ತಪ್ಪಿದ ಗಂಡನ್ನ ಹೇಗೋ ರಕ್ಷಿಸಿಕೊಂಡು ಸರಿದಾರಿಗೆ ತಂದಿರುವ ವಿಜಯಲಕ್ಷ್ಮಿ ಅವರು ದರ್ಶನ್ ಅವರೊಟ್ಟಿಗೆ ಅನ್ಯೋನ್ಯವಾಗಿದ್ದಾರೆ. ಗಂಡ ಹೆಂಡತಿ ವಾರಕ್ಕೆರಡು ದೇವಸ್ಥಾನ ಸುತ್ತಿ ಪೂಜೆ ಪುನಸ್ಕಾರ ಮಾಡಿಸುತ್ತಾರೆ. ಮೊನ್ನೆಯಷ್ಟೇ ವಿವಾಹ ವಾರ್ಷಿಕೋತ್ಸವ ಆಚರಣೆ ಮಾಡಿಕೊಂಡಿದ್ದಾರೆ. ಹೀಗಿರುವಾಗಲೇ, ಹಳೇ ಸುಬ್ಬಿ ಪವಿತ್ರಾ, ಸುಬ್ಬನ್ ಬಳಿ ನಂಬರ್ ಪಡೆದುಕೊಂಡು ಮತ್ತೆ ಸಂಪರ್ಕ ಸಾಧಿಸಲು ಪ್ರಯತ್ನಿಸುತ್ತಿದ್ದಾಳೆ!

ದರ್ಶನ್ ವಿಜಿ ಯಾವ್ಯಾವ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸ್ತಾರೋ, ತಾನೂ ಅದೇ ದೇವಸ್ಥಾನಗಳಿಗೆ ಹೋಗಿ ಪೂಜೆ ಮಾಡಿಸುತ್ತಿದ್ದಾಳೆ!! ಇದು ಸರಿನಾ? ಈಕೆ ಮುರುಕಿಯಲ್ಲದೆ ಇನ್ನೇನು??

# ಆರೋಪಿಗಳನ್ನು ಬಂಧಿಸಿದ ಹಾರೋಹಳ್ಳಿ ಪೊಲೀಸರು!


ಆರೋಪಿಗಳಾದ ರಜಿತ್ ಅ|| ಜಿಮ್ಮಿ, ಹರೀಶ್ ಅ|| ಡೊಡ್ಡೆ, ದರ್ಶನ್ ಅ|| ಆಟೋ ಧನು, ಯಶ್ವಂತ್ ಅ|| ರಿಚ್ ಕಿಡ್

7 ☞

ರಾಮನಗರ ಜಿಲ್ಲೆಯ ಪೊಲೀಸ್ ಅಧೀಕ್ಷಕರಾದ ಶ್ರೀನಿವಾಸ್ ಗೌಡ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಸುರೇಶ್ ಮತ್ತು ರಾಮಚಂದ್ರಯ್ಯರವರ ಮಾರ್ಗದರ್ಶನದಲ್ಲಿ ರಾಮನಗರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀನಿವಾಸ್ ಬಿ.ಎನ್. ರವರ ನೇತೃತ್ವದಲ್ಲಿ ಹಾರೋಹಳ್ಳಿ ಪೊಲೀಸ್ ಠಾಣೆಯ ವೃತ್ತಿ ನಿರೀಕ್ಷಕರಾದ ಅರ್ಜುನ್ ಸಿ.ಆರ್.ರವರು ತನಿಖೆ ಕೈಗೊಂಡು ಪಿಎಸ್ಐ ನಟರಾಜು, ಎಎಸ್ಐ ಅಯೂಬ್‌ಪಾಷ, ಹೆಚ್‌ಸಿಗಳಾದ ಅನಂತಕುಮಾರ್ ಎಲ್., ಶಿವರಾಜು, ಶ್ರೀನಿವಾಸ್ ಪಿಸಿಗಳಾದ ಶ್ರೀಧರ್ ಕರಣಿ, ಶಂಕರಲಿಂಗ, ಎಸ್. ಕುಂಬಾರ್, ವಿರೂಪಾಕ್ಷ, ಯೋಗೀಶ್, ಚಾಲಕ ಫೈರೋಜ್ ಪಾಷ ಸೇರಿದಂತೆ ಸಿಬ್ಬಂದಿಯವರು ಈ ಪತ್ತೆಕಾರ್ಯದಲ್ಲಿ ಪಾಲ್ಗೊಂಡು ಈ ಕಾರ್ಯಾಚರಣೆ ಯಶಸ್ವಿಗೆ ರಾಮನಗರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀನಿವಾಸ್‌ಗೌಡರವರು ಪ್ರಶಂಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಫೋರ್ಡ್ ಎಕಾನ್ ಕಾರ್ ನಂ. ಕೆಎ-05 ಎಂ.ಬಿ.-4812, ಆಕ್ಸಿಸ್ ವಾಹನ ಕೆಎ-05-ಕೆಪಿ-5071, ಆಟೋರಿಕ್ಷಾ, ಕೃತ್ಯಕ್ಕೆ ಬಳಸಿದ್ದ ಲಾಂಗುಗಳು ಹಾಗೂ ಇತರೆ ವಸ್ತುಗಳನ್ನು ಸೀಜ್ ಮಾಡಿದ್ದಾರೆ.


ಕೃತ್ಯಕ್ಕೆ ಬಳಸಿದ್ದ ಲಾಂಗ್‌ಗಳು

# ಖತರ್ನಾಕ್ ಆಂಟಿ ಆಟಕ್ಕೆ ರೊಚ್ಚಿಗೆದ್ದ ಯುವಕ ಮೂರು ಮಕ್ಕಳ ತಾಯಿಯ ಹೆಣ ಕೆಡವಿದ!



ಕೊಲೆಯಾದ ಲಕ್ಷ್ಮೀ

**ಆಕೆ ಮೂರು ಮಕ್ಕಳ ತಾಯಿ. ಆದರೆ, ಕೆಲ ಕಾರಣಾಂತರಗಳಿಂದ ತಾಳಿ ಕಟ್ಟಿದ್ದ ಗಂಡನಿಂದ ದೂರವಾಗಿದ್ದಳು. ಹೀಗಾಗಿ ಒಂಟಿಯಾಗಿದ್ದ ಮಹಿಳೆ ಯುವಕನೋರ್ವ ಪರಿಚಯವಾಗಿದ್ದು, ಬಳಿಕ ಆತನ ಜೊತೆ ಲವ್ವಿಡವ್ವಿ ಶುರು ಸಹ ಶುರುವಾಗಿದೆ. ಜೋಡಿ ಸುತ್ತಾಡಿ ಮಸ್ತ್ ಮಜಾ ಮಾಡಿದ್ದಾರೆ. ಆದರೆ, ಖತರ್ನಾಕ್ ಆಂಟಿ ಆಟಕ್ಕೆ ಯುವಕ ವಿಲವಿಲ ಅಂದಿದ್ದಾನೆ. ಹೀಗಾಗಿ ರೊಚ್ಚಿಗೆದ್ದ ಯುವಕ ಮಹಿಳೆಯನ್ನೇ ಕೊಲೆ ಮಾಡಿದ್ದಾನೆ. ಇನ್ನು ಈ ಮೂರು ಮಕ್ಕಳ ತಾಯಿ ಪ್ರೇಮದ ಬಲೆಗೆ ಬಿದ್ದು, ಬಳಿಕ ಹೆಣವಾಗಿದ್ದು ಈ ಕೊಲೆ ರಹಸ್ಯ ಬಯಲಾಗಿದ್ದೇ ರೋಚಕ.**



ಆರೋಪಿ ಸುನೀಲ್

ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಸೂರಣಗಿ ಗ್ರಾಮದ ಬಳಿ ಅನಾಮಧೇಯ ಮಹಿಳೆ ಶವ ಪತ್ತೆ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ಮಹಿಳೆಯ ಮೊಬೈಲ್ ಕಾಲ್ ಬೆನ್ನಟ್ಟಿದ ಪೊಲೀಸರೇ ಬಿಗ್ ಶಾಕ್ ಆಗಿದ್ದಾರೆ. ಇನ್ನು ಸಹಜ ಸಾವು ಎಂದುಕೊಂಡ ಕುಟುಂಬಸ್ಥರು ಸಹ ಈಗ ಕಂಗಾಲಾಗಿದ್ದಾರೆ. ಹೌದು. ಏಪ್ರಿಲ್ 23ರಂದು ಲಕ್ಷ್ಮೀ ಇಂಗಳಗಿ ಮಹಿಳೆ ಮೃತದೇಹ ಪತ್ತೆಯಾಗಿತ್ತು. ಈ ಪ್ರಕರಣದ ಬೆನ್ನತ್ತಿದ ಪೊಲೀಸರು, ಮೊಬೈಲ್ ಕರೆಗಳ ಹಿಸ್ಟರಿ ಜಾಲಾಡಿದಾಗ ಕೊಲೆಯ ಹಿಂದೆ ಪ್ರೇಮ ಕಥೆಯ ವಾಸನೆ ಬಂದಿದೆ. ಲಕ್ಷ್ಮೇಶ್ವರ ಸಿಪಿಐ ನಾಗರಾಜ್ ಮಾಡಳ್ಳಿ ತಂಡ ಚಾಣಾಕ್ಷಣದಿಂದ ಈ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿದ್ದು, ಯುವಕಮೊಂದಿಗೆ ಮಹಿಳೆ ಲವ್ವಿಡವ್ವಿ ಹಾಗೂ ಕೊಲೆ ಕಹಾನಿ ಬಯಲಿಗೆ ಬಂದಿದೆ.

ಅದು 2025 ಏಪ್ರಿಲ್ 23 ರಂದು ಸೂರಣಗಿ ಗ್ರಾಮದ ದೊಡ್ಡೂರ ರಸ್ತೆಯ ಬಯಲು ಬಸವೇಶ್ವರ ದೇವಸ್ಥಾನ ಬಳಿ 35 ವರ್ಷದ ಮಹಿಳೆ ಅನಾಮಧೆಯ ಶವ ಪತ್ತೆಯಾಗಿತ್ತು. ಮಹಿಳೆ ಶವಪತ್ತೆಯಾದ ಸುದ್ದಿ ಗ್ರಾಮದಲ್ಲಿ ಹಬ್ಬುತ್ತಿದ್ದಂತೆ ಇಡೀ ಗ್ರಾಮವೇ ಬೆಚ್ಚಿಬಿದ್ದಿತ್ತು. ಗಾಬರಿಯಾದ ಸೂರಣಗಿ ಗ್ರಾಮಸ್ಥರು ತಕ್ಷಣ ಲಕ್ಷ್ಮೇಶ್ವರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ತಕ್ಷಣ ಸ್ಥಳಕ್ಕೆ ದೌಡಾಯಿಸಿದ ಲಕ್ಷ್ಮೇಶ್ವರ ಸಿಪಿಐ ನಾಗರಾಜ್ ಮಾಡಳ್ಳಿ ಮತ್ತು ತಂಡ ಪರಿಶೀಲನೆ ಮಾಡಿತ್ತು. ಆ ವೇಳೆ ಇದು ಸಹಜ ಸಾವಲ್ಲ ಪಕ್ಕಾ ಕೊಲೆ ಅನ್ನೋ ಅನುಮಾನ ಮೂಡಿತ್ತು.

## ಲವ್ವಿಡವ್ವಿ ಕೊಲೆಯಲ್ಲಿ ಅಂತ್ಯ!



### ಆ ಒಂದು ಸುಳಿವಿನಿಂದ ಹಂತಕ ಪತ್ತೆ

ಬಳಿಕ ಪ್ರಕರಣ ತನಿಖೆ ಚುರುಕುಗೊಳಿಸಿದಾಗ ವಾರದ ಬಳಿಕ ಕೊಲೆಯಾದ ಮಹಿಳೆ ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ನೇಲೊಗಲ್ ಗ್ರಾಮದ ಲಕ್ಷ್ಮೀ ಇಂಗಳಗಿ ಅಂತ ಗೋತ್ತಾಗಿದೆ. ಆಗ ಮೃತಳ ಸಹೋದರಿ ಸಾವಿನಲ್ಲಿ ಅನುಮಾನ ಇದೆ ಎಂದು ದೂರು ನೀಡಿದ್ದಾಳೆ. ಈ ದೂರಿನ ಮೇರೆಗೆ ತನಿಕೆ ಕೈಗೊಂಡ ಪೊಲೀಸರಿಗೆ ಅದೊಂದು ಫೋನ್‌ನ ಒಂದು ಸಣ್ಣ ಸುಳಿವು ಸಿಕ್ಕಿತ್ತು. ಅದೇ ಸುಳಿವಿನ ಮೇರೆ ತನಿಖೆ ನಡೆಸಿದ ಪೊಲಿಸರಿಗ ಹಂತಕ ಇತಿಹಾಸವೇ ಸಿಕ್ಕಿದೆ.

### ಯುವಕನಿಗೆ ಹಣಕ್ಕಾಗಿ ಬ್ಲ್ಯಾಕ್‌ಮೇಲ್

ಇನ್ನೂ ಕೊಲೆಯಾದ ಲಕ್ಷ್ಮೀಗೆ ಮೂವರು ಮಕ್ಕಳಿದ್ದಾರೆ. ಆದ್ರೆ ಗಂಡನಿಂದ ಲಕ್ಷ್ಮೀ ದೂರವಾಗಿದ್ದಳು ಬದುಕು ಸಾಗಿಸಲು ಮಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದಳು. ಆ ವೇಳೆಯಲ್ಲಿ ಹಾವೇರಿ ಜಿಲ್ಲೆಯ ಸುನಿಲ್ ಎನ್ನುವ ಹದಿಹರೆಯದ ಯುವಕ ಪರಿಚಯ ವಾಗಿದ್ದು, ಇಬ್ಬರು ನಡುವೆ ಲವ್ ಆಗಿದೆ. ಬಳಿಕ ಇಬ್ಬರ ನಡುವೆ ಅನೈತಿಕ ಸಂಬಂಧ ಸಹ ಬೆಳೆದಿತ್ತು. ಆದ್ರೆ 30 ವರ್ಷದ ಸುನೀಲ್ ಮದುವೆ ಮಾಡಲು ಅವರ ಕುಟುಂಬ ಸ್ಥರು ತಯಾರಿ ನಡೆಸಿದ್ದರು. ಅದೇ ವೇಲೆ ಲಕ್ಷ್ಮೀ 5 ಲಕ್ಷ ಹಣ ಕೊಡಬೇಕು ಎಂದು ಪಟ್ಟು ಹಿಡಿದಿದ್ದಾಳೆ. ಇಲ್ಲವಾದರೆ ನಮ್ಮ ಅನೈತಿಕ ಸಂಬಂಧ ವಿಷಯ ಬಹಿರಂಗ ಮಾಡುತ್ತೇನೆ ಎಂದು ಬ್ಲ್ಯಾಕ್ ಮೇಲ್ ಮಾಡಲು ಆರಂಭ ಮಾಡಿದ್ದಾಳೆ.

### ಕಾರಿನಲ್ಲಿ ಕರೆದೊಯ್ದು ಹತ್ಯೆ

ಲಕ್ಷ್ಮೀಯ ಬ್ಲ್ಯಾಕ್‌ಮೇಲ್‌ನಿಂದ ಕಂಗಾಲಾದ ಯುವಕ, ಸುನೀಲ್ ಗೆಳೆಯರಾದ ಸಿದ್ದಪ್ಪ, ನಟರಾಜ್, ರಮೇಶ ಸೇರಿಕೊಂಡು ಆಕೆಯನ್ನು ಹತ್ಯೆ ಮಾಡಲು ಪ್ಲ್ಯಾನ್ ಮಾಡಿದ್ದಾರೆ. ಅದರಂತೆ ಏಪ್ರಿಲ್ 22 ರಂದು ಲಕ್ಷ್ಮೀಯನ್ನು ಕಾರಿನಲ್ಲಿ ಮಂಗಳೂರಿಗೆ ಕರೆದುಕೊಂಡು ಹೋಗುವಾಗ ಕೇಬಲ್ ವೈಯರಿನಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿದ್ದಾರೆ. ನಂತರ ಮೃತದೇಹವನ್ನು ಸೂರಣಗಿ ಬಳಿ ಎಸೆದು ಪರಾರಿಯಾಗಿದ್ದರು. ಸದ್ಯ ಪೊಲೀಸರು ಚಾಣಾಕ್ಷಣದಿಂದ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದ್ದು, ಆರೋಪಿಗಳ ಎಡೆಮುರಿಕಟ್ಟಿದ್ದಾರೆ. ಇನ್ನು ಕಾರು, ಮೊಬೈಲ್, ಕತ್ತು ಹಿಸುಕಲು ಬಳಸಿದ್ದ ಕೇಬಲ್ ವೈರ್ ಅನ್ನು ವಶಕ್ಕೆ ಪಡೆದು ಆರೋಪಿಗಳ ವಿಚಾರಣೆ ನಡೆಸಿದ್ದಾರೆ.

ಒಟ್ಟಿನಲ್ಲಿ ಮೂರು ಮಕ್ಕಳ ತಾಯಿ ಮದುವೆ ಆಗದ ಯುವಕನನ್ನು ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಲು ಹೋಗಿ ಹೆಣವಾಗಿದ್ದಾಳೆ. ಇನ್ನು ಮದುವೆ ಮಾಡಿಕೊಂಡು ಸುಂದರ ಜೀವನ ನಡೆಸಬೇಕಾದ ಯುವಕ, ಮಹಿಳೆ ಹಿಂದೆ ಬಿದ್ದು ಇದೀಗ ಜೈಲು ಸೇರಿದ್ದಾನೆ. ಹಾಗೇ ಸ್ನೇಹಿತನಿಗೆ ಸಹಾಯ ಮಾಡಲೂ ಹೋದ ಮೂವರು ಗೆಳೆಯಸರು ಸಹ ಜೈಲಿನಲ್ಲಿ ಮುದ್ದಿ ಮುರಿಯು ವಂತಾಗಿದೆ.

# ನ್ಯಾಯಮೂರ್ತಿ ಎಸ್.ಆರ್. ನಾಯಕ್ ಇನ್ನಿಲ್ಲ...

ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ (ಹಂಗಾಮಿ ಮುಖ್ಯ ನ್ಯಾಯಮೂರ್ತಿ) ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಮಾಜಿ ಅಧ್ಯಕ್ಷ ಹಾಗೂ ರಾಜ್ಯ ಕಾನೂನು ಆಯೋಗದ ಮಾಜಿ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ಎಸ್.ಆರ್. ನಾಯಕ್ (80) ಭಾನುವಾರ ಮಧ್ಯಾಹ್ನ 2.18ಕ್ಕೆ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು, ಪತ್ನಿ ಶಾಲಿನಿ ಎಸ್. ನಾಯಕ್, ಪುತ್ರ ಡಾ. ಎನ್. ಎಸ್.ನಾಯಕ್, ಪುತ್ರಿ ನಿಶಾ ಗಾಂವ್ಕರ್ ಹಾಗೂ ಬಂಧು ವರ್ಗವನ್ನು ಅಗಲಿದ್ದಾರೆ.



ಅವರ ಅಂತ್ಯಕ್ರಿಯೆ ಸೋಮವಾರ ಮೇ 19ರ ಸಂಜೆ 4 ಗಂಟೆಗೆ ಹೆಬ್ಬಾಳ ಚಿತಾಗಾರದಲ್ಲಿ ನೆರವೇರಿತು. ಅದಕ್ಕೂ ಮುನ್ನ ಬೆಂಗಳೂರಿನ ಆರ್.ಎಂ.ವಿ. ಎರಡನೇ ಹಂತದ ಡಾಲರ್ಸ್ ಕಾಲೋನಿಯ ನಿವಾಸದಲ್ಲಿ ಮಧ್ಯಾಹ್ನ 1 ಗಂಟೆಯವರೆಗೂ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಅಂದಹಾಗೆ, ಜಸ್ಟಿಸ್ ಎಸ್.ಆರ್. ನಾಯಕ್ ಅವರು ಕುಮಟಾ ತಾಲ್ಲೂಕಿನ ನಾಡಮ್ಯಾಸಕೇರಿ ಗ್ರಾಮದಲ್ಲಿ ಕೃಷಿಕ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ 1945ರ ಜನವರಿ 1ರಂದು ಜನಿಸಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಮತ್ತು ಕಾನೂನು ವಿಭಾಗದಲ್ಲಿಯೇ ಸ್ನಾತಕೋತ್ತರ ಪದವಿ ಪಡೆದಿದ್ದ ನಾಯಕ್ ಅವರು, ಕಾನೂನು ಲೋಕದ ಮಹತ್ವದ ವಕೀಲರಾದ ಎಂ. ಗೋಪಾಲಕೃಷ್ಣ ಶೆಟ್ಟಿ ನಂತರ ಎಲ್.ಜಿ. ಹಾವನೂರು ಅವರ ಬಳಿ ಕಿರಿಯ ವಕೀಲರಾಗಿ ವೃತ್ತಿ ಪ್ರಾವೀಣ್ಯ ಸಾಧಿಸಿದ್ದರು. ಕೆಲ ಕಾಲ ಬೆಂಗಳೂರಿನ ಬಿಎಂಎಸ್ ಮತ್ತು ಎಸ್‌ಎಲ್‌ಎಸ್‌ಆರ್‌ಸಿ ಹಾವನೂರು ಕಾನೂನು ಕಾಲೇಜುಗಳಲ್ಲಿ ಅರೆಕಾಲಿಕ ಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿದ್ದರು.

1994ರ ಫೆಬ್ರುವರಿ 25ರಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡ ಅವರು ನಂತರ ಆಂಧ್ರಪ್ರದೇಶ ಹೈಕೋರ್ಟ್‌ಗೆ ವರ್ಗಾವಣೆಗೊಂಡಿದ್ದರು. ಆಂಧ್ರಪ್ರದೇಶ ನ್ಯಾಯಾಂಗ ಅಕಾಡೆಮಿ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ಬಳಿಕ ಛತ್ತೀಸ್‌ಗಢ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

ದೀನ ದಲಿತರ ದನಿಯಾಗಿ ಮಾನವತವಾದಿ ಎನ್ನಿಸಿಕೊಂಡಿದ್ದ ಜಸ್ಟಿಸ್ ಎಸ್.ಆರ್. ನಾಯಕ್ ಅವರ ನಿಧನದಿಂದ ಶ್ರಮಿಕ ವರ್ಗಕ್ಕೆ ತುಂಬಲಾರದ ನಷ್ಟವಾಗಿದ್ದು, ಎಲ್ಲರಲ್ಲೂ ಅನಾಥ ಭಾವನೆ ಮೂಡಿರುವುದು ಸುಳ್ಳಲ್ಲ. ಎನಿವೇ ಶ್ರೀ ಎಸ್.ಆರ್. ನಾಯಕ್‌ರವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಭಗವಂತನಲ್ಲಿ ಬೇಡೋಣ...

# ಭಯೋತ್ಪಾದನೆ ವಿರುದ್ಧ ಭಾರತ ಏಕಾಂಗಿ ಸಮರ!

9 ☞

ಕೇವಲ 10 ಕಿಲೋಮೀಟರ್ ವ್ಯಾಪ್ತಿ ಹೊಂದಿದ್ದು, ಮೆಷಿನ್ ಗನ್‌ಗಳನ್ನು ಬಳಸಬಲ್ಲದು. ಇದೊಂದು ಹಗುರವಾದ, ಕಡಿಮೆ ಬೆಲೆಯ ಮತ್ತು ಸುಲಭವಾಗಿ ಖರೀದಿಸಬಹುದಾದ ಡ್ರೋನ್ ಆಗಿದೆ.

ಅದರೊಡನೆ, ಪಾಕಿಸ್ತಾನ ಒಂದು ಚೀನಾ ನಿರ್ಮಿತ ಕ್ಷಿಪಣಿಯನ್ನೂ ಉಡಾವಣೆಗೊಳಿಸಿರುವ ವರದಿಗಳಿವೆ. ಇನ್ನು ಟರ್ಕಿ ಹಲವಾರು ಸಂದರ್ಭಗಳಲ್ಲಿ ಚೀನಾದ ಪ್ರಾಕ್ಸಿಯಂತೆ ವರ್ತಿಸಿದ್ದು, ಚೀನಾ ನೇರವಾಗಿ ಪಾಲ್ಗೊಳ್ಳಲು ಸಾಧ್ಯವಿಲ್ಲದ ಕಡೆಗಳಲ್ಲಿ ಚೀನಾದ ಪರವಾಗಿ ಕಾಲಿಟ್ಟಿದೆ. ಈ ಸನ್ನಿವೇಶದಲ್ಲೂ ಅದೇ ರೀತಿ ಆಗಿರುವ ಸಾಧ್ಯತೆಗಳಿವೆ.

### ತೆರೆಮರೆಯಲ್ಲಿ ಚೀನಾದ ನಡೆ!

ಈ ಆಟಕ್ಕೆ ಚೀನಾ ಏನೂ ಹೊಸ ಆಟಗಾರನಲ್ಲ. ಚೀನಾ ಹತ್ತಕ್ಕೂ ಹೆಚ್ಚು ವರ್ಷಗಳಿಂದ ಪಾಕಿಸ್ತಾನಕ್ಕೆ ಕ್ಷಿಪಣಿ ಮತ್ತು ಪರಮಾಣು ತಂತ್ರಜ್ಞಾನದ ನೆರವು ನೀಡುತ್ತಿದೆ. ಇಂದು ಪಾಕಿಸ್ತಾನ ಹೊಂದಿರುವ 80% ದೈನಂದಿನ ಆಯುಧಗಳು ಚೀನಾದಿಂದ ಆಮದಾಗಿವೆ.

ಭಾರತದ ವಿರುದ್ಧದ ತನ್ನ ಚಕಮಕಿಯಲ್ಲಿ ಪಾಕಿಸ್ತಾನ ಕನಿಷ್ಠ ಒಂದು ಚೀನಾ ನಿರ್ಮಿತ ಪಿಎಲ್-15 ಕ್ಷಿಪಣಿಯನ್ನು ಪ್ರಯೋಗಿಸಿದೆ ಎನ್ನುತ್ತವೆ ವರದಿಗಳು. ಈ ಕ್ಷಿಪಣಿಯನ್ನು ಹಾನಿಯಾಗದ ಸ್ಥಿತಿಯಲ್ಲಿ ಭಾರತೀಯ ಪಡೆಗಳು ಪತ್ತೆಹಚ್ಚಿದ್ದು, ಚೀನಾ ಯಾವ ರೀತಿಯ ಆಯುಧಗಳನ್ನು ಪೂರೈಸುತ್ತಿದೆ ಎಂಬ ಚಿತ್ರಣ ನೀಡಿದೆ.

## ಮೋದಿ ಮನೆಗೆ ಮೊದಲು ಬಾಂಬ್ ಹಾಕಬೇಕು!

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಪ್ರಚೋದನಾಕಾರಿ ಹೇಳಿಕೆಯೊಂದನ್ನ ವಿಡಿಯೋ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್ಲೋಡ್ ಮಾಡಿದ್ದ ಕಿಡಿಗೇಡಿ ಯುವಕನನ್ನು ಬೆಂಗಳೂರಿನ ಬಂಡೆಪಾಳ್ಯ ಪೊಲೀಸರು ಬಂಧಿಸಿದ್ದಾರೆ. ಬಂಡೇಪಾಳ್ಯ ನಿವಾಸಿ ನವಾಜ್ ಬಂಧಿತ ಆರೋಪಿ.ಇಷ್ಟಕ್ಕೂ ಈತ ಮಾಡಿದ್ದೇನು?!


ಕಿಡಿಗೇಡಿ ನವಾಜ್

ಭಾರತ ಮತ್ತು ಪಾಕಿಸ್ತಾನ ಮಧ್ಯೆ ಯುದ್ಧವಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಮನೆ ಮೇಲೆ ಯಾಕೆ ಪಾಕಿಸ್ತಾನ ಬಾಂಬ್ ಹಾಕಿಲ್ಲ? ಜನರೆಲ್ಲ ಸುಮ್ಮನೆ ನೆಮ್ಮದಿಯಿಂದ ಇರುವಾಗ ಈ ಪರಿಸ್ಥಿತಿ ಸೃಷ್ಟಿಸಿದ್ದು ಮೋದಿ!

ಮೊದಲು ಮೋದಿ ಮನೆ ಮೇಲೆ ಬಾಂಬ್ ಹಾಕಬೇಕು ಎಂದು ವಿಡಿಯೋದಲ್ಲಿ ನವಾಜ್ ಹೇಳಿದ್ದಾನೆ! ಅಂದಹಾಗೆ, ಪಬ್ಲಿಕ್ ಸರ್ವೆಂಟ್ ಎಂಬ 'ಐಡಿ'ಯಲ್ಲಿ ನವಾಜ್ ಈ ವಿಡಿಯೋ ವೈರಲ್ ಮಾಡಿದ್ದ! ಇದನ್ನು ಆಧರಿಸಿ ಬಂಡೆಪಾಳ್ಯ ಪೊಲೀಸರು ಆತನ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಂಡಿದ್ದಾರೆ.

ವಿಡಿಯೋ ವೈರಲ್ ಆಗುತ್ತಿದ್ದಂತೆಯೇ ಐನಾತಿ ಆರೋಪಿ ನವಾಜ್ ತಲೆ ಮರೆಸಿಕೊಳ್ಳಲು ಸ್ಕೆಚ್ ಹಾಕಿದ್ದ. ಆದರೆ, ಅಷ್ಟೊತ್ತಿಗಾಗಲೇ ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆತನನ್ನು ಎಸ್ಕೇಪ್ ಆಗಲು ಬಿಡದೆ ತಡವಿಕೊಂಡಿದ್ದಾರೆ. ಸದ್ಯ ಆತನನ್ನು ಪರಪ್ಪನ ಅಗ್ರಹಾರ ಜೈಲಿನಲ್ಲಿರಿಸಲಾಗಿದೆ! ☯

ಪಾಕಿಸ್ತಾನ ತಾನು ಭಾರತದ ರಫೇಲ್ ಯುದ್ಧ ವಿಮಾನವನ್ನು ಹೊಡೆದುರುಳಿಸಿರುವುದಾಗಿ ಸುಳ್ಳು ಹೇಳಿಕೆ ನೀಡಿತ್ತು. ಈ ಹೇಳಿಕೆಯನ್ನು ಚೀನಾದ ಸಾಮಾಜಿಕ ಜಾಲತಾಣಗಳಲ್ಲಿ ಬಹಿರಂಗವಾಗಿ ಸಂಭ್ರಮಿಸಲಾಯಿತು!

ಅನಧಿಕೃತ ವರದಿಗಳ ಪ್ರಕಾರ, ಪಾಕಿಸ್ತಾನಕ್ಕೆ ಬೆಂಬಲ ನೀಡುವ ಸಲುವಾಗಿ ಚೀನೀ ಯುದ್ಧ ವಿಮಾನ ಒಂದರಿಂದಲೂ ಕ್ಷಿಪಣಿಗಳನ್ನು ಭಾರತದತ್ತ ಉಡಾವಣೆಗೊಳಿಸಲಾಗಿದೆ. ಇದು ಚೀನಾ ಮೌನವಾಗಿದ್ದರೂ, ಪಾಕಿಸ್ತಾನಕ್ಕೆ ಸ್ಪಷ್ಟವಾಗಿ ಬೆಂಬಲ ನೀಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಆರಂಭದಲ್ಲಿ ಚೀನಾ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಕಟುವಾಗಿ ಖಂಡಿಸಿತ್ತು. ಆದರೆ, ಮೇ 8ರ ಬಳಿಕ ಚೀನಾ ಉಭಯ ದೇಶಗಳನ್ನು ಶಾಂತಿ ಕಾಪಾಡುವಂತೆ ಆಗ್ರಹಿಸಿದ್ದು, ಸಮಸ್ಯೆಯನ್ನು ನಿವಾರಿಸಲು ನೆರವಾಗುವಂತೆ ಅಂತಾರಾಷ್ಟ್ರೀಯ ಸಮುದಾಯವನ್ನು ಆಗ್ರಹಿಸಿತ್ತು.

ಏಪ್ರಿಲ್ 30ರಂದು ಮಾಸ್ಕೋದಲ್ಲಿ ನಡೆದ ಬ್ರಿಕ್ಸ್



ಭದ್ರತಾ ಸಲಹೆಗಾರರ ಸಮಾವೇಶದಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್ಪಿಂಗ್ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಡನೆ ನಗುತ್ತಾ ಸಮಾಲೋಚಿಸುತ್ತಿದ್ದ ದೃಶ್ಯಾವಳಿಗಳು ಕಂಡುಬಂದವು. ಈ ಸಭೆ ಭಯೋತ್ಪಾದನಾ ನಿಗ್ರಹದತ್ತ ಕೇಂದ್ರಿತವಾಗಿದ್ದರೂ, ಸಭೆಯೇ ನಿರರ್ಥಕ ಎನಿಸಿತ್ತು. ಯಾಕೆಂದರೆ, ಯಾವೊಂದು ಬ್ರಿಕ್ಸ್ ರಾಷ್ಟ್ರವೂ ಭಾರತ - ಪಾಕಿಸ್ತಾನದ ನಡುವೆ ನಡೆಯುತ್ತಿರುವ ಕದನದ ಕುರಿತು ಪ್ರಸ್ತಾಪಿಸಿರಲಿಲ್ಲ.

ರಷ್ಯಾ ಇಂದಿಗೂ ಈ ವಿಚಾರದಲ್ಲಿ ಭಾಗಿಯಾಗಿದ್ದು, ತನ್ನ ರಕ್ಷಣಾ ಉದ್ಯಮವನ್ನು ಬೆಳೆಸಲು ಪ್ರಯತ್ನ ನಡೆಸುತ್ತಿದೆ. ಆದರೆ, ರಷ್ಯಾ ಹಿಂದೆ ಇದ್ದಂತೆ ಒಂದು ನಂಬಿಕಾರ್ಹ ಸಹಯೋಗಿಯಾಗಿ ಮುಂದುವರಿದಿಲ್ಲ. ತನ್ನ ಆರಂಭಿಕ ಹೇಳಿಕೆಯಲ್ಲಿ ರಷ್ಯಾ ಭಾರತಕ್ಕೆ ಪೂರ್ಣ ಬೆಂಬಲ ನೀಡಿದ್ದು, ಬಳಿಕ ಆ ನಿಲುವಿನಿಂದ ಹಿಂದೆ ಸರಿದಿದೆ.

ಬದಲಿಗೆ, ರಷ್ಯಾದ ವಿದೇಶಾಂಗ ಸಚಿವ ಸರ್ಗೇ ಲವ್ರೋವ್ ಮಧ್ಯಸ್ಥಿಕೆ ವಹಿಸುವ ಮಾತನ್ನಾಡಿದ್ದು, ಪಾಕಿಸ್ತಾನದ ರಕ್ಷಣಾ ಸಚಿವರೊಡನೆಯೂ ಸಮಾಲೋಚನೆ ನಡೆಸಿದ್ದರು. ಹಿಂದೆ ರಷ್ಯಾ ಭಾರತದ ಸಂಪೂರ್ಣ ಬೆಂಬಲಿಗನಾಗಿತ್ತು. ಅದಕ್ಕೆ ಹೋಲಿಸಿದರೆ ಇದು ಸಂಪೂರ್ಣ ಭಿನ್ನ ನಡೆಯಾಗಿದ್ದು, ಭಾರತ ಇದನ್ನು ಕಡೆಗಣಿಸಲು ಸಾಧ್ಯವಿಲ್ಲ.

### ಭಾರತ ಅರ್ಥ ಮಾಡಿಕೊಳ್ಳಬೇಕಾದುದೇನು?

ಸರಳವಾಗಿ ಹೇಳುವುದಾದರೆ, ಭಾರತ ತನ್ನ ಮೇಲಷ್ಟೇ ತಾನು ಅವಲಂಬಿತವಾಗಬಹುದು. ಜಗತ್ತು ಈಗ ಹಿಂಸಾತ್ಮಕ ಕದನಗಳಲ್ಲಿ ಸಿಲುಕಿದ್ದು, ಭಾರತದ ಆತ್ಮೀಯ ಸ್ನೇಹಿತರೂ ಈಗ ಅಷ್ಟು ಒಗ್ಗಟ್ಟಿನಿಂದಿಲ್ಲ. ಇಂತಹ ಸನ್ನಿವೇಶದಲ್ಲಿ ಭಾರತ 'ನಿನ್ನ ಕೆಲಸ ನೀನೇ ಮಾಡು' ಎಂಬ ವಿಧಾನದತ್ತ ತಳ್ಳಲ್ಪಟ್ಟಿದ್ದು, ಇತರ ದೇಶಗಳ ಮೇಲೆ ಭಾರತ ಅವಲಂಭಿಸುವಂತಿಲ್ಲ.




ಅಮೆರಿಕಾ ಈಗ ತನ್ನ ಉನ್ನತ ಅಧಿಕಾರಿಗಳನ್ನು ತೆಗೆಯುವತ್ತ, ಅಥವಾ ಪುನರ್ ರಚನೆಯತ್ತ ಗಮನ ಹರಿಸುತ್ತಿದೆ. ಇದೇ ವೇಳೆ, ಅಮೆರಿಕಾ ದಕ್ಷಿಣ ಏಷ್ಯಾವನ್ನು ನಿಯಂತ್ರಿಸುವತ್ತ ಅಥವಾ ಪ್ರಭಾವ ಬೀರುವತ್ತ ಗಮನ ಹರಿಸುತ್ತಿದೆ. ಇದನ್ನು ಅಮೆರಿಕಾ ಹಿಂದಿನಿಂದಲೂ ನಡೆಸುತ್ತಾ ಬಂದಿದೆ.

ಇಂತಹ ಹಿನ್ನೆಲೆಯಲ್ಲಿ, ಭಾರತದ ವಿದೇಶಾಂಗ ನೀತಿ ತಜ್ಞರು ಕ್ವಾಡ್ ಗುಂಪು ಒಂದರ ಜೊತೆ ಮಾತ್ರವಲ್ಲದೆ (ಭಾರತ, ಅಮೆರಿಕಾ, ಜಪಾನ್ ಮತ್ತು ಆಸ್ಟ್ರೇಲಿಯಾಗಳನ್ನು ಒಳಗೊಂಡ ಗುಂಪು), ಅಮೆರಿಕಾದ ಜೊತೆಗಿನ ದ್ವಿಪಕ್ಷೀಯ ಸಂಬಂಧದಲ್ಲಿ ಭಾರತ ಎಂತಹ ಸ್ಥಾನ ಹೊಂದಿದೆ ಎನ್ನುವುದನ್ನೂ ಸರಿಯಾಗಿ ಅವಲೋಕಿಸಬೇಕಿದೆ. ಇಂತಹ ಸಹಯೋಗಿಗಳ ಮೇಲೆ ಎಷ್ಟರಮಟ್ಟಿಗೆ ನಾವು ಅವಲಂಬಿಸಬಹುದು ಎನ್ನುವುದನ್ನು ಮತ್ತೊಮ್ಮೆ ಆಲೋಚಿಸಲು ಇದು ಸೂಕ್ತ ಸಮಯವಾಗಿದೆ.

ಎರಡನೆಯದಾಗಿ, ಈಗ ವೈಮಾನಿಕ ಯುದ್ಧ ಏನಾದರೂ ನಡೆದರೆ, ಪಾಕಿಸ್ತಾನ ಮತ್ತು ಚೀನಾಗಳು ಜೊತೆಯಾಗಿ, ಚೀನೀ ಉಪಗ್ರಹ ಚಿತ್ರಗಳನ್ನು ಬಳಸಿಕೊಂಡು, ಭಾರತದ ವಿರುದ್ಧ ಕಾರ್ಯಾಚರಿಸುವ ಸಾಧ್ಯತೆಗಳಿವೆ. ಇಂತಹ ಜಂಟಿ, ಹೈಟೆಕ್ ಅಪಾಯಗಳನ್ನು ಭಾರತ ಕಡೆಗಣಿಸಲು ಸಾಧ್ಯವಿಲ್ಲ.

ಭಾರತ ತನ್ನ ಸಂಪೂರ್ಣ ವಾಯು ರಕ್ಷಣೆ ಮತ್ತು ಯುದ್ಧ ಕಾರ್ಯತಂತ್ರವನ್ನು ಮರು ಪರಿಶೀಲಿಸಿ, ಅಭಿವೃದ್ಧಿಪಡಿಸುವ ಅವಶ್ಯಕತೆಯಿದೆ. ಈಗ ಪರಿಸ್ಥಿತಿ ಕೇವಲ ಒಂದು ಪಾಕಿಸ್ತಾನವನ್ನು ಮಾತ್ರ ಎದುರಿಸುವುದಕ್ಕೆ ಸೀಮಿತವಾಗಿಲ್ಲ. ಬದಲಿಗೆ, ಒಂದು ಬಲವಾದ ಮಿಲಿಟರಿ ಸಹಭಾಗಿತ್ವವನ್ನೇ ಭಾರತ ಎದುರಿಸಬೇಕಿದೆ.

ಮೂರನೆಯದಾಗಿ, ಇಲ್ಲಿಯ ತನಕ ಬ್ರಹ್ಮೋಸ್ ಕ್ಷಿಪಣಿಗಳು ಮತ್ತು ಎಸ್-400 ವಾಯು ರಕ್ಷಣಾ ವ್ಯವಸ್ಥೆಗಳು ಭಾರತದ ಅತ್ಯಂತ ಶಕ್ತಿಶಾಲಿ ಆಯುಧಗಳಾಗಿವೆ. ಆದರೆ, ಭಾರತ ಏನಾದರೂ ರಷ್ಯಾದಿಂದ ಇನ್ನಷ್ಟು ಆಧುನಿಕ ಆಯುಧ ವ್ಯವಸ್ಥೆಗಳನ್ನು ಖರೀದಿಸಬೇಕಾದರೆ,




ಭಾರತ ರಷ್ಯಾ - ಉಕ್ರೇನ್ ಯುದ್ಧ ಕೊನೆಗೊಳ್ಳುವ ತನಕ ಕಾಯಬೇಕಾಗಬಹುದು.

ಅಂದರೆ, ರಷ್ಯಾ ಮತ್ತು ಉಕ್ರೇನ್ ನಡುವೆ ಶಾಂತಿ ಸ್ಥಾಪಿಸುವ ಸಲುವಾಗಿ ಮಧ್ಯಸ್ಥಿಕೆ ವಹಿಸಲು ಭಾರತ ಪ್ರಯತ್ನ ನಡೆಸಬೇಕಾಗಬಹುದು. ಭಾರತದ ವತಿಯಿಂದ ನಡೆಸುವ ಒಂದಷ್ಟು ರಾಜತಾಂತ್ರಿಕ ಪ್ರಯತ್ನಗಳು ಅಥವಾ ಮಧ್ಯಸ್ಥಿಕೆ ಭಾರತದ ದೀರ್ಘಕಾಲಿಕ ರಕ್ಷಣಾ ಹಿತಾಸಕ್ತಿಗಳನ್ನು ರಕ್ಷಿಸಲು ನೆರವಾಗಬಹುದು.

ನಾಲ್ಕನೆಯದಾಗಿ, ಈಗಾಗಲೇ ಒಂದು ಶಕ್ತಿ ಗುಂಪು ಅಥವಾ ಮೈತ್ರಿಕೂಟ ನಿರ್ಮಾಣವಾಗುತ್ತಿದ್ದು, ಭಾರತ ಇದಕ್ಕೆ ಸರಿಯಾಗಿ ತನ್ನ ಕಾರ್ಯವಿಧಾನವನ್ನು ಸರಿಹೊಂದಿಸಬೇಕಿದೆ. ಇದು ಭಾರತಕ್ಕೆ ಟರ್ಕಿಯೊಡನೆ ನೇರವಾಗಿ ವ್ಯವಹರಿಸುವುದನ್ನು ಆರಂಭಿಸುವ ಸಮಯವಾಗಿದ್ದು, ಅರ್ಮೇನಿಯಾಗೆ ಬೆಂಬಲ ನೀಡುವ ಕುರಿತು ಮರು ಪರಿಶೀಲಿಸಬೇಕಿದೆ. ಅದರಲ್ಲೂ ಅಜರ್‌ಬೈಜಾನ್‌ಗೆ ಈಗ ಇಸ್ರೇಲ್ ಮಿಲಿಟರಿ ನೆರವು ನೀಡುತ್ತಿರುವುದರಿಂದ, ಭಾರತ ತನ್ನ ನಿಲುವನ್ನು ಪರಿಶೀಲಿಸುವ ಅಗತ್ಯವಿದೆ.

ಅದರೊಡನೆ, ಭಾರತ ಇಸ್ರೇಲ್ ಅನ್ನು ತನ್ನ ರಕ್ಷಣಾ ಸಹಯೋಗದಲ್ಲಿ ಹೆಚ್ಚು ಸಕ್ರಿಯಗೊಳಿಸುವ ಕುರಿತೂ ಚಿಂತಿಸಬೇಕು. ಆದರೆ, ಭಾರತ ಇಂತಹ ಕ್ರಮ ಕೈಗೊಂಡರೆ, ಅದರಿಂದ ಅಮೆರಿಕಾಗೆ, ವಿಶೇಷವಾಗಿ ಪ್ರಮುಖ ರಕ್ಷಣಾ ಒಪ್ಪಂದಗಳ ವಿಚಾರಕ್ಕೆ ಸಂಬಂಧಿಸಿದಂತೆ ಅಸಮಾಧಾನ ಉಂಟಾಗಬಹುದು. ಆದ್ದರಿಂದ ಭಾರತ ಹೊಸ ಆಯ್ಕೆಗಳನ್ನು ಪರಿಶೀಲಿಸುತ್ತಾ, ತನ್ನ ಸಹಯೋಗಗಳಲ್ಲಿ ಸಮತೋಲನ ಸಾಧಿಸಬೇಕು.

ನಮ್ಮ ಸುತ್ತಲಿನ ಜಗತ್ತು ಇಂದು ಸಾಕಷ್ಟು ಬದಲಾಗಿದೆ. ಭಾರತದ ಒಂದಷ್ಟು ಹಳೆಯ ಸ್ನೇಹಿತರು ಇಂದು ನಂಬಿಕಾರ್ಹರಾಗಿ ಮುಂದುವರಿದಿಲ್ಲ. ಹಾಗೆಂದು ಹಳೆಯ ಶತ್ರುಗಳೇನೂ ಸ್ನೇಹಿತರಾಗಿ ಮಾರ್ಪಟ್ಟಿಲ್ಲ. ಆದರೆ, ಮಿತ್ರರು ಮತ್ತು ಶತ್ರುಗಳ ನಡುವಿನ ರೇಖೆ ಮಾತ್ರ ಮಸುಕಾಗುತ್ತಾ ಸಾಗಿದೆ. ಇದು ಭಾರತಕ್ಕೆ 'ನೀನು ನಿನ್ನ ಕಾಲ ಮೇಲೆ ನಿಲ್ಲಬೇಕು' ಎಂಬ ಸ್ಪಷ್ಟ ಸಂದೇಶ ನೀಡಿದೆ. ಭಾರತ ಸರ್ಕಾರ ಈಗಾಗಲೇ ಸ್ಪಷ್ಟ ಮಾತುಗಳಲ್ಲಿ ಮಾಹಿತಿ ನೀಡಿದ್ದು, ಸದ್ಯ ಭಾರತ - ಪಾಕಿಸ್ತಾನ ನಡುವೆ ಚಕಮಕಿಯನ್ನು ನಿಲ್ಲಿಸುವ ಒಪ್ಪಂದ ಮಾತ್ರವೇ ಜಾರಿಯಲ್ಲಿದ್ದು, ಅದಕ್ಕಿಂತ ಹೆಚ್ಚಿನ ಯಾವುದೇ ಒಪ್ಪಂದವಿಲ್ಲ ಎಂದಿದೆ. ಪಾಕಿಸ್ತಾನ ಈ ಅವಧಿಯನ್ನು ಬಳಸಿಕೊಂಡು, ತನ್ನ ಭಯೋತ್ಪಾದಕ ಜಾಲವನ್ನು ಮರು ನಿರ್ಮಿಸುವ ಸಾಧ್ಯತೆಗಳಿವೆ.

ಆತಂಕಕಾರಿ ಬೆಳವಣಿಗೆಯಲ್ಲಿ, ಅಮೆರಿಕಾ ಈಗ ಪಾಕಿಸ್ತಾನದಲ್ಲಿರುವ ಭಯೋತ್ಪಾದನಾ ಶಿಬಿರಗಳು ಕಾರ್ಯಾಚರಿಸುತ್ತಿರುವುದನ್ನು ಒಪ್ಪಿಕೊಳ್ಳುವುದನ್ನು ನಿಲ್ಲಿಸಿದೆ. ಇದು ಭಾರತಕ್ಕೆ ಇನ್ನಷ್ಟು ಕಷ್ಟಕರ ಸನ್ನಿವೇಶ ಸೃಷ್ಟಿಸಿದೆ. ಒಟ್ಟಾರೆಯಾಗಿ, ಪರಿಸ್ಥಿತಿ ಸದ್ಯಕ್ಕೆ ಸರಿಹೋಗುವ ಸಾಧ್ಯತೆಗಳಿಲ್ಲ. ಬದಲಿಗೆ, ಭಾರತದ ಮುಂದೆ ಇನ್ನಷ್ಟು ಸವಾಲುಗಳ ಸಾಲು ನಿಲ್ಲುವ ಸಾಧ್ಯತೆಗಳು ಹೆಚ್ಚಾಗಿವೆ. ☯

## ಪಾತಕ ಪ್ರಪಂಚ

# ಅವಳ ಅಂತರಂಗ...

ಇದು ಒಂದು ರೀತಿಯಲ್ಲಿ ಈ ಕಾಲದ ಕಾಲೇಜಿನ ಯುವತಿಯರು ಆಡುವ ಚೆಲ್ಲಾಟದ, ಅಪಾಯಕಾರಿ ಪ್ರಾಕ್ಟಿಕಲ್ ಜೋಕ್‌ನ ಹಿನ್ನೆಲೆಯಾಗಿದೆ. ಕೆಲವು ಯುವತಿಯರಿಗೆ ಪ್ರಾಕ್ಟಿಕಲ್ ಜೋಕ್ ಮಾಡಿ ಥ್ರಿಲ್ ಅನುಭವಿಸಬೇಕೆಂಬ ಆಸೆ ಇರುತ್ತದೆ. ಅದಕ್ಕಾಗಿ ಏನೇನೋ ಮಾಡಿಬಿಡುತ್ತಾರೆ.

ಕಾಲೇಜಿನ ಸತ್ಯಕತೆ.

ಆದರೆ ಪ್ರಚಾರ ಪಡೆದಿರಲಿಲ್ಲ.

ಕೆಲವು ಯುವತಿಯರಿಗೆ ಸೌಂದರ್ಯದ ಅಹಂ ಇರುತ್ತದೆ. ಅದರೊಂದಿಗೆ ಶ್ರೀಮಂತಿಕೆ ಇದ್ದರೆ, ಅಂತಹ ಯುವತಿಯರು ಆಡಬಾರದ ಆಟಗಳನ್ನು ಆಡುತ್ತಾರೆ.

ಪ್ರಾಯದಲ್ಲಿ ಹುಡುಕಾಟ ಎಂಬುದು ಸಹಜ. ಆದರೆ ಅದು ವಿಪರೀತ ಆಗಬಾರದು. ಇದು ಏನು ಸಾಮಾನ್ಯ ಅಲ್ಲ. ಇದರಿಂದ ಆಗುವ ಪರಿಣಾಮಗಳ ಬಗ್ಗೆ ಆಲೋಚನೆ ಮಾಡುವುದಿಲ್ಲ ಎಂಬುದು ಪ್ರಾಯೋಗಿಕ ವಿಚಾರ ಅಂತಹ ಒಂದು ಘಟನೆಯನ್ನು ಆಧರಿಸಿ, ಸ್ವಲ್ಪ ಪ್ರಮಾಣದಲ್ಲಿ ಕಲ್ಪನೆ ಸೇರಿಸಿ ಈ ವಿಶೇಷವಾದ ಲೇಖನ ರೂಪಿಸಲಾಗಿದೆ ಎಂಬುದು ನಿಜ.

●●●

ಅವಳ ಹೆಸರು ಶಾಲಿನಿ...!

ಶಾಲಿನಿಗೌಡ.

ಅವಳ ತಂದೆ ಪ್ರಭಾವಶಾಲಿ ಶ್ರೀಮಂತ ಉದ್ಯಮಿ ಮತ್ತು ರಾಜಕೀಯದಲ್ಲಿ ಪ್ರಭಾವ ಇರುವ ವ್ಯಕ್ತಿ.

ರಾಜೇಂದ್ರ... ರಾಜೇಂದ್ರಗೌಡ...!

ಶಾಲಿನಿ ಕಾಲೇಜ್ ಕ್ವೀನ್.

ಬ್ಯುಟಿಡಾಲ್!

ಚೆಲುವೆಯರಲ್ಲಿ ಚೆಲುವೆ.

ಪ್ರತಿದಿವಸ ತುಂಬಾ ಡಿಫರೆಂಟ್ ಆಗಿ ಡ್ರೆಸ್ ಮತ್ತು ಮೇಕಪ್ ಮಾಡಿಕೊಳ್ಳುತ್ತಾಳೆ. ಅವಳು ಕಾಲೇಜಿನ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದಿದ್ದಾಳೆ.

ಅವಳು ಮನಮೋಹಕ ಅಂದಗಾತಿ. ಅವಳ ಹತ್ತಿರ ಕಡಿಮೆ ಅಂದರೂ ಇಪ್ಪತ್ತೈದು ಸಾವಿರ ರೆಡಿ ಕ್ಯಾಶ್ ಇರುತ್ತದೆ. ಇನ್ನು ಬ್ಯಾಂಕ್ ಖಾತೆಯಲ್ಲಿ ಲಕ್ಷಗಳ ಲೆಕ್ಕದಲ್ಲಿ ಹಣ ಇವೆ. ಗೂಗಲ್ ಮತ್ತು ಫೋನ್‌ಪೇ ಇರೋದ್ರಿಂದ ಅವಳು ಹೈಲೆವೆಲ್‌ನಲ್ಲಿ ಕ್ಯಾಶ್‌ಲೆಸ್ ಆಗಿ ವ್ಯವಹಾರ ಮಾಡುತ್ತಾಳೆ.

ಅವಳು ಕಾಲೇಜಿಗೆ ಬಂದರೆ ಬಿಸಿಲಲ್ಲಿ ಬೆಳದಿಂಗಳು ಬಂದಂತೆ ಆಗುತ್ತದೆ. ಕೆಲವು ಸಲ ಅಂತು ತುಂಬಾ ಸೆಕ್ಸ್ ಅಪೀಲ್ ಕಾಣುವಂತೆ ಡ್ರೆಸ್ ಮತ್ತು ಮೇಕಪ್ ಮಾಡಿಕೊಳ್ಳುತ್ತಾಳೆ. ಅವಳು ಕಾರಿನಿಂದ ಇಳಿದರೆ ಅವಳ ಆ ಬಲು ಮೋಹಕ ಚೆಲುವನ್ನು ಹತ್ತಿರದಿಂದ ನೋಡಿ ಆನಂದಿಸಲು, ಪಡ್ಡೆ ಯುವಕರು ಗುಂಪು ಸೇರುತ್ತಾರೆ.

ಕ್ಲಾಸ್ ರೂಮಿನಲ್ಲಿ ಲೆಕ್ಚರರ್‌ಗಳು ಪಾಠ ಮಾಡುವಾಗ, ಬಹುತೇಕ ಸಮಯ ಅವರ ನೋಟ ಶಾಲಿನಿ ಮೇಲೆ ಇರುತ್ತದೆ. ತುಂಬಾ ಮಂದಿ ಯುವಕರಿಗೆ ಇವಳು ತುಂಬಾ ಅವಮಾನ ಮಾಡಿದ್ದಾಳೆ. ಆದರೂ ಸಹ ಅವಳ ಸೌಂದರ್ಯದ ಸೆಳೆತ ಇದೆ.

ಅವಳ ನಗು ಮತ್ತು ನೋಟಕ್ಕಾಗಿ ಕಾಲೇಜಿನ ಬಹುತೇಕ ಯುವಕರು ಕಾಯುತ್ತಿರುತ್ತಾರೆ. ಕೆಲವರು ಅವಳನ್ನು ಲವ್ ಮಾಡುತ್ತಿದ್ದಾರೆ ಮತ್ತು ಅವಳನ್ನು ಶತಾಯ-ಗತಾಯ ಒಲಿಸಿಕೊಳ್ಳಲು ಸಾಹಸ ಮಾಡುತ್ತಾರೆ ಮತ್ತು ಅವಳಿಂದ ಕ್ಯಾಕರಿಸಿ ಉಗಿಸಿಕೊಂಡಿದ್ದಾರೆ.

ಶಾಲಿನಿ ಕಿಲಾಡಿ ಚೆಲುವೆ.

ತನಗಾಗಿ ಹಂಬಲಿಸುವ ಯುವಕರನ್ನು ಆಟ ಆಡಿಸಿ ಫೂಲ್ ಮಾಡಿ ಮಜಾ ತೆಗೆದುಕೊಳ್ಳುತ್ತಾಳೆ. ಅವಳ ಜೊತೆ ಯಾವಾಗಲು ಗೆಳತಿಯರ ಗುಂಪು ಇರುತ್ತದೆ.

ಅವರಿಗೆಲ್ಲಾ ಇವಳು ಆಗಾಗ ಗ್ರ್ಯಾಂಡ್ ಪಾರ್ಟಿ ಕೊಡಿಸುತ್ತಾಳೆ. ಕಾರಲ್ಲಿ ಎಂ.ಜಿ. ರೋಡ್ ಮತ್ತು ಬ್ರಿಗ್ರೇಡ್ ರೋಡ್ ಅಂತ ತಿರುಗಿಸುತ್ತಾಳೆ. ಪಬ್ ಬಾರ್‌ನಲ್ಲಿ ಮಜಾ ಮಾಡಿಸುತ್ತಾಳೆ. ಹಾಗಾಗಿ ಅವಳನ್ನು ಖುಷಿಪಡಿಸಲು ಹೊಗಳುತ್ತಾ ಪ್ರಚೋದನೆ ಮಾಡುತ್ತಾರೆ.

ಗೆಳತಿ ಕಲ್ಪನ ''ಏ... ಶಾಲಿನಿ... ಪ್ರತಿದಿವಸ ಒಂದೇ ರೀತಿ ಆಟ ಆಡ್ತೀಯ. ಅದರಲ್ಲಿ ಮಜಾ ಸಿಗೋಲ್ಲ. ಬೇರೆ ರೀತಿ ತುಂಬಾ ಡಿಫರೆಂಟ್ ಆಗಿ ಆಟ ಆಡಿದ್ರೆ ಹೊಸ ರೀತಿ ಥ್ರಿಲ್ ಸಿಗುತ್ತೆ.''

''ಬೇರೆ ರೀತಿ ಅಂದ್ರೇನು?''

''ಪ್ರಾಕ್ಟಿಕಲ್ ಜೋಕ್.''

''ಪ್ರಾಕ್ಟಿಕಲ್ ಜೋಕ್... ನಂಗೆ ತುಂಬಾ ಇಷ್ಟ. ಆದರೆ ಯಾರ ಮೇಲೂ ಪ್ರಯೋಗ ಮಾಡಿರಲಿಲ್ಲ. ಹೊಸ ರೀತಿಯಲ್ಲಿ ಗೇಮ್ ಪ್ಲೇ ಮಾಡ್ಬೇಕು. ನೀವೇ ಯಾರಾದರೂ ಸೂಪರ್ ಐಡಿಯಾ ಕೊಡಿ'' ಎಂದು ಕೂಲ್ ಡ್ರಿಂಕ್ಸ್ ಸೀಸೆ ಎತ್ತಿಕೊಂಡಳು.

ಗೆಳತಿ ರೇವತಿ ಹೇಳುತ್ತಿದ್ದಾಳೆ.

ಹೊಸ ರೀತಿ ಆಟ.

ತುಂಬಾ ಸೆಕ್ಸಿಯಾಗಿ ಮಾತಾಡಬೇಕು.

ಕೆರಳಿಸುವ ರೀತಿ ನಗಬೇಕು.

ಶಾಲಿನಿಗೆ ಇದು ತುಂಬಾ ಖುಷಿ ಉಂಟು ಮಾಡಿತು. ಅವಳೀಗ ''ಓಕೆ ನನಗೆ ಇದು ತುಂಬಾ ಇಷ್ಟ ಆಗಿದೆ'' ಎಂದಳು.

ಉಳಿದ ಗೆಳತಿಯರು ಗಾಬರಿಯಾದರು.

ಒಬ್ಬಳು ಎಚ್ಚರಿಕೆ ನೀಡಿದಳು.

''ಏ ಶಾಲಿನಿ... ಟೂ ಮಚ್ ಈಸ್ ಟೂ ಬ್ಯಾಡ್. ನೀನು ಇಷ್ಟೊಂದು ಅಪಾಯಕಾರಿ ರೀತಿಯಲ್ಲಿ ಪ್ರಾಕ್ಟಿಕಲ್ ಜೋಕ್ ಮಾಡಬಾರದು.''

''ಮಾಡಿದ್ರೆ ಏನಾಗುತ್ತೆ?''

''ಅಪಾಯ ಎದುರಾಗುತ್ತೆ.''

ಶಾಲಿನಿ ನಗಲಾರಂಭಿಸಿದಳು.

ವ್ಯಂಗ್ಯ-ಅಪಹಾಸ್ಯದ ನಗು.

ಅವಳು ''ನನ್ನ ಡ್ಯಾಡಿ ಯಾರು ಅಂತ ಗೊತ್ತಿದೆ ತಾನೆ? ಇಂದು ಏನು ಸಾಮಾನ್ಯ ಅಲ್ಲ. ರೌಡಿಗಳು ಡ್ಯಾಡಿಗೆ ಬಾಡಿಗಾರ್ಡ್‌ಗಳು. ಪೊಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಡ್ಯಾಡಿಗೆ ಪ್ರಭಾವ ಇದೆ. ನಾನು ಇದಕ್ಕೆಲ್ಲಾ ಹೆದರುವ ಅಗತ್ಯ ಇಲ್ಲ'' ಎಂದಳು.

ಗೆಳತಿಯರಲ್ಲಿ ಮತ್ತೊಬ್ಬಳು ಎಚ್ಚರಿಕೆಯ ಬುದ್ಧಿವಾದ ಹೇಳಲು ಪ್ರಯತ್ನಿಸಿದಾಗ ರೇವತಿ ರೇಗಿದಳು. ''ಅವಳ ಉತ್ಸಾಹ ಆಟಗಳಿಗೆ ನೀವು ಅಡ್ಡಿ ಮಾಡ್ಬೇಡಿ. ಅವಳು ನಮ್ಮಂತೆ ಸಾಮಾನ್ಯ ಹೆಣ್ಣಲ್ಲ'' ಎಂದಳು.

''ಗುಡ್... ವೆರಿಗುಡ್ ರೇವತಿ... ಓಕೆ ನನ್ನ ಪ್ಲಾನ್ ಏನು ಅಂತ ಹೇಳು.''

ರೇವತಿ ಏನು ಮಾಡಿದಳು.

ಹಲವಾರು ಅನ್‌ನೋನ್ ಫೋನ್ ನಂಬರ್‌ಗಳನ್ನು ಚೀಟಿಗಳಲ್ಲಿ ಬರೆದು ಉಂಡೆ ಮಾಡಿ ಡಬ್ಬದಲ್ಲಿ ಹಾಕಿದಳು.

ಚೆನ್ನಾಗಿ ಕುಲಿಕಿದಳು.

''ಏ ಶಾಲಿನಿ... ಇಪ್ಪತ್ತು ಫೋನ್ ನಂಬರ್‌ಗಳನ್ನು ಬರೆಯಲಾಗಿದೆ. ಅವುಗಳಲ್ಲಿ ಒಂದನ್ನು ನೀನೇ ಎತ್ತಿಕೊಳ್ಳಬೇಕು.''

''ಓಕೆ. ಆಮೇಲೆ...''

''ಅವರಿಗೆ ಫೋನ್ ಮಾಡಿ ತುಂಬಾ ಸೆಕ್ಸಿಯಾಗಿ ಮಾತಾಡಬೇಕು'' ಎಂದು ವಿವರಿಸಲಾರಂಭಿಸಿದಳು.

''ಅಪರಿಚಿತ ವ್ಯಕ್ತಿಯ ನಂಬರ್‌ಗೆ ಫೋನ್ ಮಾಡ್ಬೇಕಾ?''

''ಹೌದು ಶಾಲಿನಿ.''

''ಅವನು ಕುಂಟ, ವೃದ್ಧ ಅಥವಾ ಕುರೂಪಿ ಆಗಿದ್ದರೆ ಏನು ಮಾಡೋದು?''

ರೇವತಿ ನಗುತ್ತಾ ''ನೀನೇನು ಅವರನ್ನ ಲವ್ ಮಾಡ್ಬೇಕಾ? ಮದುವೆ ಮಾಡ್ಕೊಂಡು ಸಂಸಾರ ಮಾಡ್ಬೇಕಾ? ಪ್ರಾಕ್ಟಿಕಲ್ ಜೋಕ್ ಮಾಡಿ ಥ್ರಿಲ್ ಎಂಜಾಯ್ ಮಾಡೋದು ಮುಖ್ಯ. ಇದು ಹೊಸ ರೀತಿಯಲ್ಲಿ ಮಜಾ ಕೊಡುತ್ತೆ. ಸೋ ಇದು ತುಂಬಾ ಸ್ಪೆಷಲ್ ಆಗಿರುತ್ತೆ. ಕಮಾನ್ ಟ್ರೈ ಮಾಡು.''

ಅವಳು ನಗುತ್ತಾ ಡಬ್ಬಿಯಲ್ಲಿರುವ ಚೀಟಿಗಳ ಉಂಡೆಯೊಂದನ್ನು ಎತ್ತಿಕೊಂಡಳು.

ಯಾವುದೋ ಅನ್‌ನೋನ್ ನಂಬರ್!

''ಓಕೆ ನಾನು ಮನೆಗೆ ಹೋದ್ಮೇಲೆ ರಾತ್ರಿ ಮಾಡ್ತೀನಿ. ಇಂತಹ ವಿಚಾರಗಳನ್ನು ಈ ಕಾಲೇಜಿನ ಆವರಣದಲ್ಲಿ ಮಾತಾಡಬಾರದು.''

''ಆದರೆ ನನಗೆ ಹೇಗೆ ಗೊತ್ತಾಗುತ್ತೆ.''

''ರೆಕಾರ್ಡ್ ಮಾಡಿ ನಿನಗೆ ಕಳುಸ್ತೀನಿ.''

''ಓಕೆ ಗುಡ್ ಐಡಿಯ. ಸ್ವಲ್ಪ ಸೆಕ್ಸ್ ಡೈಲಾಗ್ ಜಾಸ್ತಿ ಇರಲಿ.''

''ನಂಗೆ ಗೊತ್ತಿದೆ ಬಿಡು.''

''ಓಕೆ ನಾನು ರಾತ್ರಿ ಕಾಯುತ್ತಿರುತ್ತೀನಿ.''

●●●

ಆ ಮನೆಯಲ್ಲಿರುವ ಫ್ರಂಟ್ ಹಾಲ್‌ನಲ್ಲಿರುವ ಸೋಫಾದಲ್ಲಿ ಕುಳಿತಿದ್ದಾನೆ. ಎದುರಿಗೆ ಇದೆ ದೊಡ್ಡ ಟೀಪಾಯಿ. ಅದರ ಮೇಲೆ ಬಾರ್ ಅಂಡ್ ರೆಸ್ಟೋರೆಂಟ್ ಓಪನ್ ಆಗಿದೆ.

ಫುಲ್ ಬಾಟಲ್ ವಿಸ್ಕಿ, ಚಿಕನ್ ಕಬಾಬ್, ಫಿಶ್ ಮಂಚೂರಿ, ಸಿಗರೇಟ್ ಪ್ಯಾಕ್.

ಅವನ ತಲೆ ಬೋಳಾಗಿದೆ. ಎದುರಿಗೆ ಇರುವ ಕನ್ನಡಿಯಲ್ಲಿ ಕಂಡು ಬರುತ್ತಿದೆ ಅವನ ಪ್ರತಿ ರೂಪ...!

ಬೋಳು ತಲೆ, ಸಿಡುಬಿನ ಕಲೆಯ ಮುಖ, ದಡೂತಿ ಶರೀರ, ದೇಹದ ಬಣ್ಣ ಕಡು ಕಪ್ಪು, ಎಡತೋಳನ್ನು ಕತ್ತರಿಸಲಾಗಿದೆ. ಅವನೇ ರೌಡಿ ಕನ್ವರ್!

ರೌಡಿಸಂ ದಂಧೆಯಲ್ಲಿ ಅವನ ಎಡಭಾಗದ ತೋಳನ್ನು ಕತ್ತರಿಸಿ ಹಾಕಿದ್ದರು. ಆದರೂ ಸಹ ಅವನ ಪವರ್ ಕಡಿಮೆ ಆಗಿಲ್ಲ.

ಮಹಾನ್ ಕ್ರೂರಿ... ದುಷ್ಟ.

ಅವನು ಕತ್ತರಿಸಿರುವ ತೋಳಿನ ಭಾಗ ಕಾಣದ ರೀತಿಯಲ್ಲಿ ಸ್ಪೆಷಲ್ ಜರ್ಕಿನ್ ಅನ್ನು ಯಾವಾಗಲು ಹಾಕಿರುತ್ತಾನೆ.

ಪಿಸ್ತೂಲ್ ಮತ್ತು ಸ್ಪ್ರಿಂಗ್ ನೈಫ್ ಯಾವಾಗಲೂ ಜೇಬಲ್ಲಿ ಇರುತ್ತದೆ. ರಾತ್ರಿ ವೇಳೆ ಕುಡಿಯುವಾಗ ಎದುರಿಗೆ ಯಾರೂ ಇರಬಾರದು. ರಾತ್ರಿ ಒಂಭತ್ತು ಗಂಟೆಗೆ ಕುಡಿತ ಮತ್ತು ಸ್ಪೆಷಲ್ ಮಾಂಸದ ಊಟ ಮಾಡುತ್ತಾನೆ.

ಫೋನ್ ಕಾಲ್ ಬಂದಿತು. ತುಟಿಗಳ ನಡುವೆ ಉರಿಯುತ್ತಿರುವ ಸಿಗರೇಟ್ ಇದೆ. ವಿಸ್ಕಿ ತುಂಬಿರುವ ಗ್ಲಾಸ್ ಅನ್ನು ಟೇಬಲ್ ಮೇಲೆ ಇಟ್ಟು ಮೊಬೈಲ್ ಎತ್ತಿಕೊಂಡು ನೋಡಿದನು.

ಯಾವುದೋ ಅನ್‌ನೋನ್ ನಂಬರ್!

ಅವನು ಕೂಡಲೇ ಫೋನ್ ಅಟೆಂಡ್ ಮಾಡಿದನು. ಸೀಕ್ರೇಟ್ ಡೀಲಿಂಗ್ ಬಗ್ಗೆ ಮಾತಾಡಲು ಶ್ರೀಮಂತರು, ರಾಜಕಾರಣಿಗಳು ರಾತ್ರಿ ವೇಳೆ ಫೋನ್ ಮಾಡುತ್ತಿರುತ್ತಾರೆ. ಆದರೆ ಈಗ ಅವನಿಗೆ ಕೇಳಿಸಿದ್ದು, ಮಾದಕತೆ ತುಂಬಿರುವ ಹೆಣ್ಣಿನ ಧ್ವನಿ!

''ಯಾರು... ಯಾರರು?''

ಅವಳು ಮತ್ತೇರಿಸುವ ರೀತಿ ನಗಾಡಿದಳು.

ಅವನ ಮೈ ಝುಂ ಎಂದಿತು. ಅವನೀಗ ''ಏ... ಯಾರು ನೀನು'' ಎಂದನು.

''ಅಪ್ಸರೆ ರೂಪಿನ ಚೆಲುವೆ.''

''ನೀನು ಯಾರಾದರೆ ನನಗೇನು? ನನಗ್ಯಾಕೆ ಫೋನ್ ಮಾಡಿದ್ದೀಯ?''

''ಯಾಕೆ ಅಂತ ಆಮೇಲೆ ಹೇಳ್ತೀನಿ.''

''ನನ್ನ ಫೋನ್ ನಂಬರ್ ಯಾರು ಕೊಟ್ರು?''

''ಯಾರೂ ಕೊಡಲಿಲ್ಲ.''

''ತಲೆಹರಟೆ ಮಾತು ಬೇಡ.''

''ಏ ರಸಿಕರ ರಾಜಾ... ನಿನ್ನ ಶೃಂಗಾರತೆ ಬಗ್ಗೆ ನಾನು ಕೇಳಿದ್ದೀನಿ. ನೀನು... ನೀನು ರತಿಯನ್ನು ಸುಖದಲ್ಲಿ ತೇಲಾಡಿಸುವ ಸೋ ಕಾಲ್ಡ್ ಪವರ್‌ಫುಲ್ ಗಂಡಸು.''

ಅವನು ರೇಗಿದನು.

''ಏ... ಯಾರೇ ನೀನು?''

ಅವಳು ನಕ್ಕಳು.

ಫ್ಲೂಟ್ ನುಡಿಸಿದಂತೆ ಇದೆ ಆ ನಗು!

ಮಾದಕತೆ ತುಂಬಿದೆ.

''ನಾನು ಬ್ಯುಟಿಕ್ವೀನ್ ಶಾಲಿನಿ.''

''ನನಿನಗೆ ಹುಚ್ಚು ಹಿಡಿದಿದೆ ಅಂತ ಕಾಣುತ್ತೆ.''

''ಹೌದು ಕಾಮದ ಹುಚ್ಚು ಹಿಡಿದಿದೆ. ನಿನ್ನಂತ ಗಂಡಸಿನ ಜೊತೆ ಸೇರಿ ಸುಖ ಅನುಭವಿಸಿದರೆ ಆ ಹುಚ್ಚು ಬಿಡುತ್ತದೆ. ನನಗೆ ನೀನು ಬೇಕು. ಡೇ ಅಂಡ್ ನೈಟ್ ನಿನ್ನ ಜೊತೆ ಸೆಕ್ಸ್ ಎಂಜಾಯ್ ಮಾಡಬೇಕು.''

''ಏ... ನಾನ್ಯಾರು ಅಂತ ಗೊತ್ತಾ? ಕನ್ವರ್... ರೌಡಿ ಕನ್ವರ್‌ಲಾಲ್. ಎಂಟು ಫುಲ್ ಮರ್ಡರ್, ಹತ್ತು ಸಲ ರೇಪ್ ಮಾಡಿದ್ದೀನಿ. ನಾನು ರಾಕ್ಷಸ. ನನ್ನ ತಂಟೆಗೆ ಬರಬೇಡ. ಬಂದರೆ ನಿನ್ನ ರೇಪ್ ಮಾಡಿ ಮರ್ಡರ್ ಮಾಡ್ತೀನಿ.''

ಅವಳಿಂದ ಪ್ರತಿಕ್ರಿಯೆ ಬರಲಿಲ್ಲ.

''ಯಾಕೆ... ಭಯ ಆಗುತ್ತಾ? ಏ... ನನ್ ಜೊತೆ ಆಟ ಆಡ್ಬೇಡ. ಫೋನ್ ಕಟ್ ಮಾಡು.''

ಅವಳು ನಗಲಾರಂಭಿಸಿದಳು.

ಆ ನಗುವಿನಲ್ಲಿ ಸೆಳೆತ ಇದೆ.

ಈ ರೌಡಿ ಮೈ ಬಿಸಿಯಾಗುತ್ತಿದೆ.

ಬಯಕೆ ಪ್ರಚೋದಿಸುತ್ತಿದೆ.

''ಏ... ನಿನ್ನ ಹೆಸರು ಏನಂದೆ. ಹಾಂ... ಕನ್ವರ್... 'ಅಂತ' ಕನ್ನಡ ಸಿನಿಮಾದ 'ಕನ್ವರ್‌ಲಾಲ್'... ಏ ಲಾಲ್... ನೀನು ನನ್ನ ನೋಡಿದ್ದೆ... ಒಂದೇ ಒಂದು ಸಲ ಅನುಭವಿಸಿದರೆ ನೀನು ನನ್ನ ಸೌಂದರ್ಯದ ಗುಲಾಮ ಆಗ್ತೀಯ. ಆಗಾಗ ನನ್ನನ್ನು ಕರೆಸಿಕೊಳ್ತೀಯ. ಯಾಕೆ... ಯಾಕೆ ಗೊತ್ತಾ? ನಾನು ಸುಖ ಕೊಡುವುದರಲ್ಲಿ ರತಿ... ರತಿ ಚೆಲುವೆ. ನಿನ್ನ ಎಲ್ಲಾ ಆಸೆಗಳನ್ನ ನಗು, ನಗುತ್ತಾ ತೀರಿಸುತ್ತೇನೆ. ನನ್ನನ್ನು ನೀನು ಪರ್ಮನೆಂಟ್ ಆಗಿ ಇಟ್ಟುಕೊಳ್ತೀಯ ವಿನಹ ರೇಪ್ ಮಾಡೋಲ್ಲ. ನಾನೇ ರತಿಯಾಗಿ ಅರಳುವಾಗ ರೇಪ್ ಮಾಡುವ ಪ್ರಸಂಗ ಬರೋಲ್ಲ. ನಿನಗೆ ಸ್ಪೆಷಲ್ ಸುಖ ಕೊಟ್ಟಿರುವ ಹೆಣ್ಣನ್ನು ಮರ್ಡರ್ ಮಾಡಲು ಸಾಧ್ಯವೆ? ನಿನಗೆ ಮನಸ್ಸು ಬರೋಲ್ಲ ಬಿಡು.''

''ಏ ನಿನ್ನ ಹೆಸರೇನು?''

''ಶಾಲಿನಿ... ರತಿ ಶಾಲಿನಿ ಅಂತ.''

''ನೀನು ಫೂಲ್ ಮಾಡಲು ಈ ಯಮ ಸ್ವರೂಪಿಯ ಜೊತೆ ಆಟ ಆಡ್ತಿಲ್ಲ ತಾನೆ?''

''ಖಂಡಿತಾ ಇಲ್ಲ.''

''ಹಾಗಾದರೆ ನೀನು ನಾನು ಹಳಿದ ಜಾಗಕ್ಕೆ ಬರಬೇಕು.''

''ನಮ್ಮಿಬ್ಬರ ಮಿಲನ ಎಲ್ಲಿ, ಯಾವಾಗ ಅಂತ ಆಮೇಲೆ ಹೇಳ್ತೀನಿ. ಮೊದಲು ನಾನು ಇರುವ ಜಾಗವನ್ನು ಪತ್ತೆ ಮಾಡು. ನನ್ನ ಸೌಂದರ್ಯ ನ ನೋಡು. ಮೊದಲ ಸಲ ನಾವಿಬ್ಬರು ಎಲ್ಲೇ ಭೇಟಿ ಮಾಡಿದರೂ ನಾನಾಗಿಯೇ ನಿನಗೆ ಕಿಸ್ ಮಾಡ್ತೀನಿ. ಆಮೇಲೆ ನನ್ನನ್ನು ಎಲ್ಲಿಗೆ ಬೇಕಾದರೂ ಕರ್ಕೊಂಡು ಹೋಗಿ ನಿನಗೆ ಇಷ್ಟ ಬಂದಂತೆ ಮಜಾ ಮಾಡು.''

''ನನಗೆ ಚಾಲೆಂಜ್ ಮಾಡ್ತೀಯ?''

''ಇದು ಸೆಕ್ಸ್ ಚಾಲೆಂಜ್.''

''ನಿನ್ನನ್ನು ಪತ್ತೆ ಮಾಡಲು ಈ ಫೋನ್ ನಂಬರ್ ಸಾಕು.''

ಅವಳು ನಗಲಾರಂಭಿಸಿದಳು.

☞ 14

13 ☞

"ಯಾಕೆ ನಗುತ್ತಿದ್ದೀಯ?"

"ಯಾಕೆ... ಯಾಕೆ ಅಂದ್ರೆ... ಇದರಲ್ಲಿ ನನ್ನ ಹೆಸರು, ಮನೆ ವಿಳಾಸ ಪತ್ತೆ ಮಾಡಬಹುದು. ಆದರೆ ನಿನ್ನಂತ ಕನ್ವರ್ ಲಾಲ್ ರೌಡಿನ ಮನೆಗೆ ಕರೆಸಿಕೊಳ್ಳಲು ಆಗುತ್ತಾ?"

"ಹಾಗಾದರೆ ಹೇಗೆ ಪತ್ತೆ ಮಾಡಲಿ?"

"ನಾಳೆ ಸಂಜೆ ಆರು ಗಂಟೆಗೆ ಸರಿಯಾಗಿ ಶಿವಾಜಿರಾವ್ ಸರ್ಕಲ್ ಹತ್ತಿರ ಬರಬೇಕು. ಅಲ್ಲಿರುವ ಗಣಪತಿ ದೇವಸ್ಥಾನದ ಹತ್ತಿರ ನಿಂತಿರಬೇಕು. ಆರು ಗಂಟೆ ಹತ್ತು ನಿಮಿಷಕ್ಕೆ ಸರಿಯಾಗಿ ನಾನು ಫೋನ್ ಮಾಡ್ತೀನಿ. ಆರು ಗಂಟೆ ಇಪ್ಪತ್ತು ನಿಮಿಷಕ್ಕೆ ಸರಿಯಾಗಿ ಕಾರು ಬರುತ್ತದೆ. ಆ ಕಾರಿನ ಡ್ರೈವರ್ ಮೂಗ. ಅವನು ಮಾತಾಡೋಲ್ಲ. ನಿಮಗೆ ಇದೇ ಫೋನ್ ನಂಬರ್ ನಿಂದ ಮಿಸ್ಡ್ ಕಾಲ್ ಕೊಟ್ಟು ನೀನು ನಿಂತಿರುವ ಜಾಗಕ್ಕೆ ಬಂದು ಕಾರಿನ ಹತ್ತಿರ ಕರೆತರುತ್ತಾನೆ."

"ಇಷ್ಟೆಲ್ಲಾ ಸರ್ಕಸ್ ಯಾಕೆ?"

"ನನ್ನಂತ ಪ್ರಾಯದ ಚೆಲುವೆನ ಅನುಭವಿಸಬೇಕಾದರೆ ಸರ್ಕಸ್ ಮಾಡಲೇಬೇಕು."

"ಡ್ರೈವರ್‌ನ ಹೇಗೆ ಗುರುತಿಸಲಿ?"

"ಬ್ಲಾಕ್ ಜರ್ಕಿನ್, ಮಂಕಿ ಕ್ಯಾಪ್, ಕೂಲಿಂಗ್ ಗ್ಲಾಸ್ ಮತ್ತು ಹ್ಯಾಂಡ್ ಗ್ಲೌಸ್‌ಗಳನ್ನು ಹಾಕಿಕೊಂಡಿರುತ್ತಾನೆ. ಕೈಯಲ್ಲಿ ಸಿಗರೇಟ್ ಪ್ಯಾಕ್ ಇರುತ್ತದೆ."

"ಓಕೆ. ಆಮೇಲೆ..."

"ಅವನು ನಾನಿರುವ ಮನೆಗೆ ಕರೆದುಕೊಂಡು ಬರುತ್ತಾನೆ. ಬಹಿರಂಗ ಆಗಬಾರದು ಅಂತ ನಗರದ ಹೊರವಲಯದಲ್ಲಿ ಮನೆ ಮಾಡಿದ್ದೇನೆ. ಅಲ್ಲಿ ನಾನಿರುತ್ತೇನೆ. ನಿನ್ನ ಟೇಸ್ಟ್‌ಗೆ ತಕ್ಕಂತೆ ಡ್ರಿಂಕ್ಸ್, ನಾನ್‌ವೆಜ್ ಐಟಂಗಳಿರುತ್ತದೆ. ಬಟ್ ಸಿಗರೇಟ್ ಸೇದಬಾರದು. ಅದರ ಹೊಗೆ ನನಗೆ ಆಗೋಲ್ಲ."

"ನೀನು ಡ್ರಿಂಕ್ಸ್ ತಗೋತೀಯ?"

"ನಿನಗೆ ಕಂಪನಿ ಕೊಡಲು ಲೈಟ್ ಆಗಿ ಅಂದರೆ ಎರಡು ಅಥವಾ ಮೂರು ಪೆಗ್ ತಗೋತೀನಿ. ನಾನು ಕ್ವಾಟರ್‌ಗಳ ಲೆಕ್ಕದಲ್ಲಿ ಕುಡಿದು ಮಲಗಿದರೆ ನಿನಗೆ ಮಜಾ ಸಿಗೋಲ್ಲ. ನೀನು ಮುತ್ತು ಕೊಡುತ್ತಾ ನನ್ನ ಮೈ ಸವರಿದರೆ, ನಾನೂ ಸಹ ಡಬ್ಬಲ್ ಕಿಸ್ ಕೊಟ್ಟು ನಿನ್ನ ಬೆತ್ತಲೆ ಮೈ ಮಾಲೀಶ್ ಮಾಡ್ಬೇಕು."

ಅವನ ಮೈ ಬಿಸಿಯಾಗುತ್ತಿದೆ.

ಬಯಕೆ ಹುಚ್ಚೆದ್ದು ಕುಣಿಯುತ್ತಿದೆ.

ಆದರೂ ಏನೋ ನೆನಪಿಗೆ ಬಂದು "ನೋಡು... ನೋಡು... ಹಾಂ ಶಾಲಿನಿ ಅಲ್ವಾ ನಿನ್ನ ಹೆಸರು. ನೀನೇನೋ ನೀನು ಮಹಾ ಸೌಂದರ್ಯವತಿ ಅಂತ ವರ್ಣನೆ ಮಾಡಿಕೊಳ್ಳುತ್ತಿದ್ದೀಯ. ಆದರೆ ನಾನು ನಿನ್ನ ಫೋಟೋ ನೋಡಬೇಕು, ನನಗೆ ನಂಬಿಕೆ ಬಂದರೆ ನೀನು ಹೇಳಿದಂತೆ ಕೇಳ್ತೀನಿ."

ಅವಳಿಂದ ಪ್ರತಿಕ್ರಿಯೆ ಬರಲಿಲ್ಲ.

"ಹಲೋ... ಹಲೋ ಶಾಲಿನಿ..."

ಫೋನ್ ಲಿಂಕ್ ಕಟ್ ಆಗಿದೆ.

●●●

ಆ ರೂಮಿನಲ್ಲಿ ಶಾಲಿನಿ ಮತ್ತು ಅವಳ ಆತ್ಮೀಯ ಗೆಳತಿ ರೇವತಿ ಇದ್ದಾಳೆ. ಅವಳು ಹೇಳಿದ ರೀತಿ ಶಾಲಿನಿ ಆ ರೌಡಿಯನ್ನು ಪ್ರಚೋದನೆ ಮಾಡಿದ್ದಳು.

"ಏ... ಅವನು ಫೋಟೋ ಕಳಿಸು ಅಂತ ಹೇಳ್ತಾ ಇದ್ದಾನೆ."

ರೇವತಿ "ಫೋಟೋ ಮಾತ್ರ ಕಳಿಸಬೇಡ. ಆಮೇಲೆ ಆ ರೌಡಿ ನಿನ್ನ ಪತ್ತೆ ಮಾಡಿ ಮರ್ಡರ್ ಮಾಡಿಬಿಡ್ತಾನೆ" ಎಂದಳು.

"ಆದರೆ ಅವನು ನಾನು ಹೇಳಿರುವ ಜಾಗಕ್ಕೆ ಬರೋಲ್ಲ. ನನ್ನ ಡ್ಯಾಡಿ ಸರ್ಕಲ್‌ನಲ್ಲಿ ಹತ್ತಾರು ಮಂದಿ ರೌಡಿಗಳಿದ್ದಾರೆ. ಅವರೆಲ್ಲಾ ನನಗೆ ಸೆಕ್ಯುರಿಟಿ ಕೊಡ್ತಾರೆ. ಆ ಕನ್ವರ್ ನನಗೇನೂ ಮಾಡಲಾರ. ಆದರೂ ಫೋಟೋ ಕಳಿಸಲಾರೆ. ವನನ್ನು ಫೂಲ್ ಮಾಡಲು ಬೇರೆ ಏನಾದರೂ ಪ್ಲಾನ್ ಮಾಡ್ತೀನಿ" ಎಂದು ಸೋಫಾದಿಂದ ಎದ್ದು "ಏ ನಾನು ಟಾಯ್ಲೆಟ್‌ಗೆ ಹೋಗಿಬರ್‍ತೀನಿ. ನೀನು ಕಾಫಿ ಕುಡಿದು ರಿಲ್ಯಾಕ್ಸ್ ಮಾಡಿಕೊಂಡಿರು" ಎಂದು ಹೇಳಿ ಹೊರಟಳು.

ರೇವತಿ ಚಡಪಡಿಸುತ್ತಿದ್ದಾಳೆ.

ಅವಳ ಮುಖದಲ್ಲಿ ನಗು ಮೂಡಿತು. ಆ ನಗುವಿನಲ್ಲಿ ಶೀತಲ ಕ್ರೌರ್ಯವಿದೆ.

ಅವಳು ಈ ರೀತಿ ಮಾಡಬಾರದಿತ್ತು.

ಅವಳೇನು ಮಾಡಿದಳು.

ಶಾಲಿನಿಯ ಮೊಬೈಲ್‌ನಲ್ಲಿದ್ದ ಫೋಟೋಗಳನ್ನು ಅವಳು ಆ ರೌಡಿಗೆ ಫೋನ್ ಮಾಡಿದ್ದ ಬೇರೊಂದು ಮೊಬೈಲ್. (ಯಾವುದೋ ಹೆಸರಿನಲ್ಲಿ ಸಿಮ್ ಪಡೆದುಕೊಂಡು, ಪಡ್ಡೆಗಳನ್ನು ಫೂಲ್ ಮಾಡಲು ಉಪಯೋಗಿಸುತ್ತಿದ್ದಳು. ಬಡ ಹೆಂಗಸರಿಗೆ ತುಂಬಾ... ತುಂಬಾ ಹಣ ಕೊಟ್ಟು ಅವಳಿಂದ ಅವಳ ಸಿಮ್ ಪಡೆದು ಬೇರೊಂದು ಮೊಬೈಲ್‌ಗೆ ಹಾಕಿಕೊಂಡು ಆಟ ಆಡುತ್ತಿದ್ದಳು. ರೌಡಿ ಕನ್ವರ್‌ಗೆ ಫೋನ್ ಮಾಡಿರೋದು ಬೇನಾಮಿ ಸಿಮ್‌ನ ಮೊಬೈಲ್‌ನಿಂದ.)

ಆದರೆ... ಆದರೆ ರೇವತಿ, ಗೆಳತಿಯ ವರ್ಜಿನಲ್ ಮೊಬೈಲ್‌ನಿಂದ ಫೋಟೋಗಳು ಮತ್ತು ಮೆಸೇಜ್ ಕಳಿಸಿದ್ದಳು.

ಆ ಮೆಸೇಜ್‌ನಲ್ಲಿ ಏನಿದೆ?

"ಫೋಟೋಗಳನ್ನು ಕಳಿಸಿರೋದು ವಿಚಾರನ ಪ್ರಸ್ತಾಪ ಮಾಡಬೇಡಿ. ಇದು ಶಾಲಿನಿಯ ವರ್ಜಿನಲ್ ಮೊಬೈಲ್ ನಂಬರ್. ಅವಳು ನಿಮಗೆ ಫೋನ್ ಮಾಡಿರೋದು ಬೇನಾಮಿ ನಂಬರ್‌ನಿಂದ. ಅರ್ಥವಾಗಿದೆ ಅಲ್ವಾ?"

ಶಾಲಿನಿ ಟಾಯ್ಲೆಟ್‌ನಿಂದ ಬರುವುದರಲ್ಲಿ ಫೋಟೋಗಳು ಮತ್ತು ಮೆಸೇಜ್ ಅನ್ನು ಡಿಲೀಟ್ ಮಾಡಿದಳು.

ಕಾಫಿ ಕುಡಿಯುತ್ತಿದ್ದಾಳೆ.

ಗೆಳತಿಯ ಶೀತಲ ಕ್ರೌರ್ಯದ ಬಗ್ಗೆ ಹೇಗೆ ತಾನೇ ಗೊತ್ತಾಗಲು ಸಾಧ್ಯ? ಈ ಹಿಂದೆ ಫೋನ್ ಮಾಡಿದ್ದ ಬೇನಾಮಿ ನಂಬರ್‌ನಿಂದ ಪುನಹ ಕನ್ವರ್‌ಗೆ ಫೋನ್ ಮಾಡಿ, ಫೋಟೋಗಳನ್ನು ಕಳಿಸಲಾರೆ ಎಂದು ಏನೇನೋ ನಾಟಕ ಆಡಿದಳು.

ಆದರೂ ಸಹ ನಂಬುವಂತೆ ನಾಟಕ ಆಡಿದನು.

ಪ್ರೋಗ್ರಾಂ ಫಿಕ್ಸ್ ಆಗಿದೆ.

●●●

ಶಿವಾಜಿರಾವ್ ಸರ್ಕಲ್!

ಆರು ಗಂಟೆಗೆ ಸರಿಯಾಗಿ ಕನ್ವರ್ ಅಲ್ಲಿಗೆ ಬಂದಿದ್ದನು. ಹತ್ತು ನಿಮಿಷಗಳ ನಂತರ ಫೋನ್ ಮಾಡಿದಳು.

ಒಬ್ಬನನ್ನು ಫೂಲ್ ಮಾಡಿ ಥ್ರಿಲ್ ಎಂಜಾಯ್ ಮಾಡಲು ಅಪಾಯಕಾರಿ ರಿಸ್ಕ್ ಅನ್ನು ತೆಗೆದುಕೊಳ್ಳುತ್ತಿದ್ದಾಳೆ. ರಹಸ್ಯ ಬಹಿರಂಗ ಆಗಬಾರದು ಅಂತ ಬ್ಲಾಕ್ ಜರ್ಕಿನ್, ಜೀನ್ಸ್ ಪ್ಯಾಂಟ್, ಮಂಕಿ ಕ್ಯಾಪ್, ಕೂಲಿಂಗ್ ಗ್ಲಾಸ್ ಮತ್ತು ಹ್ಯಾಂಡ್ ಗ್ಲೌಸ್ ಧರಿಸಿದ್ದಾಳೆ.

ನನ್ನ ಕಡೆಯ ಡ್ರೈವರ್ ಈ ವೇಷದಲ್ಲಿ ಬರುತ್ತಾನೆ. ಕೈಯಲ್ಲಿ ಸಿಗರೇಟ್ ಪ್ಯಾಕ್ ಇರುತ್ತದೆ ಎಂದು ಹೇಳಿದ್ದಳು. ಈಗ ತಾನೇ ಆ ಗೆಟಪ್‌ನಲ್ಲಿ ಬಂದಿದ್ದಾಳೆ.

ತನ್ನ ಧ್ವನಿ ಗೊತ್ತಾಗಬಾರದು ಅಂತ ಡ್ರೈವರ್ ಮೂಗ ಎಂದು ಹೇಳಿದ್ದಳು. ಅವನಿಗೆ ಸಂಜ್ಞೆ ಮಾಡಿ ಕಾರಿನ ಹತ್ತಿರ ಕರೆದುಕೊಂಡು ಬಂದಳು.

ಕಾರು ಚಲಿಸುತ್ತಿದೆ. ಶಾಲಿನಿ ಡ್ರೈವಿಂಗ್ ಮಾಡುತ್ತಿದ್ದಾಳೆ. ಅವಳ ಪಕ್ಕದಲ್ಲಿ ಕುಳಿತಿರುವ ಕನ್ವರ್‌ಗೆ ಏನೋ ಅನುಮಾನ ಬಂದು ಆ ಡ್ರೈವರ್ ವೇಷದಲ್ಲಿರುವ ಅವಳನ್ನು ಈಗ ಪರೀಕ್ಷೆ ಮಾಡುವ ರೀತಿ ನೋಡಿದನು.

ಶಾಲಿನಿಗೆ ಗಾಬರಿಯಾಗುತ್ತಿದೆ.

ಪ್ರಾಕ್ಟಿಕಲ್ ಥ್ರಿಲ್ ಆಟ ಆಡುವ ಮೊದಲು ಅವನನ್ನು ನೋಡಿರಲಿಲ್ಲ. ಅವನ ದಢೂತಿ ದೇಹ, ಮುಖದ ವಿಕಾರಳತೆ ಕಂಡು ಸಣ್ಣಗೆ ನಡುಕ ಉಂಟಾಗಿದೆ.

ಅವಳ ಪ್ಲಾನ್ ಏನು? ಈ ರೌಡಿಯನ್ನು ನಿರ್ಜನ ಪ್ರದೇಶದ ಮನೆಗೆ ಕರೆದುಕೊಂಡು ಹೋಗುವುದು. ಈಗಾಗಲೇ ನೇಮಕಗೊಂಡಿರುವ, ಬಲು ಕುರೂಪಿ (ಬಡ ಯುವತಿ) ಹೆಣ್ಣು ಇವಳು. ಕೊಟ್ಟ ಇಪ್ಪತ್ತೈದು ಸಾವಿರ ರೂಪಾಯಿ ಹಣಕ್ಕಾಗಿ, ಅವಳು ಕರೆದುಕೊಂಡು ಬರುವ ವ್ಯಕ್ತಿಯೊಂದಿಗೆ ರತಿಯಾಗಲು ಸಿದ್ಧಳಾಗಿದ್ದಳು.

ನಂತರ ಏನು? ರೌಡಿ ಮನೆಗೆ ಬಂದ ಕೂಡಲೇ ಶಾಲಿನಿ ಕೊಟ್ಟಿದ್ದ 'ಕ್ಲೋರೋ ಸ್ಪ್ರೇಯರ್' ಅನ್ನು ತುಂಬಾ ಕಡಿಮೆ ಪ್ರಮಾಣದಲ್ಲಿ ರೌಡಿಯ ಮುಖದ ಮೇಲೆ ಸ್ಪ್ರೇ ಮಾಡಬೇಕು.

ಅವನಿಗೆ ಅರೆಪ್ರಜ್ಞಾಸ್ಥಿತಿ ಉಂಟಾಗುತ್ತದೆ ಎಂಬುದು ನಿಜ. ಆಗ ಏನಾಗುತ್ತದೆ?

ಈ ಕುರೂಪಿ ಹೆಣ್ಣಿನ ಜೊತೆ ಕಾಮದಾಟ ಆಡುತ್ತಾನೆ. ಅದನ್ನು ವೀಡಿಯೋ ಕವರೇಜ್ ಮಾಡಲು ನಾಲ್ಕು ಕಡೆಗಳಲ್ಲಿ ವೀಡಿಯೋ ಕ್ಯಾಮರಾಗಳನ್ನು ಫಿಕ್ಸ್ ಮಾಡಿಸಿದ್ದಾಳೆ. ಎಲ್ಲಾ ಮುಗಿದ ಮೇಲೆ ಆ ವೀಡಿಯೋ ಕ್ಲಿಪ್ ಅನ್ನು ಆ ರೌಡಿಗೆ ಕಳಿಸಬೇಕು.

ಇದರಿಂದ ಏನಾಗುತ್ತದೆ?

ಅದನ್ನು ಕಲ್ಪನೆ ಮಾಡಿಕೊಂಡು ಇವಳು ಒಂದು ರೀತಿಯಲ್ಲಿ ಥ್ರಿಲ್ ಎಂಜಾಯ್ ಮಾಡುತ್ತಿದ್ದಾಳೆ. ಆ ಕ್ಷಣಗಳಿಗಾಗಿ ಕಾಯುತ್ತಿದ್ದಾಳೆ.

ಕಾರು ಈಗ ನಿರ್ಜನ ಪ್ರದೇಶದ ಆ ಮನೆಗೆ ಬಂದಿದ್ದಾರೆ. ಶಾಲಿನಿಗೆ ಗೊತ್ತಿರಲಿಲ್ಲ.

ರೇವತಿ ಕಳಿಸಿದ್ದ ಇವಳ ವರ್ಜಿನಲ್ ಫೋಟೋಗಳನ್ನು ನೋಡಿದ್ದನು. ಡ್ರೈವರ್ ರೀತಿಯಲ್ಲಿ ಗೆಟಪ್ ಬದಲಿಸಿಕೊಂಡಿರುವ ಅವಳ ಬಗ್ಗೆ ಅನುಮಾನ ಬಂದಿತ್ತು. ತನ್ನ ಮೊಬೈಲ್‌ಗೆ ರೇವತಿ ಕಳಿಸಿದ್ದ ಆ ಫೋಟೋಗಳನ್ನು ನೋಡಿದ್ದನು.

ಶಾಲಿನಿ ಕಾರಿನಿಂದ ಇಳಿದು ಕನ್ವರ್‌ಗೆ ಆ ಮನೆಯೊಳಗೆ ಹೋಗುವಂತೆ ಸಂಜ್ಞೆ ಮಾಡಿದಳು. ಯಾಕೆ ಅಂದರೆ ಡ್ರೈವರ್ ಮೂಗ ಅಂತ ಫೋನ್‌ನಲ್ಲಿ ಹೇಳಿದ್ದಳಲ್ಲ.

ಮುಂದೆ ಏನಾಯಿತು?

●●●

ಮನೆಯವರು ಗಾಬರಿಯಾಗಿದ್ದಾರೆ. ಶಾಲಿನಿ ಮನೆಗೆ ಬಂದಿಲ್ಲ.

ಫೋನ್ ಸ್ವಿಚ್ ಆಫ್ ಆಗಿದೆ.

ಸಂಬಂಧಿಕರು ಮತ್ತು ಅವಳ ಗೆಳತಿಯರಿಗೆಲ್ಲಾ ಫೋನ್ ಮಾಡಿದರು.

ರೇವತಿಗೆ ಸತ್ಯ ತಿಳಿದಿತ್ತು. ಆದರೆ ಹೇಳಲಿಲ್ಲ.

ಇವಳ ಶಾಲಿನಿಯ ವರ್ಜಿನಲ್ ಫೋಟೋ ಕಳಿಸಿ, ಮೆಸೇಜ್ ಮೂಲಕ ಸುಳಿವನ್ನು ನೀಡಿದ್ದಳು. ಈಗ ಆಗಿರೋದು ಏನು? ರೌಡಿಗಳಿಗೆ ಆದೇಶ ಬಂದಿದೆ. ಅವರು ಎಲ್ಲಾ ಕಡೆ ಹುಡುಕುತ್ತಿದ್ದಾರೆ.

ರೇವತಿಗೆ ಭಯವಾಗುತ್ತಿದೆ. ಒಂದು ವೇಳೆ ನಿಜ ಬಹಿರಂಗಗೊಂಡರೆ ಶಾಲಿನಿಯ ತಂದೆ ಸುಮ್ಮನೆ ಬಿಡಲಾರರು.

●●●

ಎರಡು ದಿನಗಳ ನಂತರ ಶಾಲಿನಿಯ ಮೊಬೈಲ್‌ನಿಂದ ರೌಡಿ ಕನ್ವರ್ ಫೋನ್ ಮಾಡಿ ಶಾಲಿನಿ ಎಲ್ಲಿದ್ದಾಳೆ ಮತ್ತು ಯಾವ ಸ್ಥಿತಿಯಲ್ಲಿ ಇದ್ದಾಳೆ ಎಂಬುದನ್ನು ಹೇಳಿದನು.

●●●

ಶಾಲಿನಿಗೆ ಬುದ್ಧಿಭ್ರಮಣೆ ಆಗಿದೆ. ಅವಳು ಸೌಂದರ್ಯದ ಮೇಲೆ ಎರಡು ದಿನಗಳ ಕಾಲ ಸತತವಾಗಿ ಅತ್ಯಾಚಾರ ಆಗಿದೆ.

ಅವಳ ತಲೆ ಬೋಳಿಸಲಾಗಿದೆ.

ಅವಳು ಬೆತ್ತಲಾಗಿ ಬಿದ್ದಿದ್ದಳು. ದೇಹದ ತುಂಬಾ ಕೆಂಪು, ನೀಲಿ, ಹಳದಿ, ಹಸಿರು ಬಣ್ಣಗಳನ್ನು ಬಳಿಯಲಾಗಿದೆ. ಅವಳಿಗೆ ಪ್ರಜ್ಞೆ ಬರಲಿಲ್ಲ.

ರೇವತಿ ಹಳ್ಳಿಯಲ್ಲಿರುವ ತಾತನ ಮನೆಗೆ ಹೋಗಿದ್ದಾಳೆ.

ಶಾಲಿನಿಗೆ ಟ್ರೀಟ್‌ಮೆಂಟ್ ಕೊಡುತ್ತಿದ್ದಾರೆ.

ಕನ್ವರ್ ಎಸ್ಕೇಪ್ ಆಗಿದ್ದಾನೆ. ☯

# ಬೆಂಗಳೂರು ವರದಿಗಾರರ ಕೂಟಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ



ಆರ್.ಟಿ. ವಿಠ್ಠಲಮೂರ್ತಿ

ಬೆಂಗಳೂರು ವರದಿಗಾರರ ಕೂಟದ ಸರ್ವಸದಸ್ಯರ ಸಭೆ ಹಾಗೂ ಚುನಾವಣೆಯು ಬೆಂಗಳೂರು ಪ್ರೆಸ್ ಕ್ಲಬ್ ಆವರಣದಲ್ಲಿ ನಡೆಯಿತು. ಮೇ 18, 2025ರಂದು ನಡೆದ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಹಿರಿಯ ಪತ್ರಕರ್ತರಾದ ಆರ್.ಟಿ. ವಿಠ್ಠಲಮೂರ್ತಿ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದ್ದು, ಟಿವಿ-9 ಮುಖ್ಯವರದಿಗಾರ ಹೆಚ್.ವಿ. ಕಿರಣ್ ಅವರು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಹಿರಿಯ ವರದಿಗಾರ ಕೆ.ಎನ್. ನಿರಂಜನ್- ಉಪಾಧ್ಯಕ್ಷರಾಗಿ, ಈ ಸಂಜೆ ಪತ್ರಿಕೆಯ ಹಿರಿಯ ವರದಿಗಾರ ಶಿವಣ್ಣ- ಖಜಾಂಚಿಯಾಗಿ, ಹಿರಿಯ ಪತ್ರಕರ್ತ ಆರ್.ಎಚ್. ನಟರಾಜ್ ಅವರು ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಉಳಿದಂತೆ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹಿರಿಯ ಪತ್ರಕರ್ತ ಕೆ.ಎಂ. ಶಿವರಾಜು (ಮೈಸೂರು ಮಿತ್ರ), ಕೆ.ಎಸ್. ಸೋಮಶೇಖರ್ (ಇಂದು ಸಂಜೆ), ಚಂದ್ರಶೇಖರ್ ಜಿ. (ಸಂಜೆ ಎಕ್ಸ್‌ಪ್ರೆಸ್), ಸೈಯದ್ ಖೀರ್‌ಪಾಷ ಖಾದ್ರಿ (ಡೈಲಿ ಸಾಲಾರ್) ಹಾಗೂ ಬಿ.ಟಿ. ರಮ್ಯ (ಸುದ್ದಿಲೋಕ) ಅವರನ್ನು ಆಯ್ಕೆ ಮಾಡಲಾಗಿದೆ.

ಕಾರ್ಯಕಾರಿ ಸಮಿತಿಯಲ್ಲಿನ ಆರು ಸ್ಥಾನಗಳ ಪೈಕಿ ನಾಮಪತ್ರ ಸಲ್ಲಿಸಿದ ಐವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದ್ದು, ಉಳಿದ ಒಂದು ಸದಸ್ಯ ಸ್ಥಾನಕ್ಕೆ ಮುಂಬರುವ ಕಾರ್ಯಕಾರಿಣಿ ಸಮಿತಿ ನಾಮನಿರ್ದೇಶನ ಮಾಡುವ ಅಧಿಕಾರ ಹೊಂದಿರುತ್ತದೆ. ಅಂದಹಾಗೆ, ಆರ್.ಟಿ. ವಿಠ್ಠಲಮೂರ್ತಿಯವರು 1990ರ ದಶಕದಲ್ಲಿ 'ಪೊಲೀಸ್ ನ್ಯೂಸ್' ವಾರಪತ್ರಿಕೆಯ ಸೋದರ ಪತ್ರಿಕೆಯಾದ ಮುಂಬಯಿನಲ್ಲಿ ಪ್ರಕಟಗೊಳ್ಳುತ್ತಿರುವ 'ಕರ್ನಾಟಕ ಮಲ್ಲ' ದಿನಪತ್ರಿಕೆಗೆ ಬೆಂಗಳೂರು ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಎಸ್.ಎಸ್. ರೆಡ್ಡಿಯವರ ಜೊತೆ ತಾವೂ ಸಹ ಬರೆಯುತ್ತಿದ್ದರು. ಮುಂದೆ ರಾಜಕೀಯ ವರದಿಗಾರರಾಗಿ ವಿವಿಧ ದೈನಿಕ ಹಾಗೂ ವಾರಪತ್ರಿಕೆಗಳಲ್ಲಿ ವರದಿ ಮಾಡಿ ಹೆಸರು ಸಂಪಾದಿಸಿದ ಆರ್.ಟಿ. ವಿಠ್ಠಲಮೂರ್ತಿಯವರು ಇಂದು ವರದಿಗಾರರ ಕೂಟದ ಅಧ್ಯಕ್ಷರಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಅವರು ಇನ್ನಷ್ಟು ಸಾಧನೆಗಳನ್ನು ಮಾಡಲಿ ಎಂದು ಆಶಿಸೋಣ. ☯

# ಜನಾರ್ಧನ ರೆಡ್ಡಿ ಜೈಲು ಸೇರುತ್ತಿದ್ದಂತೆ ಮಗನ ಸಿನಿಮಾ ರಿಲೀಸ್‌ಗೆ ತಯಾರಿ: ಏನಿದು 'ಜೂನಿಯರ್' ಲೆಕ್ಕಾಚಾರ?



ಒಂದು ಕಾಲದಲ್ಲಿ ಬಳ್ಳಾರಿ ದೊರೆ ಅಂತಲೇ ಕರೆಸಿಕೊಳ್ಳುತ್ತಿದ್ದ ಜನಾರ್ಧನ ರೆಡ್ಡಿ ವೈಭೋಗದ ಜೀವನ ನಡೆಸಿದ್ದರು. ಗಣಿ ದಣಿಗಳಾಗಿ ವೈರಿಗಳ ಮುಂದೆ ಮೆರೆದವರು. ರಾಜಕೀಯಕ್ಕೆ ಎಂಟ್ರಿ ಕೊಟ್ಟು ಗೆದ್ದವರು. ಉದ್ಯಮ ಹಾಗೂ ರಾಜಕೀಯ ಎರಡರಲ್ಲೂ ಯಶಸ್ಸು ಸಾಧಿಸಿದ್ದ ಜನಾರ್ಧನ ರೆಡ್ಡಿಯಿಂದ ಅಕ್ರಮ ಗಣಿಗಾರಿಕೆ ಎಲ್ಲವನ್ನು ಕಸಿದುಕೊಂಡಿದೆ. ಕಳೆದ ಒಂದೂವರೆ ದಶಕದಿಂದ ಇದೇ ಪ್ರಕರಣದ ಸುತ್ತ ಅವರ ಜೀವನ ಸಾಗುತ್ತಿದೆ.

1999ರಲ್ಲಿ ರಾಜಕೀಯಕ್ಕೆ ಎಂಟ್ರಿ ಕೊಟ್ಟಿದ್ದ ಜನಾರ್ಧನ ರೆಡ್ಡಿ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿದ್ದರು. ಸಚಿವರಾಗಿ ರಾಜಕೀಯದಲ್ಲೂ ಉತ್ತುಂಗದಲ್ಲಿದ್ದ ಜನಾರ್ಧನ ರೆಡ್ಡಿ ಅದ್ಯಾವಾಗ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಸಿಕ್ಕಿಕೊಂಡರೋ ಎಲ್ಲೂ ಹೊರಟು ಹೋಯ್ತು. ಗಣಿದಣಿ ಅನ್ನೋ ಪಟ್ಟನೂ ಹೋಯ್ತು. ರಾಜಕೀಯ ಭವಿಷ್ಯನೂ ಡೋಲಾಯಮಾನವಾಯ್ತು. ಇನ್ನೇನು ರೆಡ್ಡಿ ಕಥೆ ಮುಗೀತು ಅಂತ ನಿಟ್ಟುಸಿರು ಬಿಟ್ಟವರ ಮುಂದೆ ಮತ್ತೆ ಗೆದ್ದು ಬೀಗಿದ್ದರು. ಆದರೆ, ಇದು ಹೆಚ್ಚು ದಿನ ಉಳಿಯಲಿಲ್ಲ, ಮತ್ತೆ ಅದೇ ಪ್ರಕರಣದಲ್ಲಿ ಜೈಲು ಸೇರಿದ್ದಾರೆ. ಇಲ್ಲಿ ಇವರ ರಾಜಕೀಯ ಭವಿಷ್ಯ ಬಹುತೇಕ ಮುಗಿದಂತೆ ಅಂತ ಕೆಲವರು ಮಾತಾಡಿಕ್ಕೊಳ್ಳುತ್ತಿದ್ದಾರೆ.

7 ವರ್ಷ ಶಿಕ್ಷೆ ಘೋಷಣೆಯಾದ ಬಳಿಕ ಜನಾರ್ಧನ ರೆಡ್ಡಿ ರಾಜಕೀಯ ಭವಿಷ್ಯವೇನು? ಅವರ ಮುಂದಿನ ನಡೆಯೇನು? ಎನ್ನುವ ಕುತೂಹಲ ಎಲ್ಲರಲ್ಲೂ ಮನೆ ಮಾಡಿತ್ತು. ಅದಕ್ಕೆ ಜನಾರ್ಧನ ರೆಡ್ಡಿ ಈಗ ಹೊಸ ಗಾಳವನ್ನು ಉರುಳಿಸಿದಂತೆ ಇದೆ. ಅದುವೇ 'ಜೂನಿಯರ್'. ಮಗನನ್ನು ಹೀರೋ ಮಾಡುವುದಕ್ಕೆ ರೆಡ್ಡಿ ಮೂರು ವರ್ಷಗಳ ಹಿಂದೆನೇ ಮುಹೂರ್ತ ಮಾಡಿದ್ದರು. ಅಲ್ಲಿಂದ ಮಗನ ಸಿನಿಮಾ ಶೂಟಿಂಗ್ ನಡೆಯುತ್ತಿದ್ದರೂ ಚಿಕ್ಕದೊಂದು ಸುಳಿವು ಕೂಡ ಇರಲಿಲ್ಲ, ಈಗ ಜನಾರ್ಧನ ರೆಡ್ಡಿ ಜೈಲು ಸೇರಿದಂತೆ ಪುತ್ರ ಕಿರೀಟಿಯ ಸಿನಿಮಾ ರಿಲೀಸ್‌ಗೆ ಮುಹೂರ್ತ ಫಿಕ್ಸ್ ಮಾಡಲಾಗಿದೆ. ಈ ಬೆಳವಣಿಗೆಯ ಹಿಂದೆ ರೆಡ್ಡಿಯ ರಾಜಕೀಯ ಲೆಕ್ಕಾಚಾರವೇನಾದರೂ ಇದೆಯಾ? ಎಂಬ ಪ್ರಶ್ನೆ ಹುಟ್ಟಿಕೊಂಡಿದೆ.

### ದಿಢೀರನೇ 'ಜೂನಿಯರ್' ಎಂಟ್ರಿ

2022ರಲ್ಲಿ ಜನಾರ್ಧನ ರೆಡ್ಡಿ ಮಗನನ್ನು ಹೀರೋ ಮಾಡುವುದಕ್ಕೆ ದೊಡ್ಡದಾಗಿ ಮುಹೂರ್ತ ಮಾಡಿದ್ದರು. ತೆಲುಗಿನ ದೊಡ್ಡ ನಿರ್ಮಾಣ ಸಂಸ್ಥೆ ವಾರಾಹಿ ಫಿಲ್ಮ್ ಪ್ರೊಡಕ್ಷನ್ ರೆಡ್ಡಿಯ ಪುತ್ರ ಕಿರೀಟಿ ಚೊಚ್ಚಲ ಸಿನಿಮಾ ನಿರ್ಮಾಣ ಮಾಡುವುದಕ್ಕೆ ಮುಂದೆ ಬಂದಿತ್ತು. ಕನ್ನಡದಲ್ಲಿ ಮಾಯಾಬಜಾರ್ ಸಿನಿಮಾವನ್ನು ನಿರ್ದೇಶಿಸಿದ್ದ ರಾಧಾಕೃಷ್ಣ ರೆಡ್ಡಿ ಆಕ್ಷನ್ ಕಟ್ ಹೇಳಿದ್ದಾರೆ. ಕಳೆದ ಮೂರು ವರ್ಷಗಳಿಂದ ಈ ಸಿನಿಮಾ ಮೇಕಿಂಗ್ ಆಗುತ್ತಲೇ ಇತ್ತು. ಆದರೆ, ಮೇಕಿಂಗ್ ಹಾಗೂ ರಿಲೀಸ್ ಬಗ್ಗೆ ಚಿಕ್ಕದೊಂದು ಸುಳಿವು ಕೂಡ ಇರಲಿಲ್ಲ, ಹೀಗಾಗಿ ಜನರು ಕೂಡ ಈ ಸಿನಿಮಾವನ್ನು ಬಹುತೇಕ ಮರೆತೇ ಬಿಟ್ಟಿದ್ದರು.

ಕಿರೀಟಿ ಸಿನಿಮಾ ಮುಹೂರ್ತದ ವೇಳೆ, ಎಸ್. ಎಸ್. ರಾಜಮೌಳಿ, ರವಿಚಂದ್ರನ್, ಜೆನಿಲಿಯಾ ದೇಶ್ ಮುಖ್ ಸೇರಿದಂತೆ ದೊಡ್ಡ ತಾರಾ ಬಳಗವೇ ಸೇರಿತ್ತು. ಆ ಒಂದಿಷ್ಟು ದಿನ ಶೂಟಿಂಗ್ ಮಾಡಲಾಗಿತ್ತು. ಅದರ ಮೇಕಿಂಗ್ ಕೂಡ ಹೊರಬಿದ್ದಿತ್ತು. ಅದು ಬಿಟ್ಟರೆ, ಮತ್ತೆ ಕಿರೀಟಿ ಸಿನಿಮಾ ಬಗ್ಗೆ ಚಿಕ್ಕದೊಂದು ಸುಳಿವು ಕೂಡ ಇರಲಿಲ್ಲ. ಆದರೀಗ ದಿಢೀರನೇ ಸಿನಿಮಾದ ರಿಲೀಸ್ ಡೇಟ್ ಅನ್ನು ಅನೌನ್ಸ್ ಮಾಡಲಾಗಿದೆ. ಜುಲೈ 18ಕ್ಕೆ ಸಿನಿಮಾ ರಿಲೀಸ್ ಎಂದು ಚಿತ್ರತಂಡ ಅನೌನ್ಸ್ ಕೂಡ ಮಾಡಿದೆ.

### ರ್ಾಜಕೀಯ ಲೆಕ್ಕಾಚಾರವಿದೆಯಾ?

ಹೀಗೆ ದಿಢೀರ್ ರಿಲೀಸ್ ಹಿಂದೆ ರಾಜಕೀಯ ಲೆಕ್ಕಾಚಾರವೇನಾದರೂ ಇದೆಯಾ? ಮೇಲ್ನೋಟಕ್ಕೆ ಜನಾರ್ಧನ್ ರೆಡ್ಡಿಯ ಒಂದೆರಡು ಲೆಕ್ಕಾಚಾರಗಳು ಹೀಗೂ ಇರಬಹುದೆಂದು ಊಹಿಸಲಾಗಿದೆ. ಮೇ 6 ರಂದು ಜನಾರ್ಧನ್ ರೆಡ್ಡಿಗೆ ಅಕ್ರಮ ಗಣಿಗಾರಿಕೆ ನಡೆಸಿದ್ದ ಹಿನ್ನೆಲೆಯಲ್ಲಿ ಹೈದರಾಬಾದ್‌ನ ನಾಂಪಲ್ಲಿ ಸಿಬಿಐ ನ್ಯಾಯಾಲಯ 7 ವರ್ಷ ಶಿಕ್ಷೆಯನ್ನು ಪ್ರಕಟಿಸಿದ್ದಾರೆ. ಈ ಸಂಬಂಧ ಜನಾರ್ಧನ ರೆಡ್ಡಿ ಈಗ ಜೈಲು ಸೇರಿದ್ದಾರೆ. ಬೆಳವಣಿಗೆ ಹಿನ್ನೆಲೆಯಲ್ಲಿ ಇವರ ಶಾಸಕ ಸ್ಥಾನ ಏನಾಗುತ್ತೆ? ಎನ್ನುವ ಪ್ರಶ್ನೆ ಅವರ ಬೆಂಬಲಿಗರನ್ನು ಕಾಡಿತ್ತು.



ಜನಾರ್ದನ ರೆಡ್ಡಿ ಅಕ್ರಮ ಗಣಿಗಾರಿಕೆ ಸಾಬೀತಾಗುತ್ತಿದ್ದಂತೆ ಶಾಸಕ ಸ್ಥಾನದಿಂದ ಅವರನ್ನು ಅನರ್ಹತೆಗೊಳಿಸಿ ಆದೇಶ ಹೊರಡಿಸಲಾಗಿದೆ. ವಿಧಾನಸಭೆಯ ಶಾಸಕ ಸ್ಥಾನದಿಂದ ಅನರ್ಹಗೊಳಿಸಿ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಆದೇಶಿಸಿದ್ದಾರೆ. ಈ ಆದೇಶ ಗಾಲಿ ಜನಾರ್ಧನ ರೆಡ್ಡಿಯ ರಾಜಕೀಯ ಭವಿಷ್ಯಕ್ಕೆ ದೊಡ್ಡ ಹಿನ್ನೆಡೆ ಎಂದೇ ಹೇಳುತ್ತಿದ್ದಾರೆ. ಈ ಆದೇಶದ ಪ್ರಕಾರ, ಜನಾರ್ಧನ ರೆಡ್ಡಿ ಇನ್ನೂ ಆರು ವರ್ಷ ಶಾಸಕತ್ವ ಸ್ಥಾನಕ್ಕೆ ಅನರ್ಹರಾಗಿದ್ದಾರೆ. ಹೀಗಾಗಿ ರೆಡ್ಡಿ ಶಾಸಕ ಸ್ಥಾನವನ್ನು ಕಳೆದುಕೊಂಡಿದ್ದಾರೆ. ಆ ಸ್ಥಾನಕ್ಕೆ ಮಗನನ್ನು ತರುವ ಯೋಚನೆ ಇರಬಹುದಾ? ಈಗ ಅನುಮಾನ ಹುಟ್ಟಿಕೊಂಡಿದೆ.

### ಉತ್ತರಾಧಿಕಾರಿ ಯಾರು?

ಕಳೆದ ಬಾರಿ ಜೈಲಿನಿಂದ ಹೊರ ಬಂದ ಮೇಲೆ ಬಿಜೆಪಿ ಪಕ್ಷದ ಮೇಲೆ ಮುನಿಸಿಕೊಂಡಿದ್ದರು. ಹೀಗಾಗಿ ಬಿಜೆಪಿ ತೊರೆದು, ತಮ್ಮದೇ ಸ್ವಂತ ಪಕ್ಷವನ್ನು ಸ್ಥಾಪಿಸಿದ್ದರು. ಈ ಪಕ್ಷದ ಮೂಲಕ ಚುನಾವಣಾ ಅಖಾಡಕ್ಕೆ ಇಳಿದು ಗಂಗಾವತಿ ಕ್ಷೇತ್ರದಿಂದ ಗೆದ್ದು ಬಂದಿದ್ದರು. ಗೆದ್ದ ಕೆಲವೇ ದಿನಗಳ ಬಳಿಕ ತಮ್ಮ ಪಕ್ಷವನ್ನು ವಿಲೀನಗೊಳಿಸಿ, ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದರು. ಆದರೀಗ ಮತ್ತೆ ಜೈಲು ಸೇರಿದ್ದರಿಂದ ಈ ಕ್ಷೇತ್ರಕ್ಕೆ ಮತ್ತೆ ಚುನಾವಣೆ ನಡೆಯುವ ಸಾಧ್ಯತೆಯಿದೆ.

ಒಂದು ವೇಳೆ ಆರು ತಿಂಗಳ ಒಳಗೆ ಜನಾರ್ಧನ ರೆಡ್ಡಿ ಜಾಮೀನು ಪಡೆಯಲು ಯಶಸ್ವಿಯಾದರೆ, ಅವರ ಶಾಸಕ ಸ್ಥಾನ ಉಳಿಯುತ್ತೆ. ಹಾಗೇನಾದರೂ ಆಗದೇ ಇದ್ದಲ್ಲಿ ಇನ್ನು ಆರು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧೆ ಮಾಡುವಂತಿಲ್ಲ, ಒಂದು ವೇಳೆ ಜಾಮೀನು ಸಿಗದೇ ಹೋದರೇ ಏನು? ಗಂಗಾವತಿ ಕ್ಷೇತ್ರವನ್ನು ಉಳಿಸಿಕೊಳ್ಳುವುದಕ್ಕೆ ಉತ್ತರಾಧಿಕಾರಿಯನ್ನು ಅಖಾಡಕ್ಕೆ ಇಳಿಸಲೇಬೇಕಿದೆ. ಸದ್ಯದ ಮಾಹಿತಿ ಪ್ರಕಾರ, ಪತ್ನಿ ಅರುಣಾ ಅವರನ್ನು ಬ್ಯಾಕಪ್ ಪ್ಲ್ಯಾನ್ ಆಗಿ ಇಟ್ಟುಕೊಂಡಿದ್ದಾರೆ ಎನ್ನುವ ವರದಿಗಳು ಕೂಡ ಹರಿದಾಡುತ್ತಿವೆ.

### ಕಿರೀಟಿ ರಾಜಕೀಯ ಎಂಟ್ರಿ?

ಮಗನ ಸಿನಿಮಾವನ್ನು ದಿಢೀರನೇ ರಿಲೀಸ್ ಮಾಡಲು ಹೊರಟಿದ್ದು ನೋಡಿದರೆ, ಜನಾರ್ಧನ ರೆಡ್ಡಿಯ ಲೆಕ್ಕಾಚಾರ ಬೇರೆನೇ ಇದ್ದಂತೆ ಇದೆ. ತಮ್ಮ ಮಗನನ್ನು ರಾಜಕೀಯದ ಮುನ್ನೆಲೆಗೆ ತರಲು ಈ ಪ್ರಯತ್ನ ಇರಬಹುದಾ? ಎಂಬುವ ಪ್ರಶ್ನೆ ಕೂಡ ಎದ್ದಿದೆ. ಯಾಕಂದ್ರೆ, ರೆಡ್ಡಿ ಜೈಲಿನೊಳಗೆ ಇರುವಾಗ ಮಗನ ಚೊಚ್ಚಲ ಸಿನಿಮಾ ರಿಲೀಸ್ ಆಗುವುದು ಎಂದರೇನು? ಒಂದು ವೇಳೆ ಆರು ತಿಂಗಳ ಒಳಗೆ ಜಾಮೀನು ಸಿಗುವ ಸೂಚನೆ ಇದ್ದಿದ್ದರೆ, ಖಂಡಿತಾ ಇನ್ನು ಆರು ತಿಂಗಳು ಕಾಯುತ್ತಿದ್ದರು. ಆದರೆ, ರೆಡ್ಡಿ ಜೈಲಿಗೆ ಸೇರಿ ಇನ್ನೂ ತಿಂಗಳಾಗಿಲ್ಲ, ಅಷ್ಟರಲ್ಲೇ ಕಿರೀಟಿ ಸಿನಿಮಾ ರಿಲೀಸ್‌ಗೆ ಅಸ್ತು ಎಂದಿದ್ದಾರೆ.

ಇತ್ತೀಚೆಗೆ ರಾಜಕಾರಣಿಗಳ ಮಕ್ಕಳು ರಾಜಕೀಯ ಅಖಾಡಕ್ಕೆ ಇಳಿಯುವುದಕ್ಕೂ ಮುನ್ನ ಮೊದಲು ಸಿನಿಮಾ ಮಾಡುತ್ತಾರೆ. ಕನ್ನಡದಲ್ಲಿ ಸಾಕಷ್ಟು ಉದಾಹರಣೆಗಳು ನಮ್ಮ ಮುಂದೆನೇ ಇವೆ. ಎಚ್.ಡಿ. ಕುಮಾರಸ್ವಾಮಿ ಪುತ್ರ ನಿಖಿಲ್ ಕೆಲ ಸಿನಿಮಾದಲ್ಲಿ ನಟಿಸಿದ ಬಳಿಕ ರಾಜಕೀಯಕ್ಕೆ ಧುಮುಕಿದ್ದಾರೆ. ಇತ್ತ ಕೃಷಿ ಸಚಿವ ಚೆಲುವರಾಯಸ್ವಾಮಿ ಪುತ್ರ ಸಚಿನ್ ಕೂಡ ಸಿನಿಮಾ ಮಾಡಿದ್ದರು. ಇತ್ತೀಚೆಗಷ್ಟೇ ರಾಜಕೀಯ ಅಖಾಡಕ್ಕೆ ಇಳಿದಿದ್ದಾರೆ. ಮಾಜಿ ಸಚಿವ ಎಚ್. ಎಂ. ರೇವಣ್ಣ ಪುತ್ರ ಅನೂಪ್ ಕೂಡ ಸಿನಿಮಾಗೆ ಎಂಟ್ರಿ ಕೊಟ್ಟು ಹಲವು ವರ್ಷಗಳಾಗಿವೆ. ಹಾಗೇ ಅಂಬರೀಶ್ ಪುತ್ರ ಅಭಿಷೇಕ್ ಕೂಡ ಸಿನಿಮಾ ಮಾಡುತ್ತಿದ್ದು, ಮೈಸೂರು ಭಾಗದಿಂದ ರಾಜಕೀಯ ಅಖಾಡಕ್ಕೆ ಇಳಿಯಲು ಇದು ಸಿದ್ಧತೆ ಎನ್ನಲಾಗಿದೆ. ಇದೇ ದಾರಿಯಲ್ಲಿಯೇ ರೆಡ್ಡಿ ಕೂಡ ಮಗನನ್ನು ಕರೆದುಕೊಂಡು ಹೋಗುತ್ತಿದ್ದರು ಅನ್ನೋದು ಬಲ್ಲ ಮೂಲಗಳು ಹೇಳುವ ಮಾತು.

ಮಗನ ಮೊದಲ ಸಿನಿಮಾ ಹಿಟ್ ಆಗಲೇಬೇಕು ಎಂದು ರೆಡ್ಡಿ ಪಣ ತೊಟ್ಟಿದ್ದರು. ಈ ಸಿನಿಮಾ ಪ್ರಮುಖವಾಗಿ ಕನ್ನಡ ಹಾಗೂ ತಮಿಳು ಎರಡು ಭಾಷೆಗಳನ್ನು ಟಾರ್ಗೆಟ್ ಮಾಡಿದೆ ಅನ್ನೋದು ಸುದ್ದಿ, ಆದರೆ, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಯಲ್ಲಿ ರಿಲೀಸ್ ಆಗುತ್ತಿದೆ. ರವಿಚಂದ್ರನ್, ಜೆನಿಲಿಯಾ, ಶ್ರೀಲೀಲಾದಂತಹ ದೊಡ್ಡ ತಾರಾಗಣವೇ 'ಜೂನಿಯರ್' ಸಿನಿಮಾದಲ್ಲಿ ಇದೆ. ಹೀಗಾಗಿ ಕಿರೀಟಿಯ ರಾಜಕೀಯ ಪ್ರವೇಶಕ್ಕೆ ಈ ಸಿನಿಮಾ ಮೊದಲ ಹೆಜ್ಜೆ ಎಂದು ನಂಬಲಾಗಿದೆ. ಜನಾರ್ಧನ ರೆಡ್ಡಿ ತಮ್ಮ ಮುಂದಿನ ರಾಜಕೀಯ ಕನಸನ್ನು ಮಗನ ಮೂಲಕ ಕಾಣುವುದಕ್ಕೆ 'ಜೂನಿಯರ್' ಅನ್ನು ಹೊರ ಬಿಟ್ಟಿದ್ದಾರಾ? ಈ ಪ್ರಶ್ನೆ ಎಲ್ಲರೂ ಹುಟ್ಟಿಕೊಂಡಿರುವುದಂತೂ ಸತ್ಯ.



# ಮೈತ್ರಿ ಮೂವಿಮೇಕರ್ಸ್ ಚಿತ್ರಕ್ಕೆ ಉಪೇಂದ್ರ ನಾಯಕ



ಕನ್ನಡದ ಸ್ಟಾರ್ ನಟ ಉಪೇಂದ್ರ ಬಹಳ ದಿನಗಳ ನಂತರ ಮತ್ತೆ ತೆಲುಗು ಚಿತ್ರರಂಗದತ್ತ ಮುಖ ಮಾಡಿದ್ದಾರೆ. ಅವರೀಗ ತೆಲುಗಿನ ಪುಷ್ಪ 2 ಚಿತ್ರವನ್ನು ನಿರ್ಮಿಸಿದ್ದ ಮೈತ್ರಿ ಮೂವಿಮೇಕರ್ಸ್ ಸಂಸ್ಥೆಯ ಜೊತೆ ಕೈ ಜೋಡಿಸಿದ್ದಾರೆ, ರಾಮ್ ಪೋತಿನೇನಿ ಅವರ ಹೊಸ ಸಿನಿಮಾದಲ್ಲಿ ಉಪೇಂದ್ರ ಅವರು ಕಾಣಿಸಿಕೊಂಡಿದ್ದಾರೆ. ಇದೀಗ ಉಪೇಂದ್ರ ಅವರ ಪಾತ್ರದ ಲುಕ್‌ಅನ್ನು ಚಿತ್ರತಂಡ ಅನಾವರಣ ಮಾಡಿದೆ. ರಾಮ್ ಪೋತಿನೇನಿ ನಟನೆಯ 22ನೇ ಸಿನಿಮಾದಲ್ಲಿ ಉಪೇಂದ್ರ ಅವರು ಸೂರ್ಯಕುಮಾರ್ ಎಂಬ ಪವರ್‌ಫುಲ್ ಪಾತ್ರದಲ್ಲಿ ಕಾಣಿಸಿಕೊಳ್ಳಿದ್ದಾರೆ. ಅವರ ಪಾತ್ರದ ಲುಕ್ ಸಖತ್ ಸ್ಟೈಲಿಶ್ ಆಗಿದೆ. ಇದರಲ್ಲಿ ಉಪೇಂದ್ರ ಶರ್ಟ್ ಮೇಲೆ ಜಾಕೆಟ್ ಹಾಕಿದ್ದು, ಕಣ್ಣಿಗೆ ಕೂಲಿಂಗ್ ಗ್ಲಾಸ್ ಧರಿಸಿದ್ದಾರೆ. ಅವರ ಬೆನ್ನಹಿಂದೆ ಕೂಡ ಲೈಟ್ ಮತ್ತು ಕ್ಯಾಮೆರಾ ಆನ್ ಆಗಿದೆ. ಹೀಗಾಗಿ ಚಿತ್ರದಲ್ಲಿಯೂ ಸಹ ಅವರು ಸೂಪರ್‌ಸ್ಟಾರ್ ಪಾತ್ರ ಮಾಡ್ತಿರಬಹುದಾ ಎಂದು ಊಹಿಸಬಹುದಾಗಿದೆ.

ಉಪೇಂದ್ರ ಅವರ ಪಾತ್ರದ ಗ್ಲಿಂಪ್ಸ್‌ನ್ನು ಮೇ 15ರಂದು ಅಂದರೆ ಇಂದು ರಿಲೀಸ್ ಮಾಡೋದಾಗಿ ಚಿತ್ರತಂಡ ತಿಳಿಸಿದೆ. ಈ ಹಿಂದೆ ಅನುಷ್ಕಾ ಶೆಟ್ಟಿ ನಟಿಸಿದ್ದ ಮಿಸ್ ಶೆಟ್ಟಿ ಮಿಸ್ಟರ್ ಪೋಲಿಶೆಟ್ಟಿ ಚಿತ್ರವನ್ನು ನಿರ್ದೇಶನ ಮಾಡಿದ್ದ ಮಹೇಶ್ ಬಾಬು ಪಿ. ಅವರು ಈಗ ರಾಮ್ ಪೋತಿನೇನಿ ಅವರ ಚಿತ್ರಕ್ಕೂ ಆಕ್ಷನ್ ಕಟ್ ಹೇಳ್ತಿದ್ದಾರೆ. ಉಪೇಂದ್ರ ಈಗಾಗಲೇ ಸೌತ್ ಸಿನಿಮಾಗಳಲ್ಲಿ ಕೆಲಸ ಮಾಡಿ ಪಳಗಿದ್ದಾರೆ. ಈ ಹಿಂದೆ ಅಲ್ಲು ಅರ್ಜುನ್ ನಟನೆಯ ಸನ್ ಆಫ್ ಸತ್ಯಮೂರ್ತಿ ಚಿತ್ರದಲ್ಲಿ ವಿಲನ್ ಆಗಿ ಅಬ್ಬರಿಸಿದ್ದರು. ಯುಐ ಚಿತ್ರ ಕೂಡ ತೆಲುಗು ವರ್ಷನ್‌ನಲ್ಲಿ ರಿಲೀಸ್ ಆಗಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿತ್ತು. ಅದಷ್ಟೇ ಅಲ್ಲ, ಸೂಪರ್ ಸ್ಟಾರ್ ತಲೈವಾ ರಜನಿಕಾಂತ್ ಅವರ ಜೊತೆ ಕೂಲಿ' ಸಿನಿಮಾದಲ್ಲೂ ಉಪೇಂದ್ರ ನಟಿಸುತ್ತಿದ್ದಾರೆ. ಹೀಗೆ ತೆಲುಗು, ತಮಿಳು ಎರಡು ಭಾಷೆಯಲ್ಲೂ ಉಪೇಂದ್ರ ಅವರು ನಟಿಸಿ ಸೈ ಎನಿಸಿಕೊಂಡಿದ್ದಾರೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 18.5.2025

# ನಿರ್ದೇಶಕ ರಾಜ್ ತೋಳಿನಲ್ಲಿ ಸಮಂತಾ!

ನಟಿ ಸಮಂತಾ ಹಾಗೂ ನಟ ನಾಗಚೈತನ್ಯಾ ಪ್ರೀತಿಸಿ ಮದುವೆ ಆಗಿದ್ದು ಬಳಿಕ ಇಬ್ಬರೂ ಡಿವೋರ್ಸ್ ಪಡೆದಿದ್ದು ಹಳೇ ಸುದ್ದಿ. ಶೋಭಿತಾ ಧುಲಿಪಾಲ ಜೊತೆ ಚೈತು ಎರಡನೇ ಮದುವೆ ಆಗಿದ್ದು ಕೂಡ ಜನ ಮರೆತುಬಿಟ್ಟರು. ನಿರ್ದೇಶಕ ರಾಜ್ ನಿಡಿಮೊರು ಜೊತೆ ಸಮಂತಾ ಡೇಟಿಂಗ್ ನಡೆಸುತ್ತಿದ್ದಾರೆ ಎನ್ನುವುದೇ ಹೊಸ ಸುದ್ದಿ.



ಸ್ಯಾಮ್ ಹಾಗೂ ರಾಜ್ ತಮ್ಮಿಬ್ಬರ ರಿಲೇಷನ್‌ಶಿಪ್ ಬಗ್ಗೆ ಸೈಲೆಂಟ್ ಆಗಿಯೇ ಇದ್ದಾರೆ. ಆದರೆ ಒಟ್ಟೊಟ್ಟಿಗೆ ಅಲ್ಲಿ ಇಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ರಾಜ್ ತೋಳಿನಲ್ಲಿ ಇರುವಂತೆ ಸಮಂತಾ ಒಂದು ಫೋಟೊ ಹಂಚಿಕೊಂಡಿದ್ದರು. ತಿರುಪತಿಗೆ ಇಬ್ಬರೂ ಭೇಟಿ ನೀಡಿ ಪೂಜೆ ಸಲ್ಲಿಸಿದ್ದಾರೆ ಎಂದು ಇತ್ತೀಚೆಗೆ ಸುದ್ದಿ ಆಗಿತ್ತು. ಇದೆಲ್ಲದರ ನಡುವೆ ನಿರ್ದೇಶಕ ರಾಜ್ ಪತ್ನಿ ಶ್ಯಾಮಲಿ ಡೇ ಮಾಡಿರುವ ಪೋಸ್ಟ್ ವೈರಲ್ ಆಗುತ್ತಿದೆ.

ಗೂಡಾರ್ಥದ ಪೋಸ್ಟ್ ಅನ್ನು ಶ್ಯಾಮಲಿ ಡೇ ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ಹಾಕಿಕೊಂಡಿದ್ದಾರೆ. ಸಮಂತಾ ಹಾಗೂ ರಾಜ್ ಫ್ಲೈಟ್‌ನಲ್ಲಿ ಒಟ್ಟಿಗೆ ಪ್ರಯಾಣಿಸುತ್ತಾ ಕ್ಲಿಕ್ಕಿಸಿಕೊಂಡಿರುವ ಸೆಲ್ಫಿ ವೈರಲ್ ಆಗುತ್ತಿದ್ದಂತೆ ಶ್ಯಾಮಲಿ ಡೇ ಮಾಡಿರುವ ಪೋಸ್ಟ್ ಸಾಕಷ್ಟು ಕುತೂಹಲ ಮೂಡಿಸಿದೆ. ಅವರಿಬ್ಬರ ಫೋಟೊ ಬಗ್ಗೆಯೇ ಆಕೆ ಪರೋಕ್ಷವಾಗಿ ಪ್ರತಿಕ್ರಿಯಿಸಿದ್ರಾ? ಎನ್ನುವ ಚರ್ಚೆ ಶುರುವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಎಷ್ಟು ಬೇಗ ಲವ್ವಾಗುತ್ತೋ ಅಷ್ಟೇ ಬೇಗ ರಿಲೇಷನ್‌ಶಿಪ್ ಮುರಿದು ಬೀಳುತ್ತದೆ. ಒಬ್ಬರು ದೂರಾದರೂ ಎಂದು ಕೊರಗುತ್ತಾ ಕೂರುವವರ ಸಂಖ್ಯೆ ಕಮ್ಮಿ. ಅದರಲ್ಲೂ ಉಳ್ಳವರು ಮತ್ತೊಬ್ಬರಿಂದ ಪ್ರೀತಿಯ ಹುಡುಕಾಟ ನಡೆಸುತ್ತಾರೆ. ಅದೇ ಕಾರಣಕ್ಕೆ ಸೆಲೆಬ್ರೆಟಿಗಳ ರಿಲೇಷನ್‌ಶಿಪ್, ಮದುವೆ, ಡಿವೋರ್ಸ್ ಪದೇ ಪದೆ ಚರ್ಚೆಗೆ ಗ್ರಾಸವಾಗುತ್ತದೆ.

ನನ್ನ ಬಗ್ಗೆ ಯೋಚಿಸುವ, ನೋಡುವ, ನನ್ನ ಬಗ್ಗೆ ಕೇಳುವ, ನನ್ನೊಂದಿಗೆ ಮಾತನಾಡುವ, ನನ್ನ ಬಗ್ಗೆ ಮಾತನಾಡುವ, ನನ್ನ ಬಗ್ಗೆ ಓದುವ, ಬರೆಯುವ ಮತ್ತು ಇಂದು ನನ್ನನ್ನು ಭೇಟಿಯಾಗುವ ಪ್ರತಿಯೊಬ್ಬರಿಗೂ ನನ್ನ ಪ್ರೀತಿ ಹಾಗೂ ಆಶೀರ್ವಾದ ಎಂದು ಶ್ಯಾಮಲಿ ಡೇ ಬರೆದುಕೊಂಡಿದ್ದಾರೆ. ಯಾರ ಹೆಸರನ್ನು ತೆಗೆದುಕೊಳ್ಳದೇ ಆಕೆ ಪೋಸ್ಟ್ ಮಾಡಿದ್ದಾರೆ. ಆದರೆ ಪತಿ ರಾಜ್ ಹಾಗೂ ಸಮಂತಾ ಬಗ್ಗೆಯೇ ಈ ರೀತಿ ಪೋಸ್ಟ್ ಮಾಡಿರಬಹುದು ಎಂದು ನೆಟ್ಟಿಗರು ಕಾಮೆಂಟ್ ಮಾಡುತ್ತಿದ್ದಾರೆ.

ಹತ್ತು ವರ್ಷಗಳ ಹಿಂದೆ ನಿರ್ದೇಶಕ ರಾಜ್ ಹಾಗೂ ಶ್ಯಾಮಲಿ ಡೇ ಮದುವೆ ನಡೆದಿತ್ತು. ದಂಪತಿಗೆ ಒಬ್ಬ ಮಗಳು



ಇದ್ದಾಳೆ. ಬಾಲಿವುಡ್ ಸಿನಿಮಾಗಳಲ್ಲಿ ಸಹ ನಿರ್ದೇಶಕಿಯಾಗಿ ಆಕೆ ಕೆಲಸ ಮಾಡಿದ್ದರು. ಡಿವೋರ್ಸ್ ಪಡೆಯದೇ ಇದ್ದರು ರಾಜ್ ಹಾಗೂ ಶ್ಯಾಮಲಿ ಕೆಲ ವರ್ಷಗಳಿಂದ ಬೇರೆ ಬೇರೆಯಾಗಿ ವಾಸಿಸುತ್ತಿದ್ದಾರೆ ಎನ್ನಲಾಗ್ತಿದೆ. ಇದೆಲ್ಲದರ ನಡುವೆ ಇದೀಗ ಸ್ಯಾಮ್- ರಾಜ್ ಸೆಲ್ಫಿ ಬೆನ್ನಲ್ಲೇ ಆಕೆಯ ಪೋಸ್ಟ್ ವೈರಲ್ ಆಗುತ್ತಿದೆ.

ಸಮಂತಾ ನಿರ್ಮಾಣದ 'ಶುಭಂ' ಎಂಬ ಸಿನಿಮಾ ಕಳೆದ ವಾರ ತೆರೆಗೆ ಬಂದಿತ್ತು. ಈ ಹಾರರ್ ಕಾಮಿಡಿ ಚಿತ್ರಕ್ಕೆ ಒಳ್ಳೆ ರೆಸ್ಪಾನ್ಸ್ ಸಿಗುತ್ತಿದ್ದಂತೆ ಸಂತಸ ವ್ಯಕ್ತಪಡಿಸಿ ಸಮಂತಾ ಪೋಸ್ಟ್ ಮಾಡಿದ್ದಾರೆ. 'ಶುಭಂ' ಸಿನಿಮಾ ವೀಕ್ಷಿಸಿದ್ದಕ್ಕಾಗಿ, ಅನುಭವಿಸಿದ್ದಕ್ಕಾಗಿ ಮತ್ತು ನಮ್ಮೊಂದಿಗೆ ಆಚರಿಸಿದ್ದಕ್ಕಾಗಿ ಧನ್ಯವಾದಗಳು. ನಮ್ಮ ಮೊದಲ ಹೆಜ್ಜೆಗೆ ಒಳ್ಳೆ ಪ್ರತಿಕ್ರಿಯೆ ಸಿಕ್ಕಿದೆ ಎಂದು ಸ್ಯಾಮ್ ಬರೆದುಕೊಂಡಿದ್ದಾರೆ. ಸಿನಿಮಾ ಜರ್ನಿಯ ಭಾಗದಲ್ಲಿ ಕ್ಲಿಕ್ಕಿಸಿದ ಒಂದಷ್ಟು ಫೋಟೊಗಳನ್ನು ಹಂಚಿಕೊಂಡಿದ್ದಾರೆ.

'ಶುಭಂ' ಸಿನಿಮಾ ನಿರ್ಮಾಣದ ಸಂದರ್ಭದಲ್ಲಿ ರಾಜ್ ಕೂಡ ಸಮಂತಾ ಬೆಂಬಲಕ್ಕೆ ನಿಂತಿದ್ದರು. ಅದನ್ನು ಫೋಟೊಗಳಲ್ಲಿ ನೋಡಬಹುದು. ಅದೇ ರೀತಿ ವಿಮಾನದಲ್ಲಿ ಇಬ್ಬರು ಪ್ರಯಾಣಿಸುವಾಗ ಕ್ಲಿಕ್ಕಿಸಿದ್ದ ಫೋಟೊವನ್ನು ಸ್ಯಾಮ್ ಈಗ ಪೋಸ್ಟ್ ಮಾಡಿದ್ದಾರೆ. ಇದು ಇಬ್ಬರ ಡೇಟಿಂಗ್ ವದಂತಿಗೆ ಮತ್ತಷ್ಟು ಪುಷ್ಟಿ ಕೊಟ್ಟಿದೆ. ☯

# ರಾಜಕಾರಣಿಗಳೊಂದಿಗೆ ಡೇಟಿಂಗ್ ಆಫರ್!

ಬಿಗ್ ಬಾಸ್ ಕನ್ನಡ 10ರ ಸ್ಪರ್ಧಿ ನಮ್ರತಾ ಗೌಡಗೆ ರಾಜಕಾರಣಿಗಳೊಂದಿಗೆ ಡೇಟಿಂಗ್ ಮಾಡುವಂತೆ ವ್ಯಕ್ತಿಯೊಬ್ಬ ಆನ್ ಲೈನ್‌ನಲ್ಲಿ ಡೇಟಿಂಗ್ ಆಫರ್ ನೀಡಿದ್ದಾನೆ. ಇದನ್ನು ಸ್ಕ್ರೀನ್ ಶಾಟ್ ತೆಗೆದು ತನ್ನ ಇನ್‌ಸ್ಟಾಗ್ರಾಮ್‌ನಲ್ಲಿ ನಮ್ರತಾ ಶೇರ್ ಮಾಡಿದ್ದಾರೆ.

ರಾಕಿ ಜಿ43 ಹೆಸರಿನ ಇನ್‌ಸ್ಟಾಗ್ರಾಂ ಖಾತೆಯಿಂದ ಸಂದೇಶ ಕಳುಹಿಸಿರುವ ರೋಷನ್ ಎಂಬಾತ, ತನಗೆ ಸಾಕಷ್ಟು ರಾಜಕಾರಣಿಗಳ ಜೊತೆಗೆ ನಂಟಿದೆ. ರಾಜಕಾರಣಿಗಳ ಜೊತೆಗೆ ಡೇಟಿಂಗ್ ಮಾಡುವಂತೆ ನಮ್ರತಾರನ್ನು ಕೇಳಿದ್ದಾನೆ.

ನಿಮ್ಮ ಫೋನ್ ನಂಬರ್, ಫೋಟೋಗಳನ್ನು ಕಳುಹಿಸುವ ಅಗತ್ಯವಿಲ್ಲ. ಡೇಟಿಂಗ್‌ಗೆ ಬುಕ್ ಮಾಡ್ತೀನಿ, ಹೆಚ್ಚಿನ ಹಣ ಕೇಳಿದರೂ ಕೊಡಲು ಸಿದ್ಧನಿದ್ದೇನೆ ಎಂದು ಹೇಳಿದ್ದಾನೆ. 200% ಎಲ್ಲವೂ ಖಾಸಗಿ ಆಗಿರುತ್ತದೆ. ಯಾರಿಗೂ ಗೊತ್ತಾಗುವುದಿಲ್ಲ, ಸೇಫ್ ಆಗಿರುತ್ತದೆ ಎಂದು ನಾಲ್ಕು ಬಾರಿ ಸಂದೇಶವನ್ನು ನಟಿಗೆ ಕಳುಹಿಸಿದ್ದಾರೆ. ಇದರಿಂದ ಸಿಡಿದೆದ್ದ ನಮ್ರತಾ ಗೌಡ ಇದೀಗ ಒಂದು ಸ್ಕ್ರೀನ್ ಶಾಟ್ ಅನ್ನು ತಮ್ಮ ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ಪೋಸ್ಟ್ ಮಾಡಿಕೊಂಡಿದ್ದಾರೆ.


ಮಿಸ್ಟರ್ ರೋಷನ್ ಇದನ್ನು ಇಲ್ಲಿಗೆ ನಿಲ್ಲಿಸಿ ಎಂದು ನಮ್ರತಾ ಗೌಡ ಸ್ಕ್ರೀನ್‌ಶಾಟ್ ಹಂಚಿಕೊಂಡು ಎಚ್ಚರಿಕೆ ನೀಡಿದ್ದಾರೆ. ನಮ್ರತಾ ಗೌಡ ಅವರು ಸದ್ಯ 'ಕರ್ಣ' ಸೀರಿಯಲ್‌ನಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ನಾಯಕ ಕಿರಣ್‌ರಾಜ್, ಭವ್ಯಾ ಗೌಡ ಜೊತೆ ಕಾಣಿಸಿಕೊಂಡಿದ್ದಾರೆ. ಶ್ರುತಿ ನಾಯ್ಡು ಈ ಧಾರವಾಹಿಯ ನಿರ್ಮಾಪಕಿಯಾಗಿದ್ದಾರೆ. ☯



# ರಾತ್ರಿವೇಳೆ ಮೆಜೆಸ್ಟಿಕ್ ಸುತ್ತಾಡಿದ ದುನಿಯಾ ವಿಜಯ್ ಪುತ್ರಿ ಮೊನಿಷಾ!

ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ಹಗಲು ಕಂಡಂತೆ ರಾತ್ರಿ ಇರೋದಿಲ್ಲ, ಅಲ್ಲಿ ರಾತ್ರಿಹೊತ್ತು ನಡೆಯೋ ವಿದ್ಯಮಾನಗಳೇ ಬೇರೆ, ಅಂಥಾ ಮೆಜೆಸ್ಟಿಕ್ ಏರಿಯದಲ್ಲಿ ಅದೂ ರಾತ್ರಿಹೊತ್ತು ಓಡೋಡೊಕೆ ಗಂಡು ಮಕ್ಕಳೇ ಹೆದರಿಕೊಳ್ತಾರೆ, ಹೆಣ್ಣು ಮಕ್ಕಳಂತೂ ಒಬ್ಬರೇ ರಾತ್ರಿವೇಳೆ ಆಕಡೆ ಹೋಗೋದೇ ಇಲ್ಲ, ಇಂಥ ಮೆಜೆಸ್ಟಿಕ್‌ನಲ್ಲಿ ಅದೂ ವಿರಳ ಜನಸಂಖ್ಯೆ ಇರುವ ಮಧ್ಯರಾತ್ರಿಯಲ್ಲಿ ನಟ ದುನಿಯಾ ವಿಜಯ್ ಅವರ ಮಗಳು ಮೋನಿಷಾ ಒಬ್ಬರೇ ಅಲೆದಾಡಿ ಬಂದಿದ್ದಾರೆ.

ಮೋನಿಷಾ ಸ್ಟಾರ್ ನಟನ ಮಗಳು ಎಂದು ಅರಿಯದ ಜನ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದಾರೆ. ಮೋನಿಷಾ ಮಧ್ಯರಾತ್ರಿ ಅಲೆದಾಡಿದ್ದು ಸಿಟಿ ಲೈಟ್ಸ್ ಸಿನಿಮಾಗಾಗಿ. ಅವರ ಮೆಜೆಸ್ಟಿಕ್ ಅಲೆದಾಟವನ್ನು ತೆರೆಮರೆಯಲ್ಲೇ ಕೂತು ಸೆರೆಹಿಡಿದಿದೆ ಚಿತ್ರದ ಕ್ಯಾಮರಾ ತಂಡ.



ನಟ ವಿಜಯ್ ತಮ್ಮ ಮಗಳೇ ಸಿಟಿಲೈಟ್ಸ್ ಚಿತ್ರದ ಹಿರೋಯಿನ್ ಆಗಿದ್ದರೂ ಕಥೆಗೆ ಬೇಕಾದಂತೆ ಮಗಳ ಹಿಂದೆ ನಿಂತು ನಡುರಾತ್ರಿಯಲ್ಲಿ ಚಿತ್ರದ ಶೂಟಿಂಗ್ ಮಾಡಿದ್ದಾರೆ. ಈ ಅದ್ಭುತ ಸನ್ನಿವೇಶಗಳ ಝಲಕನ್ನು ಅವರು ಮಗಳ ಹುಟ್ಟುಹಬ್ಬದ ದಿನ ರಿಲೀಸ್ ಮಾಡಿದ್ದಾರೆ, ಈ ಟೀಸರ್, ಸಿನಿಮಾ ಎಷ್ಟು ನೈಜವಾಗಿ ಮೂಡಿಬರಲಿದೆ ಅನ್ನೋದನ್ನು ತೋರಿಸಿದ್ದು, ಇದರ ಬಹುತೇಕ ದೃಶ್ಯಗಳು ರಾತ್ರಿಯಲ್ಲೇ ಚಿತ್ರೀಕರಣವಾಗಿವೆ. ಈ ಸಿನಿಮಾದ ಹೆಚ್ಚಿನ ದೃಶ್ಯಗಳನ್ನು ಹೀಗೆಯೇ ನೈಜವಾಗಿ ಸೆರೆ ಹಿಡಿಯಲಾಗುತ್ತಿದೆ ಎಂದು ದುನಿಯಾ ವಿಜಯ್ ಅವರು ಹೇಳಿದ್ದಾರೆ. ಜನರಿಗೆ ಗೊತ್ತಾಗದ ರೀತಿಯಲ್ಲಿ ಜನರ ನಡುವೆಯೇ ಸಿಟಿ ಲೈಟ್ಸ್ ಚಿತ್ರದ ಚಿತ್ರೀಕರಣವನ್ನು ನಡೆಸಲಾಗುತ್ತಿದೆ. ನಾನು ಮತ್ತು ಕೇವಲ ಇಬ್ಬರು ಕ್ಯಾಮರಾಮನ್‌ಗಳು ಮೆಜೆಸ್ಟಿಕ್‌ನಲ್ಲಿ ಮೂರು ರಾತ್ರಿ ಈ ಸೀನನ್ನು ಚಿತ್ರೀಕರಿಸಿದ್ದೇವೆ. ಜನರಿಗೆ ಇದು ಗೊತ್ತಾಗದ ಕಾರಣ ಸನ್ನಿವೇಶಗಳು ಚೆನ್ನಾಗಿ ಶೂಟ್ ಆಗಿವೆ. ಈಗಾಗಲೇ ಸಿಟಿ ಲೈಟ್ಸ್ ಚಿತ್ರಕ್ಕೆ 25 ದಿನಗಳ ಶೂಟಿಂಗ್ ಮುಗಿದಿದ್ದು, ನೋಡುಗರಿಗೆ ಈ ಚಿತ್ರ ಬೇರೆಯದ್ದೇ ಫೀಲ್ ನೀಡಲಿದೆ ಎಂದು ನಿರ್ದೇಶಕರಾದ ವಿಜಯ್‌ಕುಮಾರ್ ಹೇಳುತ್ತಾರೆ.

ಮೆಜೆಸ್ಟಿಕ್‌ನಲ್ಲಿ ಮಧ್ಯರಾತ್ರಿ ದುನಿಯಾ ವಿಜಯ್ ಜತೆಗೆ ಕ್ಯಾಮರಾಮನ್ ಹರ್ಷಕುಮಾರ್‌ಗೌಡ ಮತ್ತವರ ಜತೆಗೆ ಇಬ್ಬರು ಕ್ಯಾಮರಾ ಸಹಾಯಕರಷ್ಟೇ ಇದ್ದು, ನೈಜ ಸನ್ನಿವೇಶಗಳನ್ನು ಸೆರೆ ಹಿಡಿದಿದ್ದಾರೆ. ದುನಿಯಾ ವಿಜಯ್ ಅವರ ಮಗಳು ಮೋನಿಷಾ ತನ್ನ ಮೊದಲ ಸಿನಿಮಾದಲ್ಲೇ ಚಾಲೆಂಜಿಂಗ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ತಂದೆಯಂತೆ ರಿಯಲಿಸ್ಟಿಕ್ ಆಗಿ ಜನರಿಗೆ ಇಷ್ಟವಾಗಲಿದ್ದಾರೆ. ಇದರಲ್ಲಿ ಮೋನಿಷಾ ಅವರ ಜೋಡಿಯಾಗಿ ವಿನಯ್ ರಾಜಕುಮಾರ್ ನಟಿಸಿದ್ದಾರೆ. ಚಿತ್ರಕ್ಕೆ ಚರಣ್ ರಾಜ್ ಅವರ ಸಂಗೀತ ಸಂಯೋಜನೆ, ಮಾಸ್ತಿ ಅವರ ಸಂಭಾಷಣೆ, ವಿನೋದ್, ನರಸಿಂಹ ಅವರ ಸಾಹಸ ನಿರ್ದೇಶನವಿದೆ. ☯

Vol. 40 No. 50 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 📱 9513892666
Email: policenewsreporter@gmail.com